www.KannadaPrabha.in | ಸೋಮವಾರ 4.05.2026 | • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ | Kannada Prabha • Daily • Monday • 04.05.2026 • Volume 60 • Issue 123 • Pages 10+2 • Price ₹7 | Mangaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಇಂದಿನ ಸ್ಪೆಷಲ್! ಪುಟದಲ್ಲಿಂದು

ತಮಿಳಿನ ಹೊಸ ಚಿತ್ರದಲ್ಲಿ ಶಿವಣ್ಣಗೆ ತಂದೆಯ ಪಾತ್ರ?

ಮತ್ತೊಂದು ತಮಿಳು ಚಿತ್ರದಲ್ಲಿ ಶಿವರಾಜ್‌ಕುಮಾರ್ ನಟನೆ. 'ಟೂರಿಸ್ಟ್ ಫ್ಯಾಮಿಲಿ' ಸಿನಿಮಾ ಖ್ಯಾತಿಯ ನಟ ಹಾಗೂ ನಿರ್ದೇಶಕ ಅಭಿಷನ್ ಜೀವಿಂದ್ ಅವರಿಗೆ ತಂದೆ ಪಾತ್ರದಲ್ಲಿ ಶಿವಣ್ಣ ನಟಿಸಲಿದ್ದಾರೆ ಎನ್ನುತ್ತಿವೆ ವರದಿಗಳು. 10



ಖಲಿಸ್ತಾನಿ ಧ್ವಜ ಪ್ರದರ್ಶಿಸಿದ್ದಕ್ಕೆ ಸಿಟ್ಟು: ಗಾಯನ ನಿಲ್ಲಿಸಿದ ದಿಲ್ಜೀತ್ ↘ 7



ಹಜ್ ವಿಮಾನ ಪ್ರಯಾಣದ ದರ ₹10000 ಏರಿಕೆಗೆ ಕಾಂಗ್ರೆಸ್ ಕಿಡಿ ↘ 7



ಕಪಿಲ್ ಶರ್ಮಾ ಕೆನಡಾ ಕೆಫೆ ಬಳಿ ಬಿಷ್ಣೋಯಿ ಗ್ಯಾಂಗ್ ಗುಂಡು ↘ 7



ಬಿಜೆಪಿ ಅಲ್ಪಮತದಲ್ಲಿ ಗೆದ್ರೆ ಮರು ಮತ ಎಣಿಕೆಗೆ ಪಟ್ಟು: ದೀದಿ ಕರೆ ↘ 7

ಇಂದು 5 ರಾಜ್ಯಗಳ ಚುನಾವಣಾ ಫಲಿತಾಂಶ

ಪಂಚ ಗದ್ದುಗೆ ಯಾರಿಗೆ?

ಬಂಗಾಳದ ಮಮತಾ ಭದ್ರಕೋಟೆಯನ್ನು ಬಿಜೆಪಿ ಛಿದ್ರಮಾಡುತ್ತಾ? ತ.ನಾಡಲ್ಲಿ ಸ್ಟಾಲಿನ್‌ಗೆ ಪಳನಿ, ವಿಜಯ್ ಪೈಕಿ ಏಟು ನೀಡೋರ್‍ಯಾರು? ಅಸ್ಸಾಂ ಬಿಜೆಪಿಗೆ? ಕೈಗೆ ಕೇರಳ? ಪುದುಚೇರಿಗೆ ಮತ್ತೆ ರಂಗಸಾಮಿ?

• **ಪಿಟಿಐ** ನವದೆಹಲಿ

ದೇಶದಲ್ಲಿ ರಾಜಕೀಯ ಧ್ರುವೀಕರಣಕ್ಕೆ ನಾಂದಿ ಹಾಡಬಹುದು ಎಂದು ನಿರೀಕ್ಷಿಸಲಾಗಿರುವ ಅಸ್ಸಾಂ, ಪ.ಬಂಗಾಳ, ಕೇರಳ, ತಮಿಳುನಾಡು ಹಾಗೂ ಪುದುಚೇರಿ ವಿಧಾನಸಭೆ ಚುನಾವಣೆಯ ಮತ ಎಣಿಕೆ ಸೋಮವಾರ ಬೆಳಗ್ಗೆ 8 ಗಂಟೆಯಿಂದ ಆರಂಭವಾಗಲಿದ್ದು, ಮಧ್ಯಾಹ್ನ ಅಥವಾ ಸಂಜೆಯ ಹೊತ್ತಿಗೆ ನಿಚ್ಚಳ ಫಲಿತಾಂಶ ಹೊರಬೀಳಲಿದೆ.



ಅಸ್ಸಾಂನಲ್ಲಿ ಬಿಜೆಪಿ-ಕಾಂಗ್ರೆಸ್, ತಮಿಳುನಾಡಿನಲ್ಲಿ ಅಣ್ಣಾಡಿಎಂಕೆ-ಬಿಜೆಪಿ ಕೂಟ, ಡಿಎಂಕೆ-ಕಾಂಗ್ರೆಸ್ ಕೂಟ ಹಾಗೂ ವಿಜಯ್ ಅವರ ಟಿವಿಕೆ, ಕೇರಳದಲ್ಲಿ ಯುಡಿಎಫ್, ಎಲ್‌ಡಿಎಫ್, ಬಿಜೆಪಿ, ಪ.ಬಂಗಾಳದಲ್ಲಿ ಟಿಎಂಸಿ- ಬಿಜೆಪಿ ಹಾಗೂ ಪುದುಚೇರಿಯಲ್ಲಿ ಎನ್‌ಡಿಎ ಹಾಗೂ ಇಂಡಿಯಾ ಕೂಟಗಳ ನಡುವೆ ಹಣಾಹಣಿ ಏರ್ಪಟ್ಟಿದೆ.

ಇದರ ಜತೆಗೆ ಈ ಬಾರಿ ಸಾಂಪ್ರದಾಯಿಕ ರೀತಿಯಲ್ಲಿ ಚುನಾವಣೋತ್ತರ ಸಮೀಕ್ಷೆಗಳು ಪ್ರಕಟವಾಗದೇ ಅಚ್ಚರಿ ಫಲಿತಾಂಶದ ಭವಿಷ್ಯ ನುಡಿದಿವೆ. ಹೀಗಾಗಿ ಅವು ನಿಜವಾಗಲಿವೆಯೇ ಎಂಬುದು ಎಣಿಕೆ ಬಳಿಕ ಗೊತ್ತಾಗಲಿದೆ. ಹಾಗೆಯೇ ಕೆಲವು ರಾಜ್ಯಗಳ ವಿಧಾನಸಭೆ ಹಾಗೂ ಲೋಕಸಭೆ ಉಪಚುನಾವಣಾ ಮತ ಎಣಿಕೆ ಕೂಡ ಸೋಮವಾರವೇ ನಡೆಯಲಿದೆ.

ಅಸ್ಸಾಂ: ಅಸ್ಸಾಂನಲ್ಲಿ ಬಿಜೆಪಿ 3ನೇ ಬಾರಿ ಗೆಲ್ಲುವ ತವಕದಲ್ಲಿದ್ದರೆ, ಕಾಂಗ್ರೆಸ್ ಪಕ್ಷ 10 ವರ್ಷಗಳ ಜಯದ ಬರ ನೀಗಿಸುವ ಇರಾದೆಯನ್ನು ಹೊಂದಿದೆ. ↘ 10

ಪಶ್ಚಿಮ ಬಂಗಾಳ	
ಒಟ್ಟು ಸ್ಥಾನ	294
ಬಹುಮತಕ್ಕೆ	148

ತಮಿಳುನಾಡು	
ಒಟ್ಟು ಸ್ಥಾನ	234
ಬಹುಮತಕ್ಕೆ	118

ಕೇರಳ	
ಒಟ್ಟು ಸ್ಥಾನ	140
ಬಹುಮತಕ್ಕೆ	71

ಅಸ್ಸಾಂ	
ಒಟ್ಟು ಸ್ಥಾನ	126
ಬಹುಮತಕ್ಕೆ	64

ಪುದುಚೇರಿ	
ಒಟ್ಟು ಸ್ಥಾನ	30
ಬಹುಮತಕ್ಕೆ	16

ಪಂಚರಾಜ್ಯ ಚುನಾವಣೆ ಮೇಲೆ 245 ಕೋಟಿ ರುಪಾಯಿ ಬೆಟ್ಟಿಂಗ್ ↘ 7

ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳು ಯಾರ ಮಡಿಲಿಗೆ?

ಕಾಂಗ್ರೆಸ್, ಬಿಜೆಪಿ ನಡುವೆ ನೇರ ಹಣಾಹಣಿ ಬೆಳಗ್ಗೆ 8ರಿಂದ ಎಣಿಕೆ, 12ರ ವೇಳೆಗೆ ರಿಸಲ್ಟ್

• **ಕನ್ನಡಪ್ರಭ ವಾರ್ತೆ** ದಾವಣಗೆರೆ / ಬಾಗಲಕೋಟೆ:

ಭಾರೀ ಕುತೂಹಲಕ್ಕೆ ಕಾರಣವಾಗಿದ್ದ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಮತಗಳ ಎಣಿಕೆ ಸೋಮವಾರ ನಡೆಯಲಿದೆ. ದಾವಣಗೆರೆ ದಕ್ಷಿಣದಲ್ಲಿ ಕಾಂಗ್ರೆಸ್‌ನ ಶಾಮನೂರು ಶಿವಶಂಕರಪ್ಪ ಹಾಗೂ ಬಾಗಲಕೋಟೆಯಲ್ಲಿ ಕಾಂಗ್ರೆಸ್‌ನ ಎಚ್.ವೈ.ಮೇಟಿ ಅವರ ನಿಧನದಿಂದ ಸ್ಥಾನಗಳು ತೆರವಾಗಿದ್ದು, ಏ.9ರಂದು ಮತದಾನ ನಡೆದಿತ್ತು.

ದಾವಣಗೆರೆ ದಕ್ಷಿಣ ಕ್ಷೇತ್ರದ ಮತಗಳ ಎಣಿಕೆ ನಗರದ ಡಿ.ಆರ್.ಆರ್.ವಿದ್ಯಾಸಂಸ್ಥೆಯಲ್ಲಿ, ಬಾಗಲಕೋಟೆ ಕ್ಷೇತ್ರದ ಮತಗಳ ಎಣಿಕೆ ನಗರದ ತೋಟಗಾರಿಕೆ ವಿವಿಯಲ್ಲಿ ನಡೆಯಲಿದೆ. ಬೆಳಗ್ಗೆ 8 ಗಂಟೆಗೆ ಪೋಸ್ಟಲ್ ಬ್ಯಾಲೆಟ್ ಎಣಿಕೆ ಆರಂಭವಾಗಲಿದ್ದು, 8.30ಕ್ಕೆ ಇವಿಎಂ ಯಂತ್ರಗಳ ಎಣಿಕೆ ಕಾರ್ಯ ಶುರುವಾಗಲಿದೆ. ಮಧ್ಯಾಹ್ನ 12 ಗಂಟೆಯ ವೇಳೆಗೆ ಅಂತಿಮ ಫಲಿತಾಂಶ ಲಭ್ಯವಾಗುವ ನಿರೀಕ್ಷೆಯಿದೆ.

ಮುಂಜಾಗ್ರತಾ ಕ್ರಮವಾಗಿ ಮತ ಎಣಿಕೆ ಕೇಂದ್ರದ ಗೇಟಿನಿಂದ ಸುತ್ತಮುತ್ತಲಿನ 100 ಮೀಟರ್‌ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದ್ದು, ಮತ ಎಣಿಕೆ ಕೇಂದ್ರದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. ↘ 10



ಸಮರ್ಥ್



ಶ್ರೀನಿವಾಸ



ವೀರಣ್ಣ ಚರಂತಿಮಠ



ಉಮೇಶ್ ಮೇಟಿ

ಶೃಂಗೇರಿ ಮರುಎಣಿಕೇಲಿ ಅಚ್ಚರಿ

ರಾಜೇಗೌಡಗಿಂತ ಜೀವರಾಜ್‌ಗೆ 52 ಮತಗಳ ಲೀಡ್!

201 ಮತದಿಂದ ಗೆದ್ದಿದ್ದ ರಾಜೇಗೌಡ ಮರು ಎಣಿಕೆ ವೇಳೆ 255 ಮತ ಹಿನ್ನಡೆ ಮುಂದೇನು?: ಈಗ ಭಾರಿ ಕುತೂಹಲ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು

ತೀವ್ರ ಗೊಂದಲ, ಹೈಡ್ರಾಮಾ ನಡುವೆ ನಡೆದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ಕಾರ್ಯ ಶನಿವಾರ ತಡರಾತ್ರಿ ವೇಳೆಗೆ ಮುಕ್ತಾಯಗೊಂಡಿದೆ. 2023ರಲ್ಲಿ ಕಾಂಗ್ರೆಸ್ ಶಾಸಕ ಟಿ.ಡಿ.ರಾಜೇಗೌಡರು ಪಡೆದ ಮತಗಳ ಪೈಕಿ ಬರೋಬ್ಬರಿ 255 ಮತಗಳನ್ನು ಅಸಿಂಧು ಎಂದು ಪರಿಗಣಿಸಲಾಗಿದೆ. ಹೀಗಾಗಿ, ಪರಾಜಿತ ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್‌ಗೆ 52 ಮತಗಳ ಮುನ್ನಡೆ ಸಿಕ್ಕಿದೆ. ಹೀಗಾಗಿ ಮುಂದೇನು ಎಂಬ ಕುತೂಹಲ ವ್ಯಕ್ತವಾಗಿದೆ.




ಜೀವರಾಜ್



ರಾಜೇಗೌಡ

ಹೈಕೋರ್ಟ್ ಆದೇಶದ ಮೇರೆಗೆ ಅಂಚೆ ಮತ ಪತ್ರಗಳ ಮರು ಎಣಿಕೆ ನಡೆಸಿದ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಫಲಿತಾಂಶವನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್ ಮತ್ತು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದು, ಅಧಿಕೃತವಾಗಿ ಫಲಿತಾಂಶ ಪ್ರಕಟಿಸಿಲ್ಲ. ಎಣಿಕೆ ಪ್ರಕ್ರಿಯೆ ಮುಗಿದ ಬಳಿಕ ಮಾಹಿತಿ ನೀಡಿದ ಚುನಾವಣಾಧಿಕಾರಿ ಗೌರವ ಕುಮಾರ್ ಶೆಟ್ಟಿ, 2023ರ ಮತ ಎಣಿಕೆ ವೇಳೆ ಚಲಾವಣೆಯಾಗಿದ್ದ 1,822 ಅಂಚೆ ಮತಗಳ ಪೈಕಿ ಬಿಜೆಪಿ ಅಭ್ಯರ್ಥಿ ಜೀವರಾಜ್‌ಗೆ 692 ಮತ ಲಭಿಸಿದ್ದವು. ↘ 6

ಎಣಿಕೇಲಿ ಷಡ್ಯಂತ್ರ



ಶೃಂಗೇರಿ ಮತ ಎಣಿಕೆ ವಿಚಾರದಲ್ಲಿ ಷಡ್ಯಂತ್ರ ಆಗಿದೆ.ಇಂಥ ಕ್ರಿಮಿನಲ್ ಚಟುವಟಿಕೆ ಮಾಡುತ್ತಾರೆಂದು ಯಾರೂ ಊಹಿಸಲಾಗಲ್ಲ. ಕಾನೂನು ಹೋರಾಟ ಮಾಡ್ತೇವೆ

• **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ಕೈ ಅಕ್ರಮ ಬಯಲು



ಅಧಿಕಾರಿಗಳ ಮೇಲೆ ಒತ್ತಡ ಹೇರಿ 'ಕೈ' ಅಕ್ರಮ ನಡೆಸಿದ್ದು ಶೃಂಗೇರಿಯಲ್ಲಿ ಬಯಲಾಗಿದೆ. ಈಗಲೂ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಫಲಿತಾಂಶ ಪ್ರಕಟಿಸದಂತೆ ಷಡ್ಯಂತ್ರ ರೂಪಿಸಿದ್ದಾರೆ.

• **ಬಿ.ವೈ.ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಸುಪ್ರೀಂನಲ್ಲಿ ಇಂದು ದರ್ಶನ್ ಜಾಮೀನು ಅರ್ಜಿಯ ವಿಚಾರಣೆ



ನವದೆಹಲಿ: ರೇಣುಕಾಸ್ವಾಮಿ ಕೊಲೆ ಕೇಸಲ್ಲಿ ನಟ ದರ್ಶನ್ ಸಲ್ಲಿಸಿರುವ ಜಾಮೀನು ಅರ್ಜಿ ಸೋಮವಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ. ವಿವರ ↘ 4

ಇರಾನ್ ಅನುಚಿತ ವರ್ತನೆ ತೋರಿದ್ರೆ ಮತ್ತೆ ದಾಳಿ: ಟ್ರಂಪ್

ವಾಷಿಂಗ್ಟನ್: ಸಂಘರ್ಷ ನಿವಾರಣೆಗೆ ಇರಾನ್ ಸಲ್ಲಿಸಿರುವ 14 ಅಂಶಗಳ ಹೊಸ ಸಂಧಾನ ಪ್ರಸ್ತಾಪ ಪರಿಶೀಲಿಸುತ್ತೇನೆ. ಆದರೆ 'ಒಂದು ವೇಳೆ ಇರಾನ್ ಅನುಚಿತವಾಗಿ ವರ್ತಿಸಿದರೆ ಅವರ ವಿರುದ್ಧ ಮತ್ತೆ ದಾಳಿ ನಡೆಸುತ್ತೇವೆ' ಎಂದು ಅಮೆರಿಕ ಅಧ್ಯಕ್ಷ ಟ್ರಂಪ್ ಎಚ್ಚರಿಸಿದ್ದಾರೆ. ವಿವರ ↘ 7

ರಾಜಸ್ಥಾನ ಐಪಿಎಲ್ ತಂಡ ₹15,600 ಕೋಟಿಗೆ ಮಾರಾಟ

ಮಿತ್ತಲ್, ಪೂನಾವಾಲಾ ಪಾಲು

ನವದೆಹಲಿ: ರಾಜಸ್ಥಾನ ರಾಯಲ್ಸ್ ಐಪಿಎಲ್ ತಂಡವನ್ನು ₹15600 ಕೋಟಿಗೆ ಉದ್ಯಮಿ ಲಕ್ಷ್ಮೀ ನಿವಾಸ್ ಮಿತ್ತಲ್, ಸೀರಂ ಇನ್ಸ್ಟಿಟ್ಯೂಟ್‌ನ ಪೂನಾವಾಲಾ ಜಂಟಿಯಾಗಿ ಖರೀದಿಸಿದ್ದಾರೆ. ಈ ಮೊದಲು ಉದ್ಯಮಿ ಕಲ್ ಸೊಮಾನಿ ಖರೀದಿಸುವುದಾಗಿ ವರದಿಯಾಗಿತ್ತು. ವಿವರ ↘ 8

ದೆಹಲಿಯಲ್ಲಿ ವಸತಿ ಸಮುಚ್ಚಯಕ್ಕೆ ಬೆಂಕಿ: 9 ಜನ ಸಜೀವ ದಹನ

ನವದೆಹಲಿ: 4 ಮಹಡಿಯ ವಸತಿ ಸಮುಚ್ಚಯಕ್ಕೆ ಬೆಂಕಿ ಬಿದ್ದ ಪರಿಣಾಮ, ಮಗು ಸೇರಿ 9 ಮಂದಿ ಸಜೀವ ದಹನವಾದ ಹೃದಯ ವಿದ್ರಾವಕ ಘಟನೆ ಪೂರ್ವ ದೆಹಲಿಯ ವಿವೇಕ ವಿಹಾರದ ಹಂತ-1ರಲ್ಲಿ ಭಾನುವಾರ ನಸುಕಿನ 4 ಗಂಟೆ ವೇಳೆಗೆ ನಡೆದಿದೆ. ವಿವರ ↘ 7

ವಿಮಾನದ ತುರ್ತು ದ್ವಾರ ತೆರೆದು ಹೊರಜಿಗಿದ ವ್ಯಕ್ತಿ!

ಚೆನ್ನೈ: ವಿಮಾನ ಲ್ಯಾಂಡ್ ಆಗಿ ಇನ್ನೂ ನಿಧಾನವಾಗಿ ಚಲಿಸುತ್ತಿರುವಾಗಲೇ ಪ್ರಯಾಣಿಕನೊಬ್ಬ ತುರ್ತು ನಿರ್ಗಮನ ದ್ವಾರವನ್ನು ತೆರೆದು ಹೊರಜಿಗಿದ ಘಟನೆ ಚೆನ್ನೈ ವಿಮಾನ ನಿಲ್ದಾಣದಲ್ಲಿ ಭಾನುವಾರ ನಡೆದಿದೆ. ಪ್ರಾಣಹಾನಿ ಸಂಭವಿಸಿಲ್ಲ. ವಿವರ ↘ 7

ಮಾನಸ ಸರೋವರ ಯಾತ್ರೆ ಮಾರ್ಗಕ್ಕೆ ನೇಪಾಳದಿಂದ ಕ್ಯಾತೆ

ಕಾಠ್ಮಂಡು: ಲಿಪುಲೇಖ್ ಪ್ರದೇಶದ ಮೂಲಕ ಭಾರತದ ಕೈಲಾಸ ಮಾನಸ ಸರೋವರ ಯಾತ್ರೆಗೆ ಅವಕಾಶ ನೀಡುವ ಕುರಿತು ಭಾರತ ಹಾಗೂ ಚೀನಾ ನಿರ್ಧಾರ ಮಾಡಿರುವುದಕ್ಕೆ ನೇಪಾಳ ಸರ್ಕಾರ ಕಳವಳ ವ್ಯಕ್ತಪಡಿಸಿದೆ. ವಿವರ ↘ 7

ಕೈ ಪಾಳೆಯದಲ್ಲೀಗ ಉಪಸಮರ ಲಾಭ-ನಷ್ಟದ ಲೆಕ್ಕಾಚಾರ ಶುರು

ಸಿದ್ದುಗೆ ಬಾಗಲಕೋಟೆ, ಡಿಕೆಶಿಗೆ ದಾವಣಗೆರೆ ಮಹತ್ವದ್ದು ರಿಸಲ್ಟ್‌ನಿಂದಾಗುವ ಪರಿಣಾಮ ಏನು?: ಪಕ್ಷದಲ್ಲಿ ಚರ್ಚೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಂಚರಾಜ್ಯ ಚುನಾವಣೆ ಫಲಿತಾಂಶ ಜತೆಗೆ ರಾಜ್ಯದಲ್ಲಿ ತೀವ್ರ ಕುತೂಹಲ ಮೂಡಿಸಿದ್ದ ಎರಡು ವಿಧಾನಸಭೆಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶವೂ ಸೋಮವಾರ ಹೊರ ಬೀಳಲಿದೆ. ಫಲಿತಾಂಶ ಹಾಗೂ ಅದರ ಮುಂದುವರೆದ ರಾಜಕೀಯ ಸಮೀಕರಣಗಳ ಕಾರಣಗಳಿಗೆ ಕಾಂಗ್ರೆಸ್ ವಲಯದಲ್ಲಿ ಈ ಫಲಿತಾಂಶದ ಬಗ್ಗೆ ತೀವ್ರ ಕುತೂಹಲ ಮನೆ ಮಾಡಿದೆ.



ಇತರೆ ಉಪ ಚುನಾವಣೆಗಳಿಗಿಂತ ಈ ಬಾರಿಯ ಉಪ ಚುನಾವಣೆ ಹೆಚ್ಚು ಸದ್ದು ಮಾಡಿತ್ತು. ಮುಸ್ಲಿಂ ಬಾಹುಳ್ಯವಿರುವ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಉಂಟಾದ ಟಿಕೆಟ್ ತಿಕ್ಕಾಟ ಇದಕ್ಕೆ ಕಾರಣವಾಗಿತ್ತು. ↘ 10

ನಾಯಕರ ಮೇಲೇನು ಪರಿಣಾಮ?

- ಎರಡೂ ಕ್ಷೇತ್ರಗಳಲ್ಲಿ ಗೆಲುವಿನ ನಿರೀಕ್ಷೆಯಲ್ಲಿರುವ ಆಡಳಿತಾರೂಢ ಕಾಂಗ್ರೆಸ್ ಪಾಳಯ
- ದಾವಣಗೆರೆ ಗೆದ್ದರೆ ಡಿಕೆಗೆ ಹಿರಿಮೆ, ಸೋತರೆ ಪಕ್ಷದ ಕೆಲ ಮುಸ್ಲಿಂ ಬಂಡಾಯ ನಾಯಕರ ತಲೆದಂಡ ಸಂಭವ
- ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಸೋತರೆ ಸಿಎಂ ಸಿದ್ದರಾಮಯ್ಯಗೆ ಅಲ್ಪ ಹಿನ್ನಡೆ ಆಗುವ ಸಾಧ್ಯತೆ
- ಎರಡೂ ಕಡೆ ಕಾಂಗ್ರೆಸ್ ಸೋತರೆ ನಾಯಕತ್ವ ಬದಲಾವಣೆಗೆ ಚರ್ಚೆಗೆ ಮತ್ತೆ ಇಂಬು ಸಾಧ್ಯತೆ
- ಆದರೆ ನಾಯಕತ್ವದ ಬದಲು ವಿಷಯದಲ್ಲಿ ರಿಸಲ್ಟ್‌ಗಿಂತ ರಾಹುಲ್‌ಗಾಂಧಿ ಮನದಾಳವೇ ಅಂತಿಮ
- ಹೀಗಾಗಿ ನಾಯಕತ್ವ ಬದಲಾಯಿಸುವಷ್ಟು ಪರಿಣಾಮ ಉಪಸಮರ ಫಲಿತಾಂಶಕ್ಕಿಲ್ಲ ಎಂಬದು ಲೆಕ್ಕಾಚಾರ

ಸಿಎಂ ಸ್ಥಾನಕ್ಕೆ ಸಿದ್ದುಗೆ ಖರ್ಗೆ ಮಾತ್ರ ಪರ್ಯಾಯ ನಾಯಕ: ರಾಯರೆಡ್ಡಿ

ಬದಲಾಗುವುದಾದ್ರೆ ಖರ್ಗೆ ಸೂಕ್ತ ಡಿಕೆ ಆಸೆಪಡಬಹುದು, ಆಗ್ಬೇಕಲ್ಲ?

• **ಕನ್ನಡಪ್ರಭ ವಾರ್ತೆ** ಕೊಪ್ಪಳ

ಸಿದ್ದರಾಮಯ್ಯ ಅವರೇ ಐದು ವರ್ಷವೂ ಮುಖ್ಯಮಂತ್ರಿ ಆಗಿರಬೇಕು ಎನ್ನುವುದು ನನ್ನ ಅಭಿಪ್ರಾಯ. ಹಾಗೊಂದು ವೇಳೆ ಅವರನ್ನು ಬದಲಾಯಿಸಬೇಕು ಎನ್ನುವುದಾದರೆ ಸಿದ್ದರಾಮಯ್ಯ ಅವರಿಗೆ ಪರ್ಯಾಯ ನಾಯಕ ಎಂದರೆ ಅದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾತ್ರ ಎಂದು ಸಿಎಂರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.




ಸುದ್ದಿಗಾರರ ಜತೆ ಮಾತನಾಡಿದ ಅವರು, ನಾನು ಈಗಲೂ ನನ್ನ ಹೇಳಿಕೆಗೆ ಬದ್ಧನಾಗಿದ್ದೇನೆ, ಸಿದ್ದರಾಮಯ್ಯ ಅವರೇ 5 ವರ್ಷ ಸಿಎಂ ಆಗಿರಬೇಕು. ಅವರ ಅಧಿಕಾರಾವಧಿಯಲ್ಲಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಎಲ್ಲ ವರ್ಗಗಳ ಹಿತ ಕಾಯುತ್ತಿದ್ದಾರೆ. ಹೀಗಾಗಿ, ಅವರೇ ಮುಂದುವರಿಯಬೇಕೆಂದು ನಾನು ಹೇಳಿದ್ದೇನೆಯೇ ಹೊರತು ನಾನು ಯಾರ ಬೆಂಬಲಿಗನೂ ಅಲ್ಲ, ನಾನು ಕಾಂಗ್ರೆಸ್ ಬೆಂಬಲಿಗ' ಎಂದರು. ↘ 5

ಪಾಕಿಸ್ತಾನ, ಚೀನಾ ಮೇಲೆ ಬೆಂಗ್ಳೂರು ಸ್ಯಾಟ್ಲೈಟ್ ಕಣ್ಣು

ಗ್ಯಾಲೆಕ್ಸ್‌ಐನಿಂದ ಆಪ್ಟೋಸಾರ್ ಉಪಗ್ರಹ ಡಬಲ್ ಕೆಮೆರಾದ ಬಳಕೆ ಇದೇ ಮೊದಲು

• **ಪಿಟಿಐ** ನವದೆಹಲಿ

ದೇಶ-ದೇಶಗಳ ನಡುವಿನ ಪೈಪೋಟಿ ಬಾಹ್ಯಾಕಾಶವನ್ನೂ ತಲುಪಿ, ಉಪಗ್ರಹ ಚಿತ್ರಗಳು ರಾಷ್ಟ್ರೀಯ ಭದ್ರತೆಯಲ್ಲಿ ಅತಿ ಪ್ರಮುಖವಾಗಿರುವಹೊತ್ತಿನಲ್ಲಿ, ಬೆಂಗ್ಳೂರು ಮೂಲದ ಸ್ಟಾರ್ಟಪ್ ಗ್ಯಾಲೆಕ್ಸ್‌ಐ, 'ದೃಷ್ಟಿ' ಎಂಬ ಸ್ವದೇಶಿ ಕಣ್ಗಾವಲು ಉಪಗ್ರಹವನ್ನು ಅಭಿವೃದ್ಧಿಪಡಿಸಿ ಅದನ್ನು ಅಮೆರಿಕದಿಂದ ಉಡಾವಣೆ ಮಾಡಿದೆ.



ಇದು ವಿಶ್ವದ ಮೊದಲ 'ಆಪ್ಟೋಸಾರ್' ಸ್ಯಾಟಲೈಟ್ ಎನಿಸಿದ್ದು, ಭಾರತದ ಕಣ್ಗಾವಲು ವ್ಯವಸ್ಥೆಯ ಬಲವರ್ಧನೆ, ಸ್ವಾವಲಂಬನೆಗೆ ಮಹತ್ವದ ಕೊಡುಗೆ ನೀಡಲಿದೆ. ವಿದೇಶಿ ಕಂಪನಿ ಮ್ಯಾಕ್ಸರ್‌ಗೆ ಸರಿಸಮನಾದಂಥ ಅತ್ಯಂತ ಹೈರೆಸಲ್ಯೂಷನ್ ಚಿತ್ರಗಳನ್ನು ರವಾನಿಸಲಿದೆ. ↘ 10

ನಮ್ಮ ಯುವಕರ ನಾವೀನ್ಯತೆಗೆ ಸಾಕ್ಷಿ

'ಗ್ಯಾಲಕ್ಸ್‌ಐ' ನ ಮಿಷನ್ ದೃಷ್ಟಿ ನಮ್ಮ ಬಾಹ್ಯಾಕಾಶ ಪ್ರಯಾಣದಲ್ಲಿ ಪ್ರಮುಖ ಸಾಧನೆಯಾಗಿದೆ. ವಿಶ್ವದ ಮೊದಲ ಆಪ್ಟೋಸಾರ್ ಉಪಗ್ರಹ ಮತ್ತು ಭಾರತದಲ್ಲಿ ಖಾಸಗಿಯಾಗಿ ನಿರ್ಮಿಸಲಾದ ಇದರ ಯಶಸ್ವಿ ಉಡಾವಣೆಯು ನಮ್ಮ ಯುವಕರ ನಾವೀನ್ಯತೆ ಮತ್ತು ರಾಷ್ಟ್ರ ನಿರ್ಮಾಣದ ಉತ್ಸಾಹಕ್ಕೆ ಸಾಕ್ಷಿಯಾಗಿದೆ.

• **ನರೇಂದ್ರ ಮೋದಿ** ಪ್ರಧಾನಿ

ಸಾಧನೆ | 2,400 ಚದರ ಮೀಟರ್ ಅಗಲದ ರಾಷ್ಟ್ರಧ್ವಜ ಪ್ರದರ್ಶಿಸಿ ದಾಖಲೆ | ಸ್ಕೂಬಾ ಇನ್‌ಸ್ಟ್ರಕ್ಟರ್ ಪರಿಣತಿ ಪಡೆದಿರುವ ಶರತ್

ಸಮುದ್ರದಾಳದಲ್ಲಿ ಅಶೋಕ್ ಪುತ್ರನ ಗಿನ್ನೆಸ್ ಸಾಹಸ!


ಅಂಡಮಾನ್ ಸಾಗರದಲ್ಲಿ ರಾಷ್ಟ್ರಧ್ವಜ ಅನಾವರಣ ದಾಖಲೆ | ಸಾಹಸಿಗರ ತಂಡದಲ್ಲಿ ಶರತ್ ಆರ್.ಅಶೋಕ್ ಭಾಗಿ

• **ಕನ್ನಡ ಪ್ರಭ ವಾರ್ತೆ** ಬೆಂಗಳೂರು

ಅಂಡಮಾನ್ ಮತ್ತು ನಿಕೋಬಾರ್‌ದ್ವೀಪ ಸಮೂಹದ ಸ್ವರಾಜ್ ದ್ವೀಪದ ಸಮುದ್ರದ ಆಳದಲ್ಲಿ ಶನಿವಾರ ನಡೆದ ಭಾರತದ ಅತಿ ದೊಡ್ಡ ತ್ರಿವರ್ಣ ಧ್ವಜ ಅನಾವರಣ ಮತ್ತು ಆ ಮೂಲಕ ಸೃಷ್ಟಿಯಾದ 'ಗಿನ್ನೆಸ್ ವರ್ಲ್ಡ್ ರೆಕಾರ್ಡ್'ನಲ್ಲಿ ಕನ್ನಡಿಗ ಶರತ್ ಆರ್.ಅಶೋಕ್ ಕೂಡಾ ಭಾಗಿಯಾಗಿದ್ದರು.

ಬೆಂಗಳೂರಿನ ಪ್ರತಿಭಾವಂತ ಸಾಹಸ ಕ್ರೀಡಾ ಪರಿಣಿತ ಶರತ್ ಆರ್.ಅಶೋಕ್ ಅವರು ಪಾಲ್ಗೊಳ್ಳುವ ಮೂಲಕ ಕರ್ನಾಟಕದ ಕೀರ್ತಿಯನ್ನು ರಾಷ್ಟ್ರಮಟ್ಟದಲ್ಲಿ ಎತ್ತಿ ಹಿಡಿದಿದ್ದಾರೆ. ಶರತ್, ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಅವರ ಪುತ್ರ.

ಶನಿವಾರ ನಡೆದ ಈ ಬೃಹತ್ ಕಾರ್ಯಾಚರಣೆಯಲ್ಲಿ ದೇಶದ ವಿವಿಧ ಭಾಗಗಳ ಸುಮಾರು 200ಕ್ಕೂ ಹೆಚ್ಚು ನುರಿತ ಸ್ಕೂಬಾ ಡೈವರ್‌ಗಳು ಭಾಗವಹಿಸಿದ್ದರು. ↘ 5



ಶನಿವಾರ ಅಂಡಮಾನ್ ಸಮುದ್ರದಾಳಲ್ಲಿ ರಾಷ್ಟ್ರಧ್ವಜ ಅನಾವರಣಗೊಂಡಿದ್ದು ಹೀಗೆ.



ಶರತ್ ಆರ್.ಅಶೋಕ್



ಸ್ಕೂಬಾ ಡೈವ್ ಪರಿಣತ ಶರತ್

ಶರತ್ ಆರ್.ಅಶೋಕ್ ಅವರು ಸಾಹಸ ಕ್ರೀಡಾ ಕ್ಷೇತ್ರದಲ್ಲಿ ಕಳೆದೊಂದು ದಶಕದಿಂದ ನಿರಂತರವಾಗಿ ತೊಡಗಿಸಿಕೊಂಡಿದ್ದು, ಅಪಾರ ಅನುಭವ ಹೊಂದಿದ್ದಾರೆ. ಆಟೋಮೊಬೈಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಇವರು, ಪ್ರಮಾಣೀಕೃತ 'ಡೈವ್ ಮಾಸ್ಟರ್' ಮತ್ತು ಸ್ಕೂಬಾ ಇನ್‌ಸ್ಟ್ರಕ್ಟರ್‌ಆಗಿ ಅಂತಾರಾಷ್ಟ್ರೀಯ ಮಟ್ಟದ ಪರಿಣತಿ ಪಡೆದಿದ್ದಾರೆ. ಜಲಸಾಹಸ ಮಾತ್ರವಲ್ಲದೆ, ಪ್ಯಾರಾಗ್ಲೈಡಿಂಗ್, ಪ್ಯಾರಾಮೋಟರ್, ಮೋಟೋಕ್ರಾಸ್ ಮತ್ತು ಪರ್ವತಾರೋಹಣದಲ್ಲೂ ಶರತ್ ಪರಿಣತಿ ಹೊಂದಿದ್ದಾರೆ.

ಬದುಕಿನ ಗೌರವದ ಸಂದರ್ಭ

ತ್ರಿವರ್ಣ ಧ್ವಜವು 140 ಕೋಟಿ ಭಾರತೀಯರ ಶಕ್ತಿ, ಏಕತೆಯ ಪ್ರತೀಕ. ಸಾಹಸ ನನ್ನ ಆಸಕ್ತಿಯಾಗಿದ್ದು, ಅಲೆಗಳ ಅಂತರಾಳದಲ್ಲಿ ರಾಷ್ಟ್ರಧ್ವಜ ಅರಳಿಸಿದ ಆ ಕ್ಷಣ ನನ್ನ ಬದುಕಿನ ಅತ್ಯಂತ ಗೌರವದ ಸಂದರ್ಭ. ವನ್ಯಜೀವಿ ಸಂರಕ್ಷಣೆ, ಸಾಹಸ ಕ್ರೀಡೆಯಲ್ಲಿನ ನನ್ನ ಅನುಭವ ಈ ಸಾಧನೆಯಲ್ಲಿ ಭಾಗಿಯಾಗಲು ನನಗೆ ಸ್ಫೂರ್ತಿ

• **ಶರತ್ ಆರ್. ಅಶೋಕ್** ಸಾಹಸ ಕ್ರೀಡಾಪಟು

ಪುತ್ರಿಯ ಮೊಬೈಲ್ ಗೀಳು ತಡೆಗೆ ಗುಜರಾತಲ್ಲಿ ಅಪ್ಪನಿಂದ ನಾಲ್ಕು ಬೌನ್ಸರ್‌ಗಳ ನೇಮಕ!

ಅಹಮದಾಬಾದ್: ಸೋಶಿಯಲ್ ಮೀಡಿಯಾ ಗೀಳು ಹತ್ತಿಸಿಕೊಂಡ 16 ವರ್ಷದ ಬಾಲಕಿಯನ್ನು ಕಾವಲು ಕಾದು ಚಟ ಬಿಡಿಸಲು, ಆಕೆಯ ಪೋಷಕರು ತಿಂಗಳಿಗೆ 65,000 ರು. ಖರ್ಚು ಮಾಡಿ 4 ಬೌನ್ಸರ್‌ಗಳನ್ನು ನೇಮಿಸಿದ ವಿಚಿತ್ರ ಘಟನೆ ಗುಜರಾತ್‌ನ ಅಹಮದಾಬಾದಲ್ಲಿ ನಡೆದಿದೆ. ಈ ಬೌನ್ಸರ್‌ಗಳು 2 ಶಿಫ್ಟ್‌ಗಳಲ್ಲಿ ಆಕೆಯನ್ನು 24 ಗಂಟೆ ಕಾವಲು ಕಾಯುತ್ತಾರೆ. ಬಾಲಕಿ ಮೊಬೈಲ್ ವ್ಯಸನಕ್ಕೆ ತುತ್ತಾಗಿದ್ದಳು. ಜಾಲತಾಣದಲ್ಲಿ ಪದೇ ಪದೇ ತನ್ನ ಫೋಟೋ ಹಂಚಿಕೊಳ್ಳುವುದು, ಇಡೀ ದಿನ ಲೈಕ್‌ಗಳನ್ನು ಪರಿಶೀಲಿಸುವುದು ಮಾಡುತ್ತಿದ್ದಳು. ↘ 10



- ಭಾರೀ ಪ್ರಮಾಣದ ಸೋಷಿಯಲ್ ಮೀಡಿಯಾ ಗೀಳು ಹತ್ತಿಸಿಕೊಂಡಿದ್ದ 16ರ ಬಾಲಕಿ
- ಪೋಷಕರು ಆಕ್ಷೇಪಿಸಿದರೆ ದುಬಾರಿ ವಸ್ತುಗಳನ್ನು ಎಸೆದು ಬಾಲಕಿಯ ಆಕ್ರೋಶ
- ಕೆಲವೊಮ್ಮೆ ಪೋಷಕರ ಮೇಲೂ ಹಲ್ಲೆ ಮಾಡುವಷ್ಟು ಚಟವಾಗಿದ್ದ ಮೊಬೈಲ್
- ಬೇಸತ್ತ ಪೋಷಕರಿಂದ ಕಾವಲು ಕಾಯಲು ಬೌನ್ಸರ್ ನೇಮಕ
- ದಿನಕ್ಕೆ ಎರಡು ಪಾಳಿಯಲ್ಲಿ ನಾಲ್ವರು ಬೌನ್ಸರ್‌ಗಳಿಂದ ಬಾಲಕಿಯ ಮೇಲೆ ಕಣ್ಗಾವಲು

ಗರಿಷ್ಠ 33 | ಕನಿಷ್ಠ 27

ಕೈಗಾರಿಕಾ ಬೆಳವಣಿಗೆಗೆ ಟೆಕ್ ಎಕ್ಸ್‌ಪೋ ದೊಡ್ಡ ಹೆಜ್ಜೆ: ಪ್ರದೀಪ್ ಡಿಸೋಜಾ

'ಕೆನರಾ ಎಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್ ಎಕ್ಸ್‌ಪೋ-2026' ಸಮಾರೋಪ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನಲ್ಲಿ ನಡೆಸಿದ ಕೈಗಾರಿಕಾ ಟೆಕ್ ಎಕ್ಸ್‌ಪೋ ಸಮಾವೇಶ ಇಲ್ಲಿನ ಕೈಗಾರಿಕಾ ಬೆಳವಣಿಗೆಗೆ ದೊಡ್ಡ ಹೆಜ್ಜೆಯಾಗಲಿದೆ ಎಂದು ಜಿಲ್ಲಾ ಸ್ಕಿಲ್ ಡೆವಲಪ್‌ಮೆಂಟ್ ಅಧಿಕಾರಿ ಪ್ರದೀಪ್ ಡಿಸೋಜಾ ಹೇಳಿದರು.

ಕೆನರಾ ಇಂಡಸ್ಟ್ರಿಯಲ್ ಅಸೋಸಿಯೇಷನ್ ವತಿಯಿಂದ ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ನಡೆದ ಮೂರು ದಿನಗಳ 'ಕೆನರಾ ಎಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್ ಎಕ್ಸ್‌ಪೋ-2026' ಸಮಾವೇಶದ ಸಮಾರೋಪದಲ್ಲಿ ಭಾನುವಾರ ಮಾತನಾಡಿದರು.

ಇಂತಹ ಸಮಾವೇಶಗಳಿಂದ ಕೈಗಾರಿಕೆಗೆ ಮಾತ್ರವಲ್ಲ ಉದ್ಯೋಗಕ್ಕೂ ಹೆಚ್ಚಿನ ಅವಕಾಶ ಸಾಧ್ಯವಿದೆ. ಇಲ್ಲಿರುವ ಪ್ರತಿಭೆಗಳು ಉದ್ಯೋಗಕ್ಕೆ ಹೊರಗೆ ಹೋಗದೆ, ಇಲ್ಲಿಯೇ ಉದ್ಯೋಗ ನಡೆಸುವಂತಾಗಬೇಕು. ಇದಕ್ಕೆ ಈ ಸಮಾವೇಶ ಪ್ರೇರಣೆ ನೀಡಿದೆ ಎಂದರು.

ಮಂಗಳೂರು ಮಾದರಿ ಉದ್ದಿಮೆ: ಚಾರ್ಟೆಡ್ ಅಕೌಂಟ್ಸ್ ಎಸ್.ಎಸ್.ನಾಯಕ್ ಮಾತನಾಡಿ, ಕರಾವಳಿಯಲ್ಲಿ ಉದ್ದಿಮೆ ಸ್ಥಾಪನೆಗೆ ರಾಜಕೀಯ ಪ್ರೋತ್ಸಾಹ ಕಡಿಮೆ ಇದೆ. ಬೈಕಂಪಾಡಿಯ ಕೈಗಾರಿಕಾ ಪ್ರದೇಶ ರಾಜ್ಯದ ಎರಡನೇ ಅತೀ ದೊಡ್ಡ ಕೈಗಾರಿಕಾ ಪ್ರಾಂಗಣವಾಗಿದೆ. ಸರ್ಕಾರ ಇನ್ನಷ್ಟು ಭೂಮಿ ನೀಡಿದರೆ, ಇಲ್ಲಿನ ಕೈಗಾರಿಕೆಗಳು ಬೆಂಗಳೂರನ್ನು ಮೀರಿ ಬೆಳೆಯಲು ಸಾಧ್ಯವಿದೆ ಎಂದರು. ಕರಾವಳಿಯ ಉದ್ಯಮಿಗಳು ಇತರೆ ಉದ್ಯಮಿಗಳಿಗೆ ಮಾದರಿಯಾಗಿದ್ದಾರೆ ಎಂದರು.

ಮಂಗಳೂರು ಕೈಗಾರಿಕಾ ಹಬ್: ಕೆನರಾ ಚೇಂಬರ್ ಆಫ್ ಕಾಮರ್ಸ್, ಇಂಡಸ್ಟ್ರಿ ಅಧ್ಯಕ್ಷ ಪಿ.ಬಿ.ಮುದಾಸ್ಸರ್ ಮಾತನಾಡಿ, ಜಿಲ್ಲೆಯ 30 ಸಂಸ್ಥೆಗಳ ಜೊತೆ ಕೆಸಿಸಿಐ ಒಪ್ಪಂದ ಮಾಡಿಕೊಂಡಿದೆ. ಮಂಗಳೂರಿನಲ್ಲಿ ಪ್ಲಾಸ್ಟಿಕ್ ಪಾರ್ಕ್, ಎಂಎಸ್‌ಇಝಡ್, ಹೊಸ ಕೈಗಾರಿಕಾ ಬಡಾವಣೆಗಳು ಕೈಗಾರಿಕೆಯ ಬೆಳವಣಿಗೆಗೆ ಹೊಸ ಆಸೆಯನ್ನು ಚಿಗುರಿಸಿವೆ. ಹೆದ್ದಾರಿ, ಬಂದರು, ವಿಮಾನ ರೈಲು ಸಂಪರ್ಕ ಕರಾವಳಿಯಲ್ಲಿ ಕೈಗಾರಿಕಾ ಹಬ್‌ಗೆ ಪೂರಕವಾಗಿವೆ. ಮುಂದಿನ ದಿನಗಳಲ್ಲಿ ಮಂಗಳೂರು ಕೈಗಾರಿಕಾ ಕಾರಿಡಾರ್ ಆಗಿ ರೂಪುಗೊಳ್ಳುವುದರಲ್ಲಿ ಸಂಶಯ ಇಲ್ಲ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗೋಕುಲ್‌ದಾಸ್ ನಾಯಕ್ ಅಧ್ಯಕ್ಷತೆ ವಹಿಸಿದ್ದರು.

ಕೆಸಿಸಿಐ ಅಧ್ಯಕ್ಷ ಪಿ.ಬಿ.ಅಹ್ಮದ್ ಮುದಾಸ್ಸಿರ್, ಕಾನ್ಫಿಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ ಮಂಗಳೂರು ಇದರ ಅಧ್ಯಕ್ಷ ಅಭಿನವ್ ಬನ್ಸಿಲ್, ಕೆನರಾ ಪ್ಲಾಸ್ಟಿಕ್ ಮೆನುಫ್ಯಾಕ್ಚರರ್ಸ್ ಅಂಡ್ ಟ್ರೇಡರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎ.ನಝೀರ್, ಜಿಲ್ಲಾ ಸಣ್ಣ ಕೈಗಾರಿಕಾ ಅಸೋಸಿಯೇಷನ್ ಅಧ್ಯಕ್ಷೆ ಕುಸುಮ ದೇವಾಡಿಗ ಇವರನ್ನು ಸನ್ಮಾನಿಸಲಾಯಿತು.

ಕೆನರಾ ಎಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್ ಎಕ್ಸ್‌ಪೋ-2026 ಸಂಚಾಲಕ ಎನ್.ಅರುಣ್ ಪಡಿಯಾರ್, ಕೆನರಾ ಇಂಡಸ್ಟ್ರಿಯಲ್ ಅಸೋಸಿಯೇಷನ್ ಉಪಾಧ್ಯಕ್ಷ ಬಿ.ಎ.ಇಕ್ಬಾಲ್, ಕಾರ್ಯದರ್ಶಿ ರೋಶನ್ ಬಾಳಿಗಾ, ಜೊತೆ ಕಾರ್ಯದರ್ಶಿ ಬಿ.ರಾಮಚಂದ್ರ, ಕೋಶಾಧಿಕಾರಿ ಪುಷ್ಪರಾಜ್, ಕಾರ್ಯಕ್ರಮ ಸೆಲ್ ಸಂಚಾಲಕ ಶರತ್ ರವಿ ಮತ್ತಿತರರಿದ್ದರು.



ಕೆನರಾ ಎಂಜಿನಿಯರಿಂಗ್ ಇಂಡಸ್ಟ್ರಿಯಲ್ ಟೆಕ್ ಎಕ್ಸ್‌ಪೋ ಸಮಾರೋಪದಲ್ಲಿ ಪ್ರದೀಪ್ ಮಾತನಾಡುತ್ತಿರುವುದು

ಉತ್ಪನ್ನಗಳ ಗುಣಮಟ್ಟ ಕಾಯ್ದುಕೊಳ್ಳಲು ಒತ್ತು: ಎಂ.ಡಿ. ಪೂಜಾರಿ



ಕೆನರಾ ಇಂಡಸ್ಟ್ರಿಯಲ್ ಅಸೋಸಿಯೇಷನ್ ಅಧ್ಯಕ್ಷ ಎಂ.ಡಿ.ಪೂಜಾರಿ ಪ್ರಾಸ್ತಾವಿಕದಲ್ಲಿ, ಮೂರು ದಿನಗಳ ಎಕ್ಸ್‌ಪೋದಲ್ಲಿ 120ಕ್ಕೂ ಅಧಿಕ ಸ್ಟಾಲ್‌ಗಳು ಆಗಮಿಸಿದ್ದು, 9 ಸಾವಿರಕ್ಕೂ ಅಧಿಕ ಮಂದಿ ವೀಕ್ಷಿಸಿದ್ದಾರೆ. ಬೆಂಗಳೂರು, ಗೋವಾ, ಮಹಾರಾಷ್ಟ್ರ, ಚೆನ್ನೈ, ಕೇರಳದಿಂದಲೂ ಸ್ಟಾಲ್‌ಗಳನ್ನು ಹಾಕಿದ್ದಾರೆ. ಕರಾವಳಿಯ ಕೈಗಾರಿಕೆಗಳು ಅಂತಾರಾಷ್ಟ್ರೀಯ ಮಟ್ಟದ ಕೈಗಾರಿಕಾ ಉತ್ಪನ್ನಗಳ ಜೊತೆ ಸ್ಪರ್ಧಿಸಬೇಕಾದರೆ ಅಂತಹ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕಾಗಿದೆ. ಗಲ್ಫ್ ಯುದ್ಧದ ಬಳಿಕ ಮಧ್ಯಪ್ರಾಚ್ಯ ರಾಷ್ಟ್ರಗಳು ಉದ್ದಿಮೆಗೆ ಸುರಕ್ಷಿತವಾಗಿಲ್ಲ ಎಂಬುದು ದೃಢಪಟ್ಟಿದೆ. ಹೀಗಾಗಿ ವಿವಿಧ ರಾಜ್ಯಗಳ ಕೈಗಾರಿಕಾ ಕಂಪನಿಗಳ ಜೊತೆ ಮಾತುಕತೆ ನಡೆಸಿ ಗುಣಮಟ್ಟದ ಉತ್ಪನ್ನಗಳನ್ನು ಹೊರತಲು ಪ್ರಯತ್ನಿಸಲಾಗುವುದು ಎಂದು ಎಂ.ಡಿ ಪೂಜಾರಿ ತಿಳಿಸಿದರು.

ಗೋಶಾಲೆಯಲ್ಲಿ ಪ್ರಿಯದರ್ಶಿನಿ ಗೋವಿಂದ್ ಭಕ್ತಿಪೂರ್ವಕ ನೃತ್ಯ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಬೇಕಲ ಗೋಕುಲಂ ಗೋಶಾಲೆಯಲ್ಲಿ ಪರಂಪರಾ ವಿದ್ಯಾಪೀಠದ ಆಶ್ರಯದಲ್ಲಿ ಜರುಗುತ್ತಿರುವ ಮೂರನೇ ಆವೃತ್ತಿಯ 'ವೈಶಾಖ ನಟನಂ' ರಾಷ್ಟ್ರೀಯ ನೃತ್ಯೋತ್ಸವದಲ್ಲಿ ಚೆನ್ನೈನ ಸುಪ್ರಸಿದ್ಧ ನೃತ್ಯ ಕಲಾವಿದೆ ಪ್ರಿಯದರ್ಶಿನಿ ಗೋವಿಂದ್ ಅವರ ಭರತನಾಟ್ಯ ಪ್ರದರ್ಶನ ಭಕ್ತಿಭಾವ ಮತ್ತು ಲಯಬದ್ಧ ಚಲನೆಗಳ ಮೂಲಕ ಪ್ರೇಕ್ಷಕರ ಮನಸೂರೆಗೊಂಡಿತು.

ಕಲಾಕ್ಷೇತ್ರದ ಮಾಜಿ ನಿರ್ದೇಶಕಿಯಾಗಿ ಸೇವೆ ಸಲ್ಲಿಸಿರುವ ಪ್ರಿಯದರ್ಶಿನಿ ಅವರು ಸುದೀರ್ಘ ಕಲಾ ಪರಂಪರೆಯನ್ನು ಹೊಂದಿದ್ದಾರೆ. ಖ್ಯಾತ ಚಲನಚಿತ್ರ ನಟಿ ನವ್ಯಾ ನಾಯರ್‌ಸೇರಿದಂತೆ ಸಾವಿರಾರು ಶಿಷ್ಯರು ಇವರಿಂದ ನೃತ್ಯಾಭ್ಯಾಸ ಮಾಡಿರುವುದು ಇವರ ಕಲಾ ಕೌಶಲಕ್ಕೆ ಸಾಕ್ಷಿಯಾಗಿದೆ.

ಚಲನಚಿತ್ರ ನಟಿ ಕೃಷಾ ಕುರುಪ್ ಅವರು 'ಧೇನು ಮಂಟಪ'ದಲ್ಲಿ ನೃತ್ಯ ಸಮರ್ಪಣೆ ಮಾಡಿದರು. ಧೇನು ಮಂಟಪ ಹಾಗೂ ನಂದಿ ಮಂಟಪಗಳಲ್ಲಿ ನಡೆಯುತ್ತಿರುವ ಈ ಸಾಂಸ್ಕೃತಿಕ ಉತ್ಸವದಲ್ಲಿ ಈಗಾಗಲೇ ಮುನ್ನೂರಕ್ಕೂ ಹೆಚ್ಚು ನೃತ್ಯ ಕಲಾವಿದರು ಕಲಾ ಪ್ರೌಢಿಮೆ ಪ್ರದರ್ಶಿಸಿದ್ದಾರೆ.



ಪ್ರಿಯದರ್ಶಿನಿ ಗೋವಿಂದ್ ಭರತನಾಟ್ಯ.





ಕಾಸರಗೋಡಿನ ಬೇಕಲ ಗೋಕುಲಂ ಗೋಶಾಲೆ ವೈಶಾಖ ನಟನಂ-2026 ನೃತ್ಯ ಸಮಾರಾಧನೆಯಲ್ಲಿ ಶಿವಪ್ರಣಾಮ್ ನೃತ್ಯ ಸಂಸ್ಥೆ ಕಿನ್ನಿಗೋಳಿಯ ನಿರ್ದೇಶಕಿ ಅನ್ನಪೂರ್ಣ ರಿತೇಶ್ ಅವರ ಶಿಷ್ಯರಾದ ರಿದ್ಧಿ ಹರೀಶ್ ಶೆಟ್ಟಿ ಮತ್ತು ಸ್ಪರ್ಶ ಶೆಟ್ಟಿ ನೃತ್ಯ ಪ್ರದರ್ಶನ ನೀಡಿದರು.

ಸುದ್ದಿ ಸಿಂಚನ

ಪಿಯು ಪರೀಕ್ಷೆ ಮರುಮೌಲ್ಯಮಾಪನ: ಅಮೃತ ಭಾರತೀ ಸಾಧನೆ





ಕಾರ್ಕಳ: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಮರುಮೌಲ್ಯಮಾಪನ ಫಲಿತಾಂಶದಲ್ಲಿ ಸುಮಿತಾ (593/600) ರಾಜ್ಯಕ್ಕೆ 8ನೇ ರ್‍ಯಾಂಕ್ ಹಾಗೂ ದೀಕ್ಷಾ ರೈ (592/600) 9ನೇ ರ್‍ಯಾಂಕ್ ಪಡೆದಿದ್ದಾರೆ. ಕಾಲೇಜು ಆಡಳಿತ ಮಂಡಳಿ ಅಭಿನಂದನೆ ಸಲ್ಲಿಸಿದ್ದು, ಸಂಸ್ಥೆಗೆ ಇದುವರೆಗೆ ವಿಜ್ಞಾನದಲ್ಲಿ 3 ಮತ್ತು ವಾಣಿಜ್ಯದಲ್ಲಿ 5 ರ್‍ಯಾಂಕ್‌ಗಳು ಲಭಿಸಿರುವುದಾಗಿ ಪ್ರಾಂಶುಪಾಲರು ತಿಳಿಸಿದ್ದಾರೆ.

ನೀರು ಪೂರೈಕೆಗೆ 6 ಹೊಸ ಕೊಳವೆ ಬಾವಿ: ಶಾಸಕ ಅಶೋಕ್ ರೈ



ಪುತ್ತೂರು: ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬರ ಉಂಟಾಗಿದ್ದು, ಗ್ರಾಮಸ್ಥರಿಗೆ ನೀರು ಪೂರೈಕೆಗಾಗಿ 6 ಹೊಸ ಕೊಳವೆ ಬಾವಿ ಹಾಗೂ ಒಂದು ಕಡೆಯಲ್ಲಿ ಕೊಳವೆ ಬಾವಿ ಫ್ಲಶಿಂಗ್ ಮಾಡಲಾಗಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ. ಪುತ್ತೂರು ತಾಲೂಕು ವ್ಯಾಪ್ತಿಯಲ್ಲಿ ಬರುವ ಆರ್ಯಾಪು ಗ್ರಾಮದ ಕಲ್ಲರ್ಪೆ ಹಾಗೂ ಸಂಪ್ಯದಲ್ಲಿ ಫ್ಲಶಿಂಗ್, ಬಡಗನ್ನೂರು ಗ್ರಾಮದ ಕುಕ್ಕಾಜೆ, ನರಿಮೊಗರು ಗ್ರಾಮದ ಮಾಯಂಗಳ, ನೆಕ್ಕಿಲಾಡಿ ಗ್ರಾಮದ ಬೊಳಂತಿ, ಒಳಮೊಗ್ರು ಗ್ರಾಮದ ಪರ್ಪುಂಜ, ನೆಟ್ಟಣಿಗೆ ಮುಡ್ನೂರು ಗ್ರಾಮದ ಸುರುಳಿಮೂಲೆ ಯಲ್ಲಿ ಹೊಸ ಕೊಳವೆ ಬಾವಿಯನ್ನು ಸರ್ಕಾರದ ವತಿಯಿಂದ ತೆಗೆಯಲಾಗಿದೆ. ಬಹುತೇಕ ಕೊಳವೆ ಬಾವಿಗಳಲ್ಲಿ ನೀರು ಕೂಡ ಲಭ್ಯವಾಗಿದ್ದು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗಿದೆ ಎಂದು ಪುತ್ತೂರು ವಿಧಾನಸಭಾ ಕ್ಷೇತ್ರದ ಶಾಸಕ ಅಶೋಕ್ ರೈ ಅವರು ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಗುರುವಾಯನಕೆರೆ ಎಕ್ಸೆಲ್ ಟೆಕ್ನೋ ಸ್ಕೂಲ್ ಎಚ್‌ಎಂ ಸುಮಿತ್ರಾ ಬಿ. ಅಧಿಕಾರ ಸ್ವೀಕಾರ

700ಕ್ಕೂ ಹೆಚ್ಚು ಗಣಿತ ಪರಿಕಲ್ಪನೆ ಸ್ಕ್ರಿಪ್ಟ್‌ಗಳನ್ನು ಅಭಿವೃದ್ಧಿಪಡಿಸಿರುವ ಶಿಕ್ಷಣ ತಜ್ಞೆ

• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ಹಲವು ಶೈಕ್ಷಣಿಕ ಸಾಧನೆಗಳ ಮೂಲಕ ರಾಜ್ಯ- ರಾಷ್ಟ್ರದ ಗಮನ ಸೆಳೆದ ಗುರುವಾಯನಕೆರೆಯ ಎಕ್ಸೆಲ್ ವಿದ್ಯಾ ಸಂಸ್ಥೆಗಳ ಆವರಣದಲ್ಲಿ ನೂತನವಾಗಿ ಪ್ರಾರಂಭಗೊಂಡ ಎಕ್ಸೆಲ್ ಟೆಕ್ನೋ ಸ್ಕೂಲ್ ನ ಮುಖ್ಯೋಪಾಧ್ಯಾಯಿನಿಯಾಗಿ ಶಿಕ್ಷಣ ತಜ್ಞೆ ಸುಮಿತ್ರಾ ಬಿ. ಧಿಕಾರ ಸ್ವೀಕರಿಸಿದ್ದಾರೆ.

ಎಂ ಎಸ್ಸಿ, ಎಂ ಎಡ್ ಪದವೀಧರರಾಗಿರುವ ಸುಮಿತ್ರಾ ನಾಯಕತ್ವ, ಪಠ್ಯಕ್ರಮ ಅಭಿವೃದ್ಧಿ ಮತ್ತು ಬೋಧನೆಯಲ್ಲಿ ವ್ಯಾಪಕ ಅನುಭವ ಹೊಂದಿರುವ ಸಾಧನೆಯ ಶಿಕ್ಷಣ ತಜ್ಞರಾಗಿದ್ದಾರೆ.

ಪಠ್ಯಕ್ರಮ ಮುಖ್ಯಸ್ಥರಾಗಿ, ಅವರು 700ಕ್ಕೂ ಹೆಚ್ಚು ಗಣಿತ ಪರಿಕಲ್ಪನೆ ಸ್ಕ್ರಿಪ್ಟ್‌ಗಳನ್ನು ಅಭಿವೃದ್ಧಿಪಡಿಸಿದ್ದಾರೆ ಮತ್ತು ಶಿಕ್ಷಣ ವೇದಿಕೆಗಳಿಗಾಗಿ ಆಕರ್ಷಕ ವಿಡಿಯೋ ವಿಷಯ ರಚನೆಯಲ್ಲಿ ಸಹಯೋಗ ನೀಡಿದ್ದಾರೆ. ಅವರ ಕಾರ್ಯವು ಭಾರತದ ಗಡಿಯನ್ನು ದಾಟಿ, ಭಾರತೀಯ ಮತ್ತು ಅಂತಾರಾಷ್ಟ್ರೀಯ ಎರಡೂ ಪಠ್ಯಕ್ರಮಗಳಿಗೆ ಅನುಗುಣವಾದ ವಿಷಯ ರಚನೆಯಲ್ಲಿ ವಿಸ್ತರಿಸಿದೆ. ಜೊತೆಗೆ, ಐಎಂಒ ಮತ್ತು ಸಿಲ್ವರ್ ಝೋನ್ ಸೇರಿದಂತೆ ಹಲವು ಒಲಿಂಪಿಯಾಡ್ ವೇದಿಕೆಗಳಿಗೆ ವಿಷಯ ರಚನೆಯಲ್ಲಿ ಕೊಡುಗೆ ನೀಡಿದ್ದಾರೆ.

ಶಿಕ್ಷಣ ಮತ್ತು ಸಮುದಾಯ ಸೇವೆಗೆ ನೀಡಿದ ಅಮೂಲ್ಯ ಕೊಡುಗೆಗಳಿಗಾಗಿ ಸುಮಿತ್ರಾ ಅವರಿಗೆ ಆಕ್ಸಿಸ್ ಮ್ಯಾಕ್ಸ್ ಲೈಫ್ ಇನ್ಶೂರೆನ್ಸ್ ಸಂಸ್ಥೆಯಿಂದ 'ಸೇವಾ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಬೆಂಬಲ ಮತ್ತು ಕ್ರಿಯಾಶೀಲ ಕಲಿಕಾ ವಾತಾವರಣವನ್ನು ಪ್ರೋತ್ಸಾಹಿಸುವ ಉತ್ಕಟ ಆಸಕ್ತಿ ಹೊಂದಿರುವ ಅವರು, ರಾಷ್ಟ್ರಮಟ್ಟದ ಸ್ಪರ್ಧೆಗಳ ಆಯೋಜನೆ ಮತ್ತು ಶಿಕ್ಷಕ ತರಬೇತಿ ಕಾರ್ಯಕ್ರಮಗಳ ನಡೆಸುವಿಕೆಯಲ್ಲಿಯೂ ಪ್ರಮುಖ ಪಾತ್ರ ವಹಿಸುತ್ತಾರೆ.

ಅವರು ಕರ್ನಾಟಕದಾದ್ಯಂತ ವಿವಿಧ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಲ್ಲಿ ಅನೇಕ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

ವಿಜ್ಞಾನ, ಗಣಿತ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಸುಮಿತ್ರಾ ಬಿ ಅವರ ನಾಯಕತ್ವದಲ್ಲಿ ಎಕ್ಸೆಲ್ ಟೆಕ್ನೋ ಸ್ಕೂಲ್ ಅದ್ವಿತೀಯ ಸಾಧನೆ ಮಾಡಲಿದೆ ಎಂದು ಎಕ್ಸೆಲ್ ವಿದ್ಯಾ ಸಂಸ್ಥೆಗಳ ಆಡಳಿತ ಮಂಡಳಿ ಅಧ್ಯಕ್ಷ ಸುಮಂತ್ ಕುಮಾರ್‌ಜೈನ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಸನಾತನ ವಿಚಾರಧಾರೆ ಅರಿವು: ಬಾಲಕೃಷ್ಣ ಬೋರ್ಕರ್

ಅಂಬಿಕಾ ಸಂಸ್ಥೆಯಲ್ಲಿ ಶೃಂಗೇರಿ ಶ್ರೀ ಶಾರದಾಪೀಠದಿಂದ ಶಂಕರ ವಿಜಯ ಸ್ಪರ್ಧೆ

• **ಕನ್ನಡಪ್ರಭವಾರ್ತೆ** ಪುತ್ತೂರು

ಸನಾತನ ಹಿಂದೂ ಧರ್ಮದ ಮೇಲೆ ನಿರಂತರವಾಗಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ದಾಳಿಗಳು ನಡೆದುಬಂದಿರುವುದು ಇತಿಹಾಸದಲ್ಲಿ ದಾಖಲಾದ ಸತ್ಯ. ಅಂತಹ ದಾಳಿಗಳ ಪರಿಣಾಮಗಳನ್ನು ಹಿಂದೂ ಸಮಾಜ ಇಂದಿಗೂ ಅನುಭವಿಸುತ್ತಿದೆ. ಸನಾತನ ವಿಚಾರಧಾರೆಗಳನ್ನು ತಿಳಿಸಿಕೊಡುವ ಪ್ರಯತ್ನಗಳು ನಡೆಯಬೇಕಿದೆ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯ ಬಾಲಕೃಷ್ಣ ಬೋರ್ಕರ್‌ಹೇಳಿದರು.

ಭಾನುವಾರ ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಪ್ರವರ್ತಿತ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ಆವರಣದಲ್ಲಿ ಶೃಂಗೇರಿಯ ಶ್ರೀ ಶಾರದಾಪೀಠದ ವತಿಯಿಂದ ಶ್ರೀ ಶಂಕರ ಭಗವತ್ಪಾದರ ಜನ್ಮಜಯಂತಿ ಪ್ರಯುಕ್ತ ಆಯೋಜಿಸಲಾದ ಶಂಕರ ವಿಜಯ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಬ್ರಿಟಿಷರ ಆಡಳಿತ ಕಾಲದಲ್ಲೂ ನಮ್ಮ ವಿಚಾರಧಾರೆಗಳನ್ನು ಅರಿತುಕೊಳ್ಳುವುದಕ್ಕೆ ಮಾಧ್ಯಮವಾಗಿರುವ ಸಂಸ್ಕೃತ ಭಾಷೆಯ ಅಧ್ಯಯನಾವಕಾಶಗಳು ಸಾಕಷ್ಟಿದ್ದವು. ಆದರೆ ಸ್ವಾತಂತ್ರ್ಯಾ ನಂತರದ ಭಾರತದಲ್ಲಿ ಸಂಸ್ಕೃತದ ಆದ್ಯತೆ ಕಡಿಮೆಯಾಗುತ್ತಾ ಬಂದುದರ ಪರಿಣಾಮ ನಮ್ಮ ಸನಾತನ ಸಂಗತಿಗಳು ನಮಗಿಂದು ಅನಿವಾರ್ಯತೆ ಇದೆ ಎಂದರು.

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಗಣೇಶ ಪ್ರಸಾದ್ ಎ. ಸೀನಿಯರ್‌ವಿಭಾಗದಲ್ಲಿ ಭಾಷಣ ಸ್ಪರ್ಧೆ ಮತ್ತು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿತ್ತು.

ಲ್ಯಾಪ್‌ಟಾಪ್, ಟ್ಯಾಬ್ ಒಳಗೊಂಡಂತೆ ಎರಡೂವರೆ ಲಕ್ಷ ರೂಪಾಯಿಗಳೂ ಅಧಿಕ ಮೊತ್ತದ ಬಹುಮಾನಗಳನ್ನು ಈ ಸ್ಪರ್ಧೆ ಒಳಗೊಂಡಿದ್ದು, ವಿಜೇತರಿಗೆ 7ರಂದು ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ನಡೆಯುವ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಬಹುಮಾನ ವಿತರಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.



ಅಂಬಿಕಾ ವಿದ್ಯಾಸಂಸ್ಥೆಯಲ್ಲಿ ಬಾಲಕೃಷ್ಣ ಬೋರ್ಕರ್ ಮಾತನಾಡುತ್ತಿರುವುದು

■ ಎರಡೂವರೆ ಲಕ್ಷ ರೂಪಾಯಿಗಳೂ ಅಧಿಕ ಮೊತ್ತದ ಬಹುಮಾನ ಈ ಸ್ಪರ್ಧೆ ಒಳಗೊಂಡಿದ್ದು, 7ರಂದು ಬಪ್ಪಳಿಗೆಯ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಶೃಂಗೇರಿ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಬಹುಮಾನ ವಿತರಿಸಲಿದ್ದಾರೆ

ಮೊದಲು 2023ರ ಮಹಿಳಾ ಮೀಸಲಾತಿ ಜಾರಿಗೆ ತನ್ನಿ: ಕೃಪಾ ಆಳ್ವ

ಉಡುಪಿ: ಕೇಂದ್ರ ಸರ್ಕಾರ ನಾರಿಶಕ್ತಿ ಮಹಿಳಾ ಮೀಸಲಾತಿ ಹೆಸರಿನಲ್ಲಿ ರಾಜಕೀಯ ಪಡೆಯಲೆತ್ನಿಸುತ್ತಿದೆ ಎಂದು ಆರೋಪಿಸಿದ ಕರ್ನಾಟಕ ರಾಜ್ಯ ಪ್ರಚಾರ ಸಮಿತಿಯ ರಾಜ್ಯ ಸಂಯೋಜಕಿ ಕೃಪಾ ಆಳ್ವಾ, ಮೊದಲು ಕೇಂದ್ರ ಸರ್ಕಾರವು 2023ರ ಮಹಿಳಾ ಮೀಸಲಾತಿ ಕಾನೂನನ್ನು ಯಾವುದೇ ಷರತ್ತಿಲ್ಲದೆ ತಕ್ಷಣ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರ ಸಬಲೀಕರಣದ ನೆಪದಲ್ಲಿ, ಕ್ಷೇತ್ರ ಪುನರ್‌ವಿಂಗಡಣೆ ಕಾಯ್ದೆ ಹಾಗೂ ಕೇಂದ್ರಾಳಿತ ಪ್ರದೇಶಗಳ ಮಸೂದೆಗಳನ್ನು ಜಾರಿಗೆ ತಂದು, ಆ ಮೂಲಕ ತಮ್ಮ ಪಕ್ಷಕ್ಕೆ ಲಾಭವಾಗುವಂತೆ ಯತ್ನಿಸಲಾಗುತ್ತಿದೆ ಎಂದ ಅವರು, 2011ರ ಜನಗಣತಿ ಆಧಾರದಲ್ಲಿ ಭವಿಷ್ಯದ ನಿರ್ಧಾರ ಕೈಗೊಳ್ಳುವುದು ಸರಿಯಲ್ಲ ಎಂದರು. ಪ್ರಧಾನಿ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ 2023ರಲ್ಲಿ ಅಂಗೀಕರಿಸಿದ ಮಹಿಳಾ ಮೀಸಲಾತಿ ಕಾನೂನನ್ನು ವಿಳಂಬಗೊಳಿಸಿರುವುದಕ್ಕೆ ಸ್ಪಷ್ಟನೆ ನೀಡಲಿ ಎಂದರು.

ಕೆಪಿಸಿಸಿ ವಕ್ತಾರೆ ವೆರೋನಿಕಾ ಕರ್ನೆಲಿಯೋ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಜ್ಯೋತಿ ಹೆಬ್ಬಾರ್, ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅನಿತಾ ಡಿಸೋಜ, ರಾಜೀವಗಾಂಧಿ ಪಂಚಾಯತ್‌ರಾಜ್ ಸಂಘಟನೆಯ ರಾಜ್ಯ ಸಹಸಂಚಾಲಕಿ ರೋಶನಿ ಒಲಿವೆರಾ ಉಪಸ್ಥಿತರಿದ್ದರು.

ದ. ಕ. ಜಿಲ್ಲಾ ಬೌದ್ಧ ಮಹಾಸಭಾದಿಂದ ಬುದ್ಧ ಜಯಂತಿ ಆಚರಣೆ

ಮಂಗಳೂರು: ದ. ಕ. ಜಿಲ್ಲಾ ಬೌದ್ಧ ಮಹಾಸಭಾ ರಿ. ಮಂಗಳೂರು ಇದರ ವತಿಯಿಂದ 2570ನೇ ವೈಶಾಖ ಬುದ್ಧ ಪೂರ್ಣಿಮೆ ಪವಿತ್ರ ಬುದ್ಧ ಜಯಂತಿ ಆಚರಣೆ ಶುಕ್ರವಾರ ಮಂಗಳೂರಿನ ತುಳು ಭವನದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಯಲ್ಲಿ ನಡೆಯಿತು. ದಕ್ಷಿಣ ಕನ್ನಡ ಜಿಲ್ಲಾ ಬುದ್ಧ ಮಹಾಸಭಾ ಕಾರ್ಯದರ್ಶಿ ಲಕ್ಷ್ಮಣ್ ಮೊದಲಾದವರುಈ ಸಂದರ್ಭ ಪುಷ್ಪ ನಮನ ಸಲ್ಲಿಸಿ ಶುಭ ಹಾರೈಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರಾಜೇಶ್ ಹಾಗೂ ಜಿಲ್ಲಾ ಬುದ್ಧ ಮಹಾಸಭಾದ ಸದಸ್ಯರು ಈ ಸಂದರ್ಭದಲ್ಲಿ ಇದ್ದರು.

ಚಪ್ಪರ ಮುಹೂರ್ತ | ನಾಡಿನ ಜನರ ಸುಭೀಕ್ಷೆಗಾಗಿ 14ರಿಂದ 19ರವರೆಗೆ ಕಾರ್ಯಕ್ರಮ

ಕೊಡವೂರು ದೇವಸ್ಥಾನ: ಮಹಾರುದ್ರಯಾಗ ಚಪ್ಪರ ಮುಹೂರ್ತ

• **ಕನ್ನಡಪ್ರಭ ವಾರ್ತೆ** ಉಡುಪಿ

ಇಲ್ಲಿನ ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥ, ನಾಡಿನ ಜನರ ಸುಭೀಕ್ಷೆಗಾಗಿ 14ರಿಂದ 19ರವರೆಗೆ ಮಹಾ ರುದ್ರಯಾಗದ ಪೂರ್ವಭಾವಿಯಾಗಿ ಭಾನುವಾರ ಚಪ್ಪರ ಮುಹೂರ್ತ ಕಾರ್ಯಕ್ರಮ ನಡೆಯಿತು.

ದೇವಸ್ಥಾನದ ಪ್ರಧಾನ ಅರ್ಚಕ ಸೀತಾರಾಮ ಆಚಾರ್ಯ ಪೌರೋಹಿತ್ಯದಲ್ಲಿ ಧಾರ್ಮಿಕ ವಿಧಿವಿಧಾನಗಳು ಜರುಗಿದವು.

ಮಹಾ ರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್‌ರಾಜ್ ಕಾಂಚನ್, ಸಮಿತಿಯ ಸಂಚಾಲಕ ಕೆ. ಕೃಷ್ಣಮೂರ್ತಿ ಆಚಾರ್ಯ, ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು, ರುದ್ರಯಾಗ ಸಮಿತಿಯ ಸಂಚಾಲಕ ರಮೇಶ್ ಎಸ್. ತಿಂಗಳಾಯ, ನಂದಕಿಶೋರ್ ಕೆಮ್ಮಣ್ಣು, ಬಾಲಕೃಷ್ಣ ಕೊಡವೂರು, ಭಜನಾ ಸಂಚಾಲಕ ಧನಂಜಯ ಕಾಂಚನ್, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ವಾದಿರಾಜ್ ಸಾಲ್ಯಾನ್, ಯಶೋದರ ಸುವರ್ಣ, ಶೀಲಾ ದೇವಾಡಿಗ, ಭಾಸ್ಕರ ಪಾಲನ್, ಎ. ರಾಜ ಸೇರಿಗಾರ, ಸಾಲ್ಯಾನ್, ಬಾಬ ಕೆ., ಉಷಾ ಆನಂದ ಪ್ರಮುಖರಾದ ಪಿ. ಗುರುರಾಜ್ ರಾವ್, ಯಾದವ ಅಮೀನ್, ಸದಾನಂದ ಮೂಲ್ಯ, ಬಿ. ಕುಶಲ ಶೆಟ್ಟಿ, ಆಶಾ ಚಂದ್ರಶೇಖರ್, ಸುರೇಂದ್ರ ಆಚಾರ್ಯ, ಸುನೀಲ್ ಪೂಜಾರಿ, ಶಂಕರ ಕುಂದರ್, ಹರಿಪ್ರಸಾದ್ ಮಲ್ಪೆ, ಶರತ್ ಹನುಮಾನ್‌ನಗರ, ಕುಸುಮ ಕರ್ಕೇರ, ಯಶೋದ ಕೆಮ್ಮಣ್ಣು, ಸತೀಶ್ ಕಲ್ಯಾಣಪುರ, ವಿಠಲ ಪೂಜಾರಿ, ಶಾಲಿನಿ ಸಾಲ್ಯಾನ್, ಅರ್ಚನಾ ದೇವಾಡಿಗ, ವಿಜಯ ಭಾಸ್ಕರ, ಸಂಧ್ಯಾ ಪ್ರಕಾಶ್, ಸುಕನ್ಯ ಪೂಜಾರಿ, ಶಕುಂತಳ ಸದಾನಂದ ಉಮೇಶ್ ರಾವ್ ಕೊಡವೂರು ಮೊದಲಾದವರು ಪಾಲ್ಗೊಂಡಿದ್ದರು.



ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ನಡೆಯುವ ಮಹಾರುದ್ರಯಾಗಕ್ಕೆ ಚಪ್ಪರ ಮುಹೂರ್ತ ನೆರವೇರಿಸಲಾಯಿತು

■ ಮಹಾ ರುದ್ರಯಾಗ ಸಮಿತಿಯ ಕಾರ್ಯಾಧ್ಯಕ್ಷ ಪ್ರಸಾದ್‌ರಾಜ್ ಕಾಂಚನ್, ಸಮಿತಿಯ ಸಂಚಾಲಕ ಕೆ. ಕೃಷ್ಣಮೂರ್ತಿ ಆಚಾರ್ಯ ಮೊದಲಾದವರು ಇದ್ದರು.

ನೀಟ್: ದ.ಕ.ದಲ್ಲಿ 264 ವಿದ್ಯಾರ್ಥಿಗಳು ಗೈರು

• **ಕನ್ನಡಪ್ರಭ ವಾರ್ತೆ** ಮಂಗಳೂರು

2026ನೇ ಸಾಲಿನ ನೀಟ್ ಪರೀಕ್ಷೆಗಳು ದ.ಕ. ಜಿಲ್ಲೆಯಲ್ಲಿ ಭಾನುವಾರ ಯಾವುದೇ ಗೊಂದಲಗಳಿಲ್ಲದೆ ಸುಸೂತ್ರವಾಗಿ ನಡೆದಿದೆ.

ಮಂಗಳೂರಿನ ಒಟ್ಟು 18 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆದಿದೆ. ಪರೀಕ್ಷೆಗೆ 8,587 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದು, 8,323 ವಿದ್ಯಾರ್ಥಿಗಳು ಹಾಜರಾಗಿದ್ದು, 264 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ಎಲ್ಲ 18 ಪರೀಕ್ಷಾ ಕೇಂದ್ರಗಳ 200 ಮೀಟರ್ ಸುತ್ತಮುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಪೊಲೀಸ್ ಇಲಾಖೆ ಬಂದೋಬಸ್ತ್ ಒದಗಿಸಿತ್ತು. ಯಾವುದೇ ಕಾನೂನು ಬಾಹಿರ ಚಟುವಟಿಕೆ, ಅಹಿತಕರ ಘಟನೆಗಳು ನಡೆಯದಂತೆ ಮತ್ತು ಪರೀಕ್ಷೆಗಳನ್ನು ಸುಸೂತ್ರ, ದೋಷರಹಿತ ಹಾಗೂ ಶಾಂತ ವಾತಾವರಣದಲ್ಲಿ ನಡೆಯುವಂತೆ ನೋಡಿಕೊಳ್ಳಲಾಗಿತ್ತು.



ನೀಟ್ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳು

ಭಾನುವಾರ ಅಪರಾಹ್ನ ಪರೀಕ್ಷೆಗಳು ನಡೆದಿದ್ದು, ಬೆಳಗ್ಗೆ 11.30ಕ್ಕೆ ವಿದ್ಯಾರ್ಥಿಗಳನ್ನು ತಪಾಸಣೆ ನಡೆಸಿ ಕೇಂದ್ರಗಳಿಗೆ ಕಳುಹಿಸಲಾಗಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕೆಮರಾ, ಮೊಬೈಲ್ ಜಾಮರ್ ಸಹಿತ ಸಕಲ ವ್ಯವಸ್ಥೆ ಮಾಡಲಾಗಿತ್ತು. ಪ್ರತಿಯೊಂದು ಕೇಂದ್ರಕ್ಕೆ ಒಬ್ಬ ಅಧೀಕ್ಷಕರು ಹಾಗೂ ಇತರ ಸಿಬಂದಿ ನೇಮಕ ಮಾಡಲಾಗಿತ್ತು. ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಗೊಂದಲಗಳಾಗಿಲ್ಲ ಎಂದು ಕೆನರಾ ಪಿ.ಯು. ಕಾಲೇಜಿನ ಪ್ರಾಂಶುಪಾಲ ಲತಾ ಮಹೇಶ್ವರಿ ಕೆ.ಪಿ. ತಿಳಿಸಿದ್ದಾರೆ.






ಆಧುನಿಕ ಶಿವಮೊಗ್ಗದ ನಿರ್ಮಾತೃ ಬಿ.ಎಸ್.ಯಡಿಯೂರಪ್ಪ

ಕೇಳಿದ್ದನ್ನು ಕೊಡುವ ಕಾಮಧೇನು ಯಡಿಯೂರಪ್ಪ | ನಗರದ ಅಭಿವೃದ್ಧಿಗಳಲ್ಲಿ ಸದಾ ಜೀವಂತ ಮಾಜಿ ಸಿಎಂ

2006ಕ್ಕೆ ಮುನ್ನ ಜಿಲ್ಲೆಯಿಂದ ಮೂರು ಮಂದಿ ಮುಖ್ಯಮಂತ್ರಿಯಾಗಿ ರಾಜ್ಯಭಾರ ನಡೆಸಿದರೂ ಅಭಿವೃದ್ಧಿ ಎಂಬುದು ಮಾತ್ರ ಕನಸೇ ಆಗಿತ್ತು. ಅಭಿವೃದ್ಧಿ ಎಂಬುದು ಮರೀಚಿಕೆಯೇ ಆಗಿದ್ದ ಅಂತಹದೊಂದು ಆಸೆ ಆಕಾಂಕ್ಷೆಯನ್ನೂ ಜಿಲ್ಲೆಯ ಜನತೆ ಇಟ್ಟುಕೊಳ್ಳದ ಸಂದರ್ಭದಲ್ಲಿ ಹೀಗೊಂದು ತಿರುವು ಸಿಗಬಹುದು, ಅಭಿವೃದ್ಧಿಯ ಬಂಪರ್ ಲಾಟರಿ ಹೊಡೆಯಬಹುದೆಂದು ಯಾರೂ ನಿರೀಕ್ಷಿಸಿಯೂ ಇರಲಿಲ್ಲ.



ಮಲೆನಾಡಿನ ಹೆಬ್ಬಾಗಿಲು, ಸಾಂಸ್ಕೃತಿಕ ರಾಜಧಾನಿ, ಹೋರಾಟಗಳ ತವರು ಎಂದೆಲ್ಲ ವಿಶೇಷಣಗಳಿಂದ ಕರೆಯಲ್ಪಡುತ್ತಿದ್ದ ಶಿವಮೊಗ್ಗ ನಗರ ಮತ್ತು ಜಿಲ್ಲೆ ಅಭಿವೃದ್ಧಿ ದೃಷ್ಟಿಯಿಂದ ಮಾತ್ರ ಪಾಳುಬಿದ್ದ ಊರಿನಂತೆಯೇ ಇತ್ತು. ಶಿವಪ್ಪನಾಯಕನ ಕಾಲದ ಊರೇ ಇದಾಗಿರಬೇಕು ಎಂದು ತಮಾಷೆ ಮಾಡುವ ಹೊರ ಊರಿನವರ ಧ್ವನಿಗೆ, ತಮನ್ನು ತಾವೇ ಗೇಲಿ ಮಾಡಿಕೊಳ್ಳುವ ಅನಿವಾರ್ಯತೆಗೆ ಸಿಲುಕಿದ್ದ ಸ್ಥಳೀಯರು ದನಿಗೂಡಿಸಿ ಮುಖ ಬಾಡಿಸುತ್ತಿದ್ದುದು ಈಗ ಇತಿಹಾಸ.

ಸ್ವಾತಂತ್ರ್ಯದ ಬಳಿಕ ಯಾವೊಂದು ಸರ್ಕಾರದ ಅವಧಿಯಲ್ಲಿಯೂ ಜಿಲ್ಲೆಗೆ ಅಭಿವೃದ್ಧಿಯ ಅನುದಾನ ಎಂಬುದು ಬರಲೇ ಇಲ್ಲ. 2006ಕ್ಕೆ ಮುನ್ನ ಜಿಲ್ಲೆಯಿಂದ ಮೂರು ಮಂದಿ ಮುಖ್ಯಮಂತ್ರಿಯಾಗಿ ರಾಜ್ಯಭಾರ ನಡೆಸಿದರೂ ಅಭಿವೃದ್ಧಿ ಎಂಬುದು ಮಾತ್ರ ಕನಸೇ ಆಗಿತ್ತು. ಅಭಿವೃದ್ಧಿ ಎಂಬುದು ಮರೀಚಿಕೆಯೇ ಆಗಿದ್ದ, ಅಂತಹದೊಂದು ಆಸೆ ಆಕಾಂಕ್ಷೆಯನ್ನೂ ಜಿಲ್ಲೆಯ ಜನತೆ ಇಟ್ಟುಕೊಳ್ಳದ ಸಂದರ್ಭದಲ್ಲಿ ಹೀಗೊಂದು ತಿರುವು ಸಿಗಬಹುದು, ಅಭಿವೃದ್ಧಿಯ ಬಂಪರ್ ಲಾಟರಿ ಹೊಡೆಯಬಹುದೆಂದು ಯಾರೂ ನಿರೀಕ್ಷಿಸಿಯೂ ಇರಲಿಲ್ಲ.

ಅದು 2006, ಜೆಡಿಎಸ್ ಮತ್ತು ಬಿಜೆಪಿ ಜೊತೆಗೂಡಿ ಸಮ್ಮಿಶ್ರ ಸರ್ಕಾರ ರಚಿಸಿತು. ಜೆಡಿಎಸ್‌ನಿಂದ ಕುಮಾರಸ್ವಾಮಿ ಮುಖ್ಯಮಂತ್ರಿಯಾದರೆ, ಬಿಜೆಪಿಯ ಪ್ರಶ್ನಾತೀತ ನಾಯಕ ಬಿ.ಎಸ್.ಯಡಿಯೂರಪ್ಪ ಉಪ ಮುಖ್ಯಮಂತ್ರಿಯಾದರು. ಉಪಮುಖ್ಯಮಂತ್ರಿಯ ಜೊತೆಗೆ ಹಣಕಾಸು ಖಾತೆಯನ್ನು ಕೂಡ ಪಡೆದ ಯಡಿಯೂರಪ್ಪನವರು ಅಭಿವೃದ್ಧಿ ಎಂಬುದನ್ನು ತಮ್ಮೊಳಗೆ ಆಹ್ವಾನಿಸಿಕೊಂಡಂತೆ ಕೆಲಸ ಶುರು ಮಾಡಿದರು. ಇಡೀ ರಾಜ್ಯದ ತುಂಬೆಲ್ಲ ಅಭಿವೃದ್ಧಿಯ ಬೀಜ ಬಿತ್ತತೊಡಗಿದರೂ, ತವರು ಜಿಲ್ಲೆಯ ಮೇಲೆ ಮಾತ್ರ ಅವರಿಗೆ ಇದ್ದ ವಿಶೇಷ ಪ್ರೇಮ ಢಾಳಾಗಿ ಕಾಣಲಾರಂಭಿಸಿತು.

ಮೂಗಿನ ಮೇಲೆ ಬೆರಳಿಟ್ಟ ಜನ

ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮೊದಲ ಬಾರಿಗೆ ತವರಿಗೆ ಆಗಮಿಸಿದ ಯಡಿಯೂರಪ್ಪ ಅವರು ಹಾರ-ತುರಾಯಿಯ ಕಾರ್ಯಕ್ರಮದಲ್ಲಿ ಭಾಗಿಯಾಗಲಿಲ್ಲ. ಬದಲಿಗೆ ಅಧಿಕಾರಿಗಳ, ನಗರದ ಗಣ್ಯರ, ಅಭಿವೃದ್ಧಿ ಆಸಕ್ತರ, ವಿವಿಧ ಸಂಘ-ಸಂಸ್ಥೆಗಳ ಮುಖಂಡರ ಸಭೆಯನ್ನು ನಡೆಸಿದರು. ಜಿಲ್ಲೆಗೆ ಏನೇನು ಆಗಬೇಕು ಎಂದು ಪಟ್ಟಿ ಮಾಡಿ ಎಂದು ತಾಕೀತು ಮಾಡಿದರು. ಇದೆಲ್ಲ ಆರಂಭದ ಶೂರತ್ವ ಎಂದುಕೊಂಡವರಿಗೇನೂ ಕಡಿಮೆಯಿರಲಿಲ್ಲ. ಆದರೆ, ದಿನ ಕಳೆದಂತೆ ಒಂದೊಂದೇ ಯೋಜನೆಗಳಿಗೆ ರೂಪ ಸಿಗತೊಡಗಿತು. ಹಣಕಾಸು ಇಲಾಖೆಯ ಅನುಮೋದನೆ ದೊರೆಯತೊಡಗಿತು. ಟೆಂಡರ್ ಆಗಿ ಕಾಮಗಾರಿಗಳೂ ಆರಂಭವಾದವು. ನೋಡ ನೋಡುತ್ತಿದ್ದಂತೆ ಎಲ್ಲ ಕಡೆ ಜಲ್ಲಿ ಕಲ್ಲುಗಳ ಸದ್ದು, ಸಿಮೆಂಟ್ ಧೂಳು ಏಳತೊಡಗಿತು. ಕಟ್ಟಡಗಳು, ರಸ್ತೆಗಳು ಮಿಂಚತೊಡಗಿದವು. ಹಣದ ಹರಿವು ಹೆಚ್ಚಾಯಿತು. ಉದ್ಯೋಗ ಸೃಷ್ಟಿಯಾಯಿತು. ಜನರು ನಿಧಾನವಾಗಿ ಮೂಗಿನ ಮೇಲೆ ಬೆರಳಿಟ್ಟು ನೋಡತೊಡಗಿದರು.

ವಾರಂತ್ಯದಲ್ಲಿ ಜಿಲ್ಲೆಯಲ್ಲಿಯೇ ವಾಸ್ತವ್ಯ

ಬಹುತೇಕ ಪ್ರತಿ ಶನಿವಾರ ಮತ್ತು ಭಾನುವಾರ ಜಿಲ್ಲೆಯಲ್ಲಿಯೇ ವಾಸ್ತವ್ಯ ಹೂಡತೊಡಗಿದರು. ಶನಿವಾರ ಮುಂಜಾನೆ ರೈಲಿನಿಂದ ಇಳಿದರೆ ಯಡಿಯೂರಪ್ಪ ಮನೆ ಕಡೆಗೆ ಹೋಗುತ್ತಿರಲಿಲ್ಲ. ಬದಲಾಗಿ ನೇರವಾಗಿ ಕಾಮಗಾರಿಯ ವೀಕ್ಷಣೆಗೆ ತೆರಳುತ್ತಿದ್ದರು. ಮೊದಲಿಗೆ ಇದು ಆಶ್ಚರ್ಯದಂತೆ ಕಂಡರೂ ಬರು ಬರುತ್ತಾ ಅಧಿಕಾರಿಗಳಿಗೆ ಇದೇ ಅಭ್ಯಾಸವಾಗತೊಡಗಿತು. ಶನಿವಾರ ಮುಂಜಾನೆಯೇ ಕಾಮಗಾರಿ ಸ್ಥಳದಲ್ಲಿ ಸಿದ್ಧವಾಗಿ ಬಿಡುತ್ತಿದ್ದರು. ಪ್ರತಿವಾರ ಕಾಮಗಾರಿಯ ಪ್ರಗತಿ ವೀಕ್ಷಿಸಿ ತಡವಾಗಿದ್ದರೆ ಸ್ಥಳದಲ್ಲಿಯೇ ಸಿಟ್ಟಿನ ಪ್ರದರ್ಶನವೂ ಇರುತ್ತಿತ್ತು. ಹೀಗಾಗಿ ಅಧಿಕಾರಿಗಳು ಕಾಮಗಾರಿ ವೇಗ ಮತ್ತು ಗುಣಮಟ್ಟದ ವಿಚಾರದಲ್ಲಿ ಯಡಿಯೂರಪ್ಪನವರ ವೇಗಕ್ಕೆ ಹೊಂದಿಕೊಂಡರು. ವಾರಾಂತ್ಯದಲ್ಲಿ ರಜೆ ಎಂಬುದನ್ನು ಅಧಿಕಾರಿಗಳು, ಪತ್ರಕರ್ತರು ಮರೆತೇ ಬಿಟ್ಟಿದ್ದರು.

ತವರು ಜಿಲ್ಲೆಗೆ ಒತ್ತುಕೊಟ್ಟ ಮೊದಲ ಸಿಎಂ

ಮುಖ್ಯಮಂತ್ರಿಯಾದ ಬಳಿಕ ಅಭಿವೃದ್ಧಿಗೆ ಇನ್ನೂ ವೇಗ ಸಿಗತೊಡಗಿತು. ಯಡಿಯೂರಪ್ಪನವರ ಅಭಿವೃದ್ಧಿ ಪರ ನಿಲುವು, ಹಿಡಿದ ಹಠ, ಛಲ, ಮುಂದಾಲೋಚನೆಗಳು ಶ್ಲಾಘಿಸಲ್ಪಡಲು ಶುರುವಾದವು. ಇದೇ ವೇಳೆಗೆ ಇದುವರೆಗೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಪ್ರತಿ ಮುಖ್ಯಮಂತ್ರಿಯೂ ತವರು ಜಿಲ್ಲೆಯ ಕಡೆ ಇದೇ ರೀತಿಯ ಅಭಿವೃದ್ಧಿಯ ಮಮತೆ ತೋರಿದ್ದರೆ ಇಡೀ ರಾಜ್ಯವೇ ಅಭಿವೃದ್ಧಿಯ ಉತ್ತುಂಗಕ್ಕೆ ತಲುಪುತ್ತಲಿತ್ತು ಎಂಬ ಮಾತನ್ನು ಇವರೇ ಆಡಿದರು. ಪ್ರತಿ ಬಾರಿ ಶಿವಮೊಗ್ಗಕ್ಕೆ ಬಂದಾಗಲೂ ಇನ್ನೇನು ಆಗಬೇಕು ಎಂಬುದರ ಪಟ್ಟಿ ಕೊಡಿ ಎಂದು ಕೇಳುತ್ತಿದ್ದರು. ಯಾರೇ ಆಗಲಿ ಇಂತಹ ಅಭಿವೃದ್ಧಿ ಆಗಬೇಕೆಂದರೆ ತಡಮಾಡದೆ ಸಿದ್ಧತೆ ಆರಂಭಿಸಿಯೇ ಬಿಡುತ್ತಿದ್ದರು. ಭರಪೂರ ಅಭಿವೃದ್ಧಿ ಕಾಮಗಾರಿಗಳಿಂದಾಗಿ ವಿಪರೀತ ಎನ್ನುವಷ್ಟು ಉದ್ಯೋಗ ಸೃಷ್ಟಿಯಾಗತೊಡಗಿತು. ಹಣದ ಹರಿವು ಜೋರಾಗಿತ್ತು. ಎಲ್ಲ ವ್ಯಾಪಾರ, ಉದ್ದಿಮೆಗಳ ವಹಿವಾಟು ಚಿಗುರತೊಡಗಿತು. ಬೆನ್ನಲ್ಲೇ ರಿಯಲ್ ಎಸ್ಟೇಟ್ ಉದ್ಯಮ ಅಬ್ಬರಿಸತೊಡಗಿತು. ನಗರಕ್ಕೆ ಹೊಂದಿಕೊಂಡಂತೆ ಭೂಮಿ ಹೊಂದಿದ್ದ ರೈತರ ಜಮೀನುಗಳಿಗೆ ಬಂಪರ್ ಬೆಲೆ ಬಂದಿತು.



ಉಡುತಡಿಯ ಅಕ್ಕಮಹಾದೇವಿ ಜನ್ಮಸ್ಥಳ ಅಭಿವೃದ್ಧಿ

ದೇಶದ ಎರಡನೇ ದೊಡ್ಡ ಸಿಗಂದೂರು ಸೇತುವೆಗೆ ನೆರವು



ಇದೆಲ್ಲದಕ್ಕೆ ಮುಕುಟವಿಟ್ಟಂತೆ ನನಸಾಗಲು ಸಾಧ್ಯವೇ ಇಲ್ಲ ಎಂಬಂತಿದ್ದ ಸಿಗಂದೂರು ಸೇತುವೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರದ ನೆರವು ಪಡೆದು, ರಾಜ್ಯದ ಸಹಕಾರ ನೀಡುವುದರೊಂದಿಗೆ ಕಾಮಗಾರಿ ಶಂಕುಸ್ಥಾಪನೆ ಮಾಡಿಸಿಯೇ ಬಿಟ್ಟರು. ಇದು 2025ರಲ್ಲಿ ಲೋಕಾರ್ಪಣೆಗೊಳ್ಳುವುದರೊಂದಿಗೆ ದೇಶದ ಎರಡನೇ ಅತಿ ದೊಡ್ಡ ಸೇತುವೆ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಜಿಲ್ಲೆಯಲ್ಲಿ ಯಡಿಯೂರಪ್ಪನವರ ಅಭಿವೃದ್ಧಿ ಶುರು ಮಾಡುತ್ತಿದ್ದಂತೆ ಖಾಸಗಿ ಹೂಡಿಕೆಯೂ ಹರಿದು ಬರತೊಡಗಿತು. ಸಾವಿರಾರು ಜನರಿಗೆ ಉದ್ಯೋಗ ನೀಡುವ ಶಾಹಿ ಗಾರ್ಮೆಂಟ್, ಐಟಿ ಕಂಪನಿಗಳು ಆಗಮಿಸಿದವು. ಎಷ್ಟೋ ದಶಕದಿಂದ ಖಾಲಿಯಾಗಿಯೇ ಬಿಟ್ಟಿದ್ದ ನಿವೇಶನಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳು ತಲೆ ಎತ್ತಿದವು. ಹೊಸ ಹೊಸ ಶೋ ರೂಮ್‌ಗಳು ಸೇರಿ ಇನ್ನಿತರೆ ಉದ್ಯಮಗಳು ಬಂದವು. ಹೋಟೆಲ್ ಉದ್ಯಮ ಚಿಗುರಿತು.

ಶಿಕಾರಿಪುರಕ್ಕೆ ಆಧುನಿಕ ಸ್ಪರ್ಶ

ತವರು ಕ್ಷೇತ್ರ ಶಿಕಾರಿಪುರ ಎಂದರೆ ಯಡಿಯೂರಪ್ಪನವರಿಗೆ ಇನ್ನಷ್ಟು ಅಚ್ಚುಮೆಚ್ಚು. ಚಿಕ್ಕದಾದ ಶಿಕಾರಿಪುರ ಪಟ್ಟಣಕ್ಕೆ ಕಾಯಕಲ್ಪ ನೀಡಲು ಆರಂಭಿಸಿದರು. ಒಳಚರಂಡಿ ವ್ಯವಸ್ಥೆ, ಉತ್ತಮ ರಸ್ತೆ, ನೀರಾವರಿ ಯೋಜನೆಗೆ ವಿಶೇಷ ಆದ್ಯತೆ, ಶಿಕಾರಿಪುರ ಪಟ್ಟಣದಲ್ಲಿ ಶಾಹಿ ಗಾರ್ಮೆಂಟ್ ಸ್ಥಾಪನೆ ಮೂಲಕ ಸಾವಿರಾರು ಉದ್ಯೋಗ ಸೃಷ್ಟಿ, ಆಧುನಿಕ ವ್ಯವಸ್ಥೆಯುಳ್ಳ ಸರ್ಕಾರಿ ಕಟ್ಟಡಗಳು, ಬಹುಶಃ ರಾಜ್ಯದಲ್ಲಿಯೇ ಪ್ರಥಮ ಬಾರಿಗೆ ತಾಲೂಕು ಕೇಂದ್ರವೊಂದರಲ್ಲಿ ಸಂಗೀತ ಕಾರಂಜಿ ನಿರ್ಮಾಣ.. ಹೀಗೆ ಸಾಲು ಸಾಲು ಅಭಿವೃದ್ಧಿಯನ್ನು ತಂದರು. ಬೇಕಾದಷ್ಟು ಅನುದಾನ ಹರಿದು ಬಂದಿತು. ಆಸ್ಪತ್ರೆ ಮೇಲ್ದರ್ಜೆಗೇರಿತು. ಉಡುತಡಿಯಲ್ಲಿ ಅಕ್ಕಮಹಾದೇವಿ ಜನಸ್ಥಳದ ಅಭಿವೃದ್ಧಿ ಗಮನ ಸೆಳೆಯುವಂತಿದೆ. ಹೀಗೆ ಸಾಲುಸಾಲು ಅಭಿವೃದ್ಧಿಯಿಂದಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಓಡಾಡಿದವರಿಗೆ ಹೊಸ ಜಗತ್ತಿಗೆ ಬಂದ ಅನುಭವವಾಗುತ್ತಿರುವುದು ಸುಳ್ಳಲ್ಲ. ಹೀಗಾಗಿಯೇ ಯಡಿಯೂರಪ್ಪನವರನ್ನು ಶಿವಮೊಗ್ಗದ ಜನತೆ ಆಧುನಿಕ ಶಿವಮೊಗ್ಗದ ನಿರ್ಮಾತೃ ಎಂದು ಯಾವುದೇ ಪಕ್ಷ ಭೇದವಿಲ್ಲದೆ ಕರೆಯುತ್ತಿದ್ದಾರೆ.

ಶಿಥಿಲ ಸರ್ಕಾರಿ ಕಟ್ಟಡಗಳಿಗೆ ಹೊಸ ರೂಪ, ರಸ್ತೆ ಅಭಿವೃದ್ಧಿಗೆ ಕಾಯಕಲ್ಪ

ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಾಣವಾಗಿ ಶಿಥಿಲಾವಸ್ಥೆಯಲ್ಲಿದ್ದ ಡಿಸಿ ಕಚೇರಿ, ಸಾರಿಗೆ ಇಲಾಖೆ, ಜಿಲ್ಲಾ ತರಬೇತಿ ಕೇಂದ್ರ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಲೋಕೋಪಯೋಗಿ ಇಲಾಖೆ (ವಿಶೇಷ ವಿಭಾಗ) ಕಚೇರಿಗಳಿಗೆ ಹೊಸ ಕಟ್ಟಡಗಳನ್ನು ನಿರ್ಮಿಸಿದರು. ಅನೇಕ ಕಟ್ಟಡಗಳಿಗೆ ನವೀಕರಣ ಭಾಗ್ಯ ದೊರಕಿತು. ಹಳೆಯ ಖಾಸಗಿ ಬಸ್ ನಿಲ್ದಾಣ ಮತ್ತು ಸರ್ಕಾರಿ ಬಸ್ ನಿಲ್ದಾಣಗಳನ್ನು ಆಧುನಿಕ ರೀತಿಯಲ್ಲಿ ಅಕ್ಕಪಕ್ಕದಲ್ಲಿಯೇ ನಿರ್ಮಿಸಿದರು. ಕೆಎಸ್‌ಆರ್‌ಟಿಸಿ ಡಿಪೋ ನಿರ್ಮಾಣ, ನೆಹರು ಒಳಾಂಗಣ ಕ್ರೀಡಾಂಗಣ ಹೀಗೆ ಸಾಲು ಸಾಲು ಅಭಿವೃದ್ಧಿಯ ಸಂಕೇತಗಳು ಎದ್ದು ಕಾಣತೊಡಗಿದವು.

ಕೃಷಿ ವಿವಿಯು ಕೃಷಿ ಮತ್ತು ತೋಟಗಾರಿಕಾ ವಿವಿಯಾಗಿ ಮೇಲ್ದರ್ಜೆಗೇರಿತು. ಸಾಗರ ತಾಲೂಕಿನ ಆನಂದಪುರ ಸಮೀಪದ ಇರುವಕ್ಕಿಯಲ್ಲಿ ಸುಮಾರು 800 ಎಕರೆ ಜಾಗ ನೀಡಲಾಯಿತು. ಪಶು ವೈದ್ಯಕೀಯ ಮಹಾವಿದ್ಯಾಲಯ, ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ಸ್ಥಾಪನೆಗೆ ಒಪ್ಪಿಗೆ ಮತ್ತು ಅನುದಾನ ಬಿಡುಗಡೆಯಾಯಿತು. ನಗರದ ಒಳಗೇ ಇದ್ದ ಜಿಲ್ಲಾ ಕೇಂದ್ರ ಕಾರಾಗೃಹವನ್ನು ದೂರದ ಸೋಗಾನೆಗೆ ಸ್ಥಳಾಂತರಿಸುವ ಆದೇಶ ಹೊರಡಿಸಿದರು. ಅಲ್ಲಿ ಆಧುನಿಕ ರೀತಿಯಲ್ಲಿ ಎಲ್ಲ ರೀತಿಯ ಸೌಲಭ್ಯ ಒಳಗೊಂಡ ಕಟ್ಟಡ ನಿರ್ಮಿಸಿದರು. ಇತ್ತ ಕಾರಾಗೃಹ ಇದ್ದ ಜಾಗವನ್ನು ಫ್ರೀಡಂ ಪಾರ್ಕ್ ಆಗಿ ಅಭಿವೃದ್ಧಿಪಡಿಸಿದರು. ನಗರ ಎದೊಳಗಿನ ಬಿ.ಎಚ್.ರಸ್ತೆಯ ಅಗಲೀಕರಣ ಮತ್ತು ಕಾಂಕ್ರೀಟೀಕರಣ, ರಿಂಗ್ ರೋಡ್ ನಿರ್ಮಾಣ, ಎಲ್ಲ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಿದರು.




ಜಿಲ್ಲಾಧಿಕಾರಿಗಳ ಕಚೇರಿ ಕಟ್ಟಡ



ನೀರಾವರಿ ಯೋಜನೆಗಳಿಗೆ ಭಾರಿ ಅನುದಾನ ಬಿಡುಗಡೆ

ಬರೀ ನಗರಕ್ಕೆ ಮಾತ್ರವಲ್ಲ, ಸೊರಬ, ಶಿಕಾರಿಪುರ, ಸಾಗರ ಹೀಗೆ ಅವಶ್ಯಕತೆ ಇರುವ ಕಡೆಗಳಲ್ಲಿ ನೀರಾವರಿ ಯೋಜನೆಗಳಿಗೆ ದೊಡ್ಡ ಮಟ್ಟದ ಅನುದಾನ ಬಿಡುಗಡೆಗೊಳಿಸಿದರು. ತುಂಗಾ ಏತ ನೀರಾವರಿ ಯೋಜನೆ ಸೇರಿ ದಶಕಗಳ ಕಾಲ ನೆನೆಗುದಿಗೆ ಬಿದ್ದ ಕಾಮಗಾರಿಗಳು ಜಾರಿಯಾದವು. ಪ್ರತಿ ತಾಲೂಕಿನಲ್ಲಿಯೂ ಐಟಿಐ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ, ಹೊಸ ಕಟ್ಟಡ ನಿರ್ಮಾಣ, ಒಳಚರಂಡಿ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ, ಹಳೇ ಸರ್ಕಾರಿ ಕಟ್ಟಡಗಳ ಜಾಗದಲ್ಲಿ ಹೊಸ ಕಟ್ಟಡಗಳು ತಲೆ ಎತ್ತಿದವು. ಶಿವಮೊಗ್ಗದಲ್ಲೊಂದು ವೈದ್ಯಕೀಯ ಕಾಲೇಜು ಮತ್ತು ವಿಮಾನ ನಿಲ್ದಾಣ ನಿರ್ಮಾಣ ಎಂಬ ದಶಕಗಳ ಕನಸನ್ನು ನನಸು ಮಾಡುವ ವಿಚಾರದಲ್ಲಿ ತಮ ಬದ್ಧತೆಯನ್ನು ಮೆರೆದರು. ರಾಜ್ಯ ಮುಖ್ಯಕಾರ್ಯದರ್ಶಿಯವರನ್ನೇ ಜಿಲ್ಲೆಗೆ ಕರೆಸಿ ಎಲ್ಲ ಅಡೆತಡೆಗಳನ್ನು ನಿವಾರಿಸಿದರು. ವಿಮಾನ ನಿಲ್ದಾಣಕ್ಕೆ ಬೇಕಾದ ಸುಮಾರು 800 ಎಕರೆ ಜಾಗದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಬಗರ್ ಹುಕುಂ ರೈತರಿಗೂ ಪರಿಹಾರ ನೀಡಿ ರೈತರ ಮನ ಗೆದ್ದರು.

ಶಿವಮೊಗ್ಗ ನಗರಕ್ಕೆ ಬಿಎಸ್‌ವೈ ಕೊಡುಗೆಗಳು



- ರಾಜ್ಯದಲ್ಲೇ ದೊಡ್ಡದಾದ ಖಾಸಗಿ ಬಸ್ ನಿಲ್ದಾಣ ನಿರ್ಮಾಣ
- ಆಧುನಿಕವಾದ ಕೆಎಸ್‌ಆರ್‌ಟಿಸಿ ವಿವಿಧೋದ್ದೇಶ ಬಸ್ ನಿಲ್ದಾಣ
- ಕೆಎಸ್‌ಆರ್‌ಟಿಸಿ ಡಿಪೋ
- ಅಮೀರ್‌ಅಹಮದ್ ವೃತ್ತದಲ್ಲಿ ವಿವಿಧೋದ್ದೇಶ ಅತ್ಯಾಧುನಿಕ ಮಾರುಕಟ್ಟೆ ನಿರ್ಮಾತೃ
- ಸರ್ಕಾರಿ ಪಶು ವೈದ್ಯಕೀಯ ಮಹಾವಿದಾಲಯ
- ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಮಿಳಘಟ್ಟ ಮೂಲಕ 100 ಅಡಿ ರಸ್ತೆ
- ಅಗ್ನಿಶಾಮಕ ದಳದ ಕಟ್ಟಡಗಳು ಮತ್ತು ವಸತಿ ಗೃಹಗಳ ನಿರ್ಮಾಣ
- ಸುವರ್ಣ ಕರ್ನಾಟಕ ಸಂಸ್ಕೃತಿ ಭವನ
- ನೆಹರೂ ಕ್ರೀಡಾಂಗಣದ ಅಭಿವೃದ್ಧಿ ಮತ್ತು ಒಳ ಕ್ರೀಡಾಂಗಣ
- ಮಾಚೇನಹಳ್ಳಿಯಲ್ಲಿ ಕೇಂದ್ರ ಕಾರಾಗೃಹ
- ರಾಜ್ಯ ಮಹಿಳಾ ಕಾರಾಗೃಹ
- ವಿಶೇಷ ಕೈಗಾರಿಕಾ ವಲಯ
- ದೇವಕಾತಿಕೊಪ್ಪ-ಸಿದ್ಲೀಪುರ ವಿಶೇಷ ಕೈಗಾರಿಕಾ ವಲಯ
- ಹಳೇ ಜೈಲು ಆವರಣದಲ್ಲಿ ಫ್ರೀಡಂ ಪಾರ್ಕ್
- ಸರ್ಕಾರಿ ಆಯುರ್ವೇದ ಆಸ್ಪತ್ರೆ ಉನ್ನತೀಕರಣ ಮತ್ತು ಮಹಾವಿದ್ಯಾಲಯ
- ಆಯುರ್ವೇದ ವಿಶ್ವವಿದ್ಯಾಲಯ ಸ್ಥಾಪನೆಗಾಗಿ ದೊಡ್ಡಬೀಳು ಬಳಿ 100 ಎಕರೆ ಭೂಮಿ ಮೀಸಲು
- ಮೆಗ್ಗಾನ್ ಆಸ್ಪತ್ರೆ ಆವರಣದಲ್ಲಿ ಹೃದ್ರೋಗ ವಿಭಾಗಕ್ಕೆ ಪ್ರತ್ಯೇಕ ಕಟ್ಟಡ
- ಮೆಗ್ಗಾನ್ ಆಸ್ಪತ್ರೆ ಕಟ್ಟಡದಲ್ಲಿ ಮತ್ತೊಂದು ಅಂತಸ್ತು ವಿಸ್ತರಣೆ
- ಸರ್ಕಾರಿ ವೈದ್ಯಕೀಯ ವಿಜ್ಞಾನಗಳ ಕಾಲೇಜು ಅಭಿವೃದ್ಧಿ
- ನಗರದೊಳಗೆ ಬಿ.ಎಚ್.ರಸ್ತೆ, ಅಮೀರ್‌ಅಹಮದ್, ಶಿವಪ್ಪನಾಯಕ ವೃತ್ತ ಅಭಿವೃದ್ಧಿ
- ಹೊನ್ನಾಳಿ ರಸ್ತೆಯಲ್ಲಿ ರೈಲ್ವೆ ಮೇಲ್ಸೇತುವೆ
- ಜಿಲ್ಲಾ ತರಬೇತಿ ಕೇಂದ್ರಕ್ಕೆ ನೂತನ ಕಟ್ಟಡ ನಿರ್ಮಾಣ
- ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರಕ್ಕೆ ನೂತನ ಕಟ್ಟಡ
- 100 ಅಡಿ ವರ್ತುಲ ರಸ್ತೆ ಅಭಿವೃದ್ಧಿ
- ತ್ಯಾವರೆಕೊಪ್ಪ ಹುಲಿ-ಸಿಂಹಧಾಮಕ್ಕೆ ನೀರು ಸರಬರಾಜು
- ತುಂಗಾ ನದಿಗೆ ಪ್ರವಾಹ ತಡೆಗೋಡೆ
- ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯ
- ಕೃಷಿ ವಿಶ್ವವಿದ್ಯಾಲಯಕ್ಕೆ ಇರುವಕ್ಕಿಯಲ್ಲಿ ನೂತನ ಕ್ಯಾಂಪಸ್
- ಶಿವಮೊಗ್ಗ- ತಾಳಗುಪ್ಪಕ್ಕೆ ಬ್ರಾಡ್ ಗೇಜ್ ರೈಲ್ವೆ ಮಾರ್ಗ
- ಭದ್ರಾ ಕಾಲುವೆಗಳ ಆಧುನೀಕರಣ
- ಶಿವಮೊಗ್ಗ-ಹಾನಗಲ್ ರಸ್ತೆ ನಿರ್ಮಾಣ
- ನಗರದಲ್ಲಿ ತುಂಗಾ ನದಿಗೆ ಸೇತುವೆ ನಿರ್ಮಾಣ
- ಹೊಳಲೂರು ಬಳಿ ತುಂಗಾಭದ್ರಾ ನದಿಗೆ ಸೇತುವೆ
- ಶಿವಮೊಗ್ಗ ನಗರದ ಹೊರವರ್ತುಲ ರಸ್ತೆ ನಿರ್ಮಾಣಕ್ಕೆ ಕ್ರಮ
- ಮಾಚೇನಹಳ್ಳಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್
- ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಖಾಸಗಿ ಸಂಸ್ಥೆ ಸಹಭಾಗಿತ್ವದಲ್ಲಿ ಜವಳಿ ಪಾರ್ಕ್
- ಶಿವಮೊಗ್ಗ ನಗರದ ಒಳಚರಂಡಿ ಯೋಜನೆ
- ಲೋಕೋಪಯೋಗಿ ಇಲಾಖೆ ಕಚೇರಿ ಸಂಕೀರ್ಣ
- ಸೋಗಾನೆಯಲ್ಲಿ ವಿಮಾನ ನಿಲ್ದಾಣ
- ನೆಹರೂ ರಸ್ತೆ ಅಭಿವೃದ್ಧಿ
- ಶಂಕರಮಠ ರಸ್ತೆ ಅಭಿವೃದ್ಧಿ
- ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜಿಗೆ ಹೆಚ್ಚುವರಿ ಕಟ್ಟಡ
- ಶಿವಮೊಗ್ಗ ನಗರದಲ್ಲಿ ಲೋಕೋಪಯೋಗಿ ಇಲಾಖೆ ನೌಕರರಿಗೆ ವಸತಿ ಗೃಹಗಳ ಸಂಕೀರ್ಣ
- ಪ್ರವಾಸಿ ಮಂದಿರದ ಸಿಬ್ಬಂದಿಗೆ ವಸತಿ ಗೃಹಗಳ ಸಂಕೀರ್ಣ
- ಶಿವಮೊಗ್ಗ ನಗರದ ಕುವೆಂಪು ರಸ್ತೆಯಲ್ಲಿ ನ್ಯಾಯಾಧೀಶರಿಗೆ ವಸತಿ ಗೃಹ
- ಸರ್ಕ್ಯೂಟ್ ಹೌಸ್ ಆವರಣದಲ್ಲಿ ವಿವಿಐಪಿ ಅತಿಥಿ ಗೃಹ
- ಸರ್ಕ್ಯೂಟ್ ಹೌಸ್ ಆವರಣದಲ್ಲಿ ಹೆಲಿಪ್ಯಾಡ್
- ಸಾರಿಗೆ ಇಲಾಖೆ ಕಚೇರಿ ಮತ್ತು ಟ್ರ್ಯಾಕ್ ನಿರ್ಮಾಣ
- ಡಿಸಿ ಕಚೇರಿ ಸಂಕೀರ್ಣ

ಶಿಕಾರಿಪುರ ಪಟ್ಟಣದ ಅಭಿವೃದ್ಧಿ

- ಪಟ್ಟಣದಲ್ಲಿ ರಂಗಮಂದಿರ ನಿರ್ಮಾಣ
- ತಾಲೂಕು ಕಚೇರಿ ಕಟ್ಟಡಗಳ ಸಂಕೀರ್ಣ ನಿರ್ಮಾಣ
- ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ
- ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆ ಮತ್ತು ಕಾಲೇಜು ಕಟ್ಟಡ
- ಉದ್ಯಾನವನ ಅಭಿವೃದ್ಧಿ
- ಪಶು ಆಹಾರ ಘಟಕ
- ಶಿಕಾರಿಪುರ ನಗರದ ಒಳಚರಂಡಿ ಯೋಜನೆ
- ಅತಿಥಿ ಗೃಹಗಳ ನಿರ್ಮಾಣ
- ಪ್ರವಾಸಿ ಮಂದಿರದಲ್ಲಿ ವಿವಿಐಪಿ ಅತಿಥಿ ಗೃಹ
- ಅಗ್ನಿಶಾಮಕ ಠಾಣೆ ಮತ್ತು ವಸತಿಗೃಹ
- ಸರ್ಕಾರಿ ನೌಕರರ ವಸತಿ ಗೃಹ
- ಲೋಕೋಪಯೋಗಿ ಇಲಾಖೆ ಸಿಬ್ಬಂದಿಗೆ ವಸತಿ ಗೃಹ
- ಶಿರಾಳಕೊಪ್ಪದಲ್ಲಿ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್ ಕಾಲೇಜು, ಹಾಸ್ಟೆಲ್
- ಶಿರಾಳಕೊಪ್ಪದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ

ಇತರೆ ತಾಲೂಕುಗಳಲ್ಲಿ...

ಸಾಗರ:-

- ಪಟ್ಟಣದಲ್ಲಿ ಸರ್ಕಾರಿ ಪಿಯು ಕಾಲೇಜು ಕಟ್ಟಡಕ್ಕೆ ಹೆಚ್ಚುವರಿ ಕೊಠಡಿಗಳು
- ಸರ್ಕಾರಿ ಪಿಯು ಕಾಲೇಜು ಕಟ್ಟಡ
- ತುಮರಿಯಲ್ಲಿ ಸರ್ಕಾರಿ ಪಿಯು ಕಾಲೇಜು ಕಟ್ಟಡ ನಿರ್ಮಾಣ
- ಬರೂರು ಗ್ರಾಮದಲ್ಲಿ ಸರ್ಕಾರಿ ಪಿಯು ಕಾಲೇಜು
- ಲಿಂಗನಮಕ್ಕಿ ಹಿನ್ನೀರಿನಲ್ಲಿ ಅಂಬಾರಗೋಡ್ಲು- ಕಳಸವಳ್ಳಿ ಸೇತುವೆ
- ನಗರದ ಕುಡಿಯುವ ನೀರು ಹಾಗೂ ಒಳಚರಂಡಿ ಯೋಜನೆ
- ಪಟ್ಟಣದ ಸರ್ಕಾರಿ ನೌಕರರ ವಸತಿ ಗೃಹಗಳ ನಿರ್ಮಾಣ
- ಪಟ್ಟಣದಲ್ಲಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ ಮತ್ತು ಟ್ರ್ಯಾಕ್

ಹೊಸನಗರ:-

- ಹೊಸನಗರದಲ್ಲಿ ಮಿನಿ ವಿಧಾನಸೌಧ ನಿರ್ಮಾಣ
- ಚಕ್ರಾ ನಗರಲ್ಲಿ ವನ್ಯಜೀವಿ ಸಂಶೋಧನ ಕೇಂದ್ರ
- ಲಿಂಗನಮಕ್ಕಿ ಹಿನ್ನೀರು ಪಟಗುಪ್ಪ ಸೇತುವೆ
- ಕೊಡಚಾದ್ರಿ, ಬೆಟ್ಟಕ್ಕೆ ಸಂಪರ್ಕ ರಸ್ತೆ

ಭದ್ರಾವತಿ:-

- ಭದ್ರಾವತಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣ
- ಭದ್ರಾವತಿ ನಗರದ ಒಳಚರಂಡಿ ಯೋಜನೆ
- ಭದ್ರಾವತಿ ವಿಐಎಸ್‌ಎಸ್ಜೆ ಸರಕಾರಿ ಪಾಲಿಟೆಕ್ನಿಕ್‌ಗೆ ವಿದ್ಯಾರ್ಥಿ ನಿಲಯ

ಸೊರಬ: -

- ಸೊರಬದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡಕ್ಕೆ ಕಾರ್ಯಾಗಾರ, ಗ್ರಂಥಾಲಯ ಹಾಗೂ ಕಾಂಪೌಂಡ್ ನಿರ್ಮಾಣ
- ಆನವಟ್ಟಿಯಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡ
- ಆನವಟ್ಟಿಯಲ್ಲಿ ಟಿಸಿಎಚ್ ಕಾಲೇಜು ಕಟ್ಟಡದ ಉಳಿಕೆ ಕಾಮಗಾರಿ

ತೀರ್ಥಹಳ್ಳಿ:-

- ತೀರ್ಥಹಳ್ಳಿ ಪಟ್ಟಣದಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡ



ಆಯುರ್ವೇದ ಕಾಲೇಜು



ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್



ಶಿವಮೊಗ್ಗ ಸರ್ಕಾರಿ ಮೆಡಿಕಲ್ ಕಾಲೇಜು



ಅಗಲೀಕರಣಗೊಂಡ ಬಿ.ಹೆಚ್. ರಸ್ತೆ

ರಾಜ್ಯದಲ್ಲಿ ತಾಪಮಾನ
ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಬೀದರ್	ಕಲಬುರಗಿ	ರಾಯಚೂರು	ವಿಜಯಪುರ	ಕೊಪ್ಪಳ
ಗರಿಷ್ಠ	43.4	42.3	41.2	40.5	39.4
ಕನಿಷ್ಠ	26.0	27.1	27.0	22.5	23.5

ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಪ್ರವೇಶಕ್ಕೆ ಆಹ್ವಾನ

ಮಂಗಳೂರು: ಮಂಗಳೂರಿನ ಬೈಕಂಪಾಡಿಯ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) 2026-27ನೇ ಸಾಲಿನ ಮೂರು ವರ್ಷ ಅವಧಿಯ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ಪ್ರಾಂಶುಪಾಲ ಲಕ್ಷ್ಮೀನಾರಾಯಣ ಸಿ.ಪಿ. ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿದ್ದು, ಮೇ 10 ಅರ್ಜಿ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಕೋರ್ಸ್‌ಗಳಲ್ಲೂ ಶೇ.30 ತಿಯರಿ ಮತ್ತು ಶೇ.70 ಪ್ರಾಕ್ಟಿಕಲ್ ಆದ್ಯತೆ ನೀಡಲಾಗಿದೆ. ಪಿಯುಸಿ (ಸೈನ್ಸ್) ಹಾಗು ಐಟಿಐ (ಮೆಕಾನಿಕಲ್) ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳು ನೇರವಾಗಿ ದ್ವಿತೀಯ ವರ್ಷದ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಹರಾಗಿರುತ್ತಾರೆ. ಸಂಸ್ಥೆಯ ಉಪನ್ಯಾಸಕರಾದ ಯಜ್ಞೇಶ್, ಪ್ರಮೀತ್, ಝೀಟಾ ಡಿಸೋಜಾ, ಗೌತಮ್ ಇದ್ದರು.

ಬೆತ್ತಲೆ ಫೋಟೋ ಕಳಿಸಲು ಮಹಿಳೆಗೆ ₹30 ಲಕ್ಷ ಆಮಿಷವೊಡ್ಡಿದ ಕಿಡಿಗೇಡಿ

ರಾಮನಗರ: ವ್ಯಕ್ತಿಯೊಬ್ಬ ಪಕ್ಕದ ಮನೆಯ ಯುವತಿಗೆ ಮಾಟಮಂತ್ರದ ಹೆಸರಿನಲ್ಲಿ ₹30 ಲಕ್ಷ ಆಮಿಷವೊಡ್ಡಿ, ಬೆತ್ತಲೆ ಫೋಟೋ ನೀಡುವಂತೆ ಒತ್ತಾಯಿಸಿ ಕಿರುಕುಳ ನೀಡಿರುವ ಘಟನೆ ತಾಲೂಕಿನ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ನಡೆದಿದೆ. ಕಿರಣ್ ಎಂಬಾತ ಆರೋಪಿ. ಯುವತಿಗೆ ಮನಿ ಡಬ್ಲಿಂಗ್ ಮಾಡುವ ಪೂಜೆಗೆ ನಿನ್ನನ್ನು ಆಯ್ಕೆ ಮಾಡಬೇಕಾದರೆ ನೀನು ಬೆತ್ತಲೆ ಫೋಟೋ ಕಳಿಸು ಎಂದು ಮೆಸೇಜ್ ಮಾಡುತ್ತಿದ್ದ. ನಾನು ಬೆಂಗಳೂರಲ್ಲಿ ವಿಶೇಷ ಪೂಜೆ ಮಾಡಿಸುತ್ತಿದ್ದೇನೆ. ಇದಕ್ಕೆ ಮೈ ಮೇಲೆ ಮಚ್ಚೆ ಇಲ್ಲದ ಮಹಿಳೆ ನಗ್ನವಾಗಿ ಕೂರಬೇಕು. ಆ ಪೂಜೆಗೆ ನಿನ್ನನ್ನು ಆಯ್ಕೆ ಮಾಡಲು ನಿನ್ನ ಬೆತ್ತಲೆ ಫೋಟೋ ಕಳಿಸು. ಪೂಜೆ ಮುಗಿದ ಬಳಿಕ ₹30 ಲಕ್ಷ ಕೊಡುತ್ತೇನೆ ಎಂದು ಕಿರುಕುಳ ನೀಡುತ್ತಿದ್ದ. ಇತರ ಕೆಲವು ಯುವತಿಯರ ಫೋಟೋಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಕಳಿಸಿ ನಂಬಿಸಲು ಯತ್ನಿಸಿದ್ದಾನೆ. ಈತನ ವಿರುದ್ಧ ಯುವತಿ ರಾಮನಗರ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿ ಕಿರಣ್ ಪರಾರಿಯಾಗಿದ್ದಾನೆ.

ಕುಕನೂರು ಶಾಲೆಯ ಆವರಣದಲ್ಲಿ ನವಜಾತ ಶಿಶು ಬಿಟ್ಟು ಪರಾರಿ

ಕುಕನೂರು (ಕೊಪ್ಪಳ): ಸರ್ಕಾರಿ ಶಾಲೆ ಅಂಗಳದಲ್ಲಿ ತಾಯಿಯೊಬ್ಬಳು ಆಗತಾನೆ ಹುಟ್ಟಿದ ಮಗುವನ್ನು ಬಿಟ್ಟುಹೋಗಿದ್ದು ಮಗುವಿನ ಅಳು ಕೇಳಿದ ಗ್ರಾಮಸ್ಥರು ಕಂದಮ್ಮನನ್ನು ರಕ್ಷಿಸಿದ ಮನಕಲಕುವ ಘಟನೆ ಕೊಪ್ಪಳ ಜಿಲ್ಲೆಯ ಕುಕನೂರು



ತಾಲೂಕಿನ ದ್ಯಾಂಪುರು ಗ್ರಾಮದಲ್ಲಿ ನಡೆದಿದೆ. ಆಗ ತಾನೆ ಹುಟ್ಟಿದ ಮಗುವಿಗೆ ಬಿಸಿನೀರಿನಲ್ಲಿ ಸ್ನಾನ ಮಾಡಿಸಿ, ಹಾಲುಣಿಸಿದ್ದಾರೆ. ಆರೋಗ್ಯ ಸಹಾಯಕ ಕಾಳಪ್ಪ ಕುಂಬಾರ ಆಗಮಿಸಿ ವೈದ್ಯರಿಗೆ, ಮಕ್ಕಳ ಇಲಾಖೆಗೆ ಮಾಹಿತಿ ನೀಡಿದರು. ಕುಕನೂರು ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ರಾಮಕೃಷ್ಣರೆಡ್ಡಿ ಮಗುವನ್ನು ತಮ್ಮ ಸಿಬ್ಬಂದಿ ಜತೆ ಆ್ಯಂಬುಲೆನ್ಸ್‌ನಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಕಳುಹಿಸಿದರು. ಬಳಿಕ ಆರೈಕೆಗಾಗಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಿಸಲಾಯಿತು.

ರಾಜ್ಯದಲ್ಲಿ ನೀಟ್ ಸುಸೂತ್ರ: ಪರೀಕ್ಷೆ ಬರೆದ 50000 ವಿದ್ಯಾರ್ಥಿಗಳು

ಬೆಂಗಳೂರು: ಎಂಬಿಬಿಎಸ್ ಪದವಿ ಕೋರ್ಸ್ ಪ್ರವೇಶಕ್ಕೆ ನಡೆಸುವ ನೀಟ್ ಪರೀಕ್ಷೆ ರಾಜ್ಯಾದ್ಯಂತ ಯಾವುದೇ ಅಹಿತಕರ ಘಟನೆಗಳು ಇಲ್ಲದೆ ಸುಸೂತ್ರವಾಗಿ ನಡೆದಿದೆ ಎಂದು ತಿಳಿದು ಬಂದಿದೆ. ಬೆಂಗಳೂರು, ಮೈಸೂರು, ಶಿವಮೊಗ್ಗ ಸೇರಿ ರಾಜ್ಯದ



ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಡೆದ ಪರೀಕ್ಷೆಯಲ್ಲಿ ಸುಮಾರು 50,000 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದಾರೆ. 2026-27ನೇ ಸಾಲಿಗೆ ರಾಜ್ಯದ ವಿವಿಧ ಮೆಡಿಕಲ್ ಕಾಲೇಜುಗಳಲ್ಲಿ ಒಟ್ಟು 13,000 ಸೀಟುಗಳು ಲಭ್ಯವಿದ್ದು, ಇದು ದೇಶದಲ್ಲೇ ಅತ್ಯಧಿಕವಾಗಿದೆ. ಇದೇ ವೇಳೆ ಬೆಂಗಳೂರಲ್ಲಿ ಪರೀಕ್ಷೆಗೆ 10 ನಿಮಿಷ ತಡವಾಗಿ ಬಂದ ಇಬ್ಬರು ಮಹಿಳಾ ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ ನಿರಾಕರಿಸಿದ ಘಟನೆ ನಡೆಯಿತು. ಮಧ್ಯಾಹ್ನ 2 ರಿಂದ ಸಂಜೆ 5 ಗಂಟೆವರೆಗೆ ಪರೀಕ್ಷೆ ನಡೆಯಿತು. ನಿಯಮಾನುಸಾರ ಮಧ್ಯಾಹ್ನ 1.30ಕ್ಕೆ ಪರೀಕ್ಷಾ ಕೇಂದ್ರದ ಗೇಟ್ ಬಂದ್ ಮಾಡಲಾಗಿತ್ತು.

ಸುದ್ದಿ ಸಿಂಚನ

ಶಿವಮೊಗ್ಗ: ಹಾವು ಕಚ್ಚಿ ಗರ್ಭಿಣಿ ಸಾವು

ಆನಂದಪುರ: ಶುಂಠಿ ಹೊಲದಲ್ಲಿ ಕೆಲಸ ಮಾಡಿದ ಬಳಿಕ



ಊಟ ಮುಗಿಸಿ ವಿಶ್ರಾಂತಿ ಪಡೆಯುತ್ತಿರುವ ವೇಳೆ ಹಾವು ಕಚ್ಚಿ 6 ತಿಂಗಳ ಗರ್ಭಿಣಿ ಸಾವನ್ನಪ್ಪಿರುವ ಘಟನೆ ಶನಿವಾರ ನಡೆದಿದೆ. ಶಿವಮೊಗ್ಗ ಜಿಲ್ಲೆ ಆನಂದಪುರ ಸಮೀಪದ ಸುಳಗೋಡು ಗ್ರಾಮದ ಸ್ವಾತಿ (26) ಮೃತರು. ಇವರು ವಿಶ್ರಾಂತಿ ಪಡೆಯುತ್ತಿದ್ದಾಗ ಬಲಗಾಲಿಗೆ ವಿಷಪೂರಿತ ಹಾವು ಕಚ್ಚಿತು. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಬಹಿರ್ದೆಸೆಗೆ ಹೋಗಿದ್ದ ವ್ಯಕ್ತಿ ಮೇಲೆ ಮೊಸಳೆ ದಾಳಿ

ದಾಂಡೇಲಿ: ಸಾರ್ವಜನಿಕ ಶೌಚಾಲಯ ದುಸ್ಥಿತಿಯಲ್ಲಿರುವ ಕಾರಣ ಬಹಿರ್ದೆಸೆಗೆ ಕಾಳಿ ನದಿಗೆ ತೆರಳಿದ್ದ ವ್ಯಕ್ತಿಯೋರ್ವನ ಮೇಲೆ ಮೊಸಳೆ ದಾಳಿ ನಡೆಸಿದ್ದು ಆತ ಗಂಭೀರ ಗಾಯಗೊಂಡ ಘಟನೆ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಭಾನುವಾರ ನಡೆದಿದೆ. ಆನಂದ ಲಲ್ಲೂಜಿ, ಮೊಸಳೆ ದಾಳಿಗೆ ಒಳಗಾದ ವ್ಯಕ್ತಿ. ಆನಂದ ಕಿರುಚಾಡುವುದನ್ನು ಕೇಳಿಸಿಕೊಂಡ ಸ್ಥಳೀಯರು ಸ್ಥಳಕ್ಕೆ ಆಗಮಿಸಿ ಮೊಸಳೆ ಓಡಿಸಿದ್ದಾರೆ. ಕಾಲಿಗೆ ಹಾಗೂ ಇನ್ನಿತರ ಭಾಗಗಳಿಗೆ ಗಾಯವಾಗಿದ್ದು, ತಕ್ಷಣ ನಗರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆತರಲಾಗಿದೆ. ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಧಾರವಾಡಕ್ಕೆ ಕಳಿಸಲಾಗಿದೆ.

13ರ ಬಾಲಕಿ ಸಾವು: ಹೃದಯಾಘಾತ ಶಂಕೆ

ಜೋಯಿಡಾ: ಆರೋಗ್ಯವಾಗಿಯೇ ಇದ್ದ 13 ವರ್ಷದ ಬಾಲಕಿಯೊಬ್ಬಳು ಹಠಾತ್ ಸಾವಿಗೀಡಾಗಿರುವ ಘಟನೆ ತಾಲೂಕಿನ ಚಾಪಾಲಿ ಗೌಳಿವಾಡಾದಲ್ಲಿ ನಡೆದಿದೆ. ಗಂಗು (13) ಎಂಬ ಈ ಬಾಲಕಿಯ ಸಾವಿಗೆ ಹೃದಯಾಘಾತ ಕಾರಣವಿರಬಹುದು ಎಂದು ಹೇಳಲಾಗುತ್ತಿದೆ. ರಾಮನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದ ಗಂಗು, ಬಾಲಕಿಯರ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದಳು. ಬೇಸಿಗೆ ರಜೆಗೆ ಮನೆಗೆ ಬಂದಿದ್ದಳು. ರಾತ್ರಿ ಊಟದ ನಂತರ ಮಲಗಿದ್ದ ಗಂಗು ಬೆಳಗ್ಗೆ ವಾಂತಿ ಮಾಡಿಕೊಂಡು ಕೆಲವೇ ಕ್ಷಣಗಳಲ್ಲಿ ಪ್ರಾಣಬಿಟ್ಟಿದ್ದಾಳೆ. ಆಸ್ಪತ್ರೆಗೆ ಕರೆದೊಯ್ಯುವ ಮುನ್ನವೇ ಆಕೆ ಮೃತಪಟ್ಟಿದ್ದಾಳೆ.

ನಾಡಿದ್ದು ಅರ್ಜುನ ಆನೆ ಸ್ಮಾರಕ ಲೋಕಾರ್ಪಣೆ

ಸಕಲೇಶಪುರ(ಹಾಸನ): ತಾಲೂಕಿನ ಯಸಳೂರು ಅರಣ್ಯ



ವ್ಯಾಪ್ತಿಯಲ್ಲಿ ಎರಡು ವರ್ಷಗಳ ಹಿಂದೆ ಪುಂಡಾನೆ ಸೆರೆ ಕಾರ್ಯಾಚರಣೆ ವೇಳೆ ಹುತಾತ್ಮನಾದ ಸಾಕಾನೆ ಅರ್ಜುನನ ಸಮಾಧಿ ಸ್ಥಳ(ದಬ್ಬಳ್ಳಿಕಟ್ಟೆ)ದಲ್ಲಿ ನಿರ್ಮಿಸಿರುವ ಸ್ಮಾರಕವನ್ನು ಮೇ 6ರಂದು ಉದ್ಘಾಟಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಅರ್ಜುನ ಆನೆ ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಗಜಗಾಂಭೀರ್ಯದಿಂದ ಹೆಜ್ಜೆಹಾಕಿ ಜನರ ಮನಗೆದ್ದಿತ್ತು. 2023ರ ಡಿ.4ರಂದು ನಡೆದ ಪುಂಡಾನೆ ಸೆರೆ ಕಾರ್ಯಾಚರಣೆ ವೇಳೆ ಅರ್ಜುನನ ಸಾವಿನಿಂದ ಅರಣ್ಯ ಇಲಾಖೆಗೆ ಅಪಾರ ನಷ್ಟ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಸಮಾಧಿ ಸ್ಥಳದಲ್ಲಿಯೂ ಹಾಗೂ ನಾಗರಹೊಳೆಯ ಬಳ್ಳೆ ಶಿಬಿರದಲ್ಲಿಯೂ ಸ್ಮಾರಕ ನಿರ್ಮಿಸಲಾಗುವುದು ಎಂದು ಸರ್ಕಾರ ಘೋಷಿಸಿತ್ತು. ಬಳ್ಳೆ ಶಿಬಿರದ ಸ್ಮಾರಕ ಅನಾವರಣ ಮಾಡಲಾಗಿದೆ. ಈಗ ಯಸಳೂರಿನ ಸ್ಮಾರಕ ಉದ್ಘಾಟನೆಗೆ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಕೇಂದ್ರದ ಎಡಿಸಿಸಿ ನೀತಿಯಿಂದ ಚಿತ್ರಗಳಿಗೆ ಫಜೀತಿ

ಅಂಧ, ಶ್ರವಣದೋಷವುಳ್ಳವರೂ ಸಿನಿಮಾ ನೋಡುವಂಥ ವಿಶೇಷ ವ್ಯವಸ್ಥೆ ಕಲ್ಪಿಸಲು ಕೇಂದ್ರ ವಾರ್ತಾ ಇಲಾಖೆಯಿಂದ ಹೊಸ ನಿಯಮ
ಅದನ್ನು ಅಳವಡಿಕೆಗೆ ಬೇಕು 1 ಲಕ್ಷ ರು.ಗೂ ಅಧಿಕ ಹಣ | ಈಗಾಗಲೇ ನಷ್ಟದಲ್ಲಿರುವ ಸಿನಿಮಾ ನಿರ್ಮಾಪಕರ ಜೇಬಿಗೆ ಮತ್ತೊಂದು ಬರೆ

• **ಪ್ರಿಯಾ ಕೆರ್ವಾಶೆ**
ಕನ್ನಡಪ್ರಭ ವಾರ್ತೆ ಬೆಂಗಳೂರು

ಅಂಧ, ಶ್ರವಣದೋಷವುಳ್ಳ ವಿಶೇಷಚೇತನರೂ ಸಾಮಾನ್ಯ ಪ್ರೇಕ್ಷಕರಂತೆಯೇ ಸಿನಿಮಾ ಆಸ್ವಾದಿಸಬೇಕೆಂಬ ಉದ್ದೇಶದಿಂದ ಕೇಂದ್ರ ವಾರ್ತಾ ಮತ್ತು ಪ್ರಸಾರ ಇಲಾಖೆ ಹೊರತಂದಿರುವ 'ಎಡಿಸಿಸಿ' ನಿಯಮ ಕನ್ನಡ ನಿರ್ಮಾಪಕರ ಪಾಲಿಗೆ ಗಾಯದ ಮೇಲೆ ಬರೆ ಎಳೆದಿದೆ. ಪ್ರೇಕ್ಷಕರು ಚಿತ್ರಮಂದಿರಗಳಿಗೆ ಬಾರದೆ ವಿಪರೀತ ನಷ್ಟ ಅನುಭವಿಸುತ್ತಿರುವ ಅವರಿಗೆ ಈ ನಿಯಮ ನುಂಗಲೂ ಆಗದ ಉಗುಳಲೂ ಆಗದ ಬಿಸಿತುಪ್ಪದಂತಾಗಿದೆ.

ಏನಿದು ಎಡಿಸಿಸಿ ನಿಯಮ?: ಎಡಿಸಿಸಿ ನಿಯಮ ಅಂದರೆ ಅಂಧ ಹಾಗೂ ಶ್ರವಣ ದೋಷವುಳ್ಳ ವಿಶೇಷ ಚೇತನರಿಗೆ ಸಿನಿಮಾ ನೋಡಲು ಬೇಕಾದ ವಿಶೇಷ ವ್ಯವಸ್ಥೆ. ದೃಷ್ಟಿ ಸಮಸ್ಯೆ ಇರುವವರು ಚಿತ್ರಮಂದಿರಕ್ಕೆ ಬಂದರೆ ಅವರಿಗೆ ಸಿನಿಮಾ ಡೈಲಾಗ್‌ಗಳು ಕೇಳಿಸುತ್ತಿರುತ್ತವೆ. ಆದರೆ ಕೆಲವೊಮ್ಮೆ ಭಾವನಾತ್ಮಕ ಸನ್ನಿವೇಶಗಳಲ್ಲಿ, ಎದುರು ಪ್ರಾಣಿ ಬಂದಾಗ ಸಂಭಾಷಣೆಗಳು ಇರುವುದಿಲ್ಲ. ಆಗ ಸಿನಿಮಾದಲ್ಲಿ ಏನು ನಡೆಯುತ್ತಿದೆ



ಎಂಬುದು ಅರ್ಥವಾಗುವುದಿಲ್ಲ. ಇನ್ನೊಂದೆಡೆ ಶ್ರವಣ ಸಮಸ್ಯೆ ಇರುವವರಿಗೆ ದೃಶ್ಯ ಕಂಡರೂ ಡೈಲಾಗ್ ಕೇಳಿಸದ ಕಾರಣ ಕಥೆಯಲ್ಲೇನಾಗುತ್ತದೆ ಎಂಬುದು ತಿಳಿಯುವುದಿಲ್ಲ. ಎಡಿಸಿಸಿ ಡಿಸ್ಕ್ರಿಪ್ಷನ್‌ನಲ್ಲಿ ಇಡೀ ಸಿನಿಮಾದ ಕಥೆಯ ವಿವರಣೆ ನೀಡಲಾಗುತ್ತದೆ. ವಿಶೇಷಚೇತನರು ಹೆಡ್‌ಫೋನ್ ಮೂಲಕ ಈ ವಿವರಣೆ ಕೇಳಬಹುದು, ಅದೇ ರೀತಿ ಶ್ರವಣ ಸಮಸ್ಯೆ ಇರುವವರಿಗೆ ಅವರು ನೋಡುತ್ತಿರುವ ಸಿನಿಮಾದ ಭಾಷೆಯಲ್ಲಿ ಸಂಪೂರ್ಣ ಸ್ಕ್ರಿಪ್ಟ್ ನೀಡಲಾಗುತ್ತದೆ. ಸಬ್‌ಟೈಟಲ್ ರೀತಿ ಅದನ್ನು ಗ್ರಹಿಸಬಹುದು.

ಹಾಗಿದ್ದರೆ ಸಮಸ್ಯೆ ಏನು?: ಈಗಾಗಲೇ ಸಿನಿಮಾಗಳು ನಷ್ಟ ಅನುಭವಿಸುತ್ತಿರುವ ನೋವಿನಲ್ಲಿರುವ ನಿರ್ಮಾಪಕರ ಪಾಲಿಗೆ ಈ ನಿಯಮ ಹೊಸ ಹೊರೆಯಾಗಿ ಪರಿಣಮಿಸಿದೆ. ಎಡಿಸಿಸಿ ವ್ಯವಸ್ಥೆ ಅಳವಡಿಕೆಯಿಂದ ಪ್ರತಿ ಸಿನಿಮಾ ನಿರ್ಮಾಪಕರಿಗೂ ಅಂದಾಜು 1 ಲಕ್ಷಕ್ಕೂ ಅಧಿಕ ಹೊರೆ ಬೀಳುತ್ತದೆ. ಚಿತ್ರಮಂದಿರಕ್ಕೆ ಬಂದು ಸಿನಿಮಾ ನೋಡುವ ವಿಶೇಷಚೇತನ ವ್ಯಕ್ತಿಗಳ ಸಂಖ್ಯೆ ಬೆರಳೆಣಿಕೆಯಷ್ಟು. ಅಂದರೆ ನಿರ್ಮಾಪಕ ಹಾಕಿದ 1 ಲಕ್ಷ ರು. ಆತನಿಗೆ ವಾಪಸ್ ಬರಬೇಕೆಂದರೆ 200 ರು. ಟಿಕೆಟ್ ಖರೀದಿಸಿದ 1000 ವಿಕಲಚೇತನರು ಈ ಸಿನಿಮಾ ನೋಡಬೇಕು. (ಟಿಕೆಟ್ ಬೆಲೆ 200 ರು. ಇದ್ದರೆ ನಿರ್ಮಾಪಕನ ಕೈಸೇರುವುದು 100 ರು. ಮಾತ್ರ.) ಕನ್ನಡ ಸಿನಿಮಾಮಟ್ಟಿಗೆ ಇದು ಸಾಧ್ಯವಾಗದ ಮಾತು. ಬೇರೆ ಭಾಷೆಗಳಲ್ಲೂ ಹೆಚ್ಚು ಕಡಿಮೆ ಇದೇ ಸ್ಥಿತಿ ಇದೆ.

ಆಟಕ್ಕುಂಟು ಲೆಕ್ಕಕ್ಕಿಲ್ಲ: ನಮ್ಮ ಚಿತ್ರಮಂದಿರಗಳಲ್ಲಿ ಎಡಿಸಿಸಿ ಸೌಲಭ್ಯ ಒದಗಿಸುವಂಥ ಸಾಧನಗಳು ಇನ್ನೂ ಬಂದಿಲ್ಲ. ಇಂಥ ವ್ಯವಸ್ಥೆ ವಿದೇಶಗಳಲ್ಲಷ್ಟೇ ಇವೆ. ಈ ಸಾಧನಗಳು ದುಬಾರಿ, ಮೊದಲೇ ಸಮಸ್ಯೆಯಲ್ಲಿರುವ ಥಿಯೇಟರ್ ಮಾಲೀಕರು ಈ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ನಿರ್ಮಾಪಕರು

ನಿರ್ಮಾಪಕರ ನಷ್ಟ ಹೆಚ್ಚುತ್ತದೆ

ಎಡಿಸಿಸಿಯಂಥ ವ್ಯವಸ್ಥೆ ಕಡ್ಡಾಯ ಮಾಡಿದರೆ ನಿರ್ಮಾಪಕನ ನಷ್ಟ ಮತ್ತಷ್ಟು ಏರುತ್ತದೆ. ಕೇಂದ್ರದ ಈ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಕೂಡ ಎತ್ತಿ ಹಿಡಿದಿರುವ ಕಾರಣ ನಾವು ಏನು ಮಾಡಲೂ ಸಾಧ್ಯವಾಗದೇ ಅಸಹಾಯಕರಾಗಿದ್ದೇವೆ.

• **ಜೆ.ರಾಮಮೂರ್ತಿ** ನಿರ್ಮಾಪಕರ ಸಂಘದ ಅಧ್ಯಕ್ಷ

ಎಡಿಸಿಸಿ ಮಾಡಿಸಿದರೂ ಅದು ಫಲಾನುಭವಿಗಳನ್ನು ತಲುಪುತ್ತಿಲ್ಲ. ಇದನ್ನು ಮನಗಂಡು ಸದ್ಯಕ್ಕೆ ನಿರ್ಮಾಪಕ ಅವಿನಾಶ್ ಶೆಟ್ಟಿ ಪರಿಹಾರ ರೂಪಿಸಿದ್ದಾರೆ.

ಸಿನಿಮಾ ಎಡಿಸಿಸಿ ಆ್ಯಪ್: ಅವಿನಾಶ್ ಶೆಟ್ಟಿ ಅವರು ಸಿನಿಮಾ ಎಡಿಸಿಸಿ ಆ್ಯಪ್‌ವೊಂದನ್ನು ಅಭಿವೃದ್ಧಿಪಡಿಸಿದ್ದಾರೆ. ಗೂಗಲ್‌ನಲ್ಲಿ www.cinemaadcc.com ಎಂದು ಹುಡುಕಿದರೆ ಈ ಆ್ಯಪ್ ತೆರೆದುಕೊಳ್ಳುತ್ತದೆ. ಇದರಲ್ಲಿರುವ ಸಿನಿಮಾ ಟೈಟಲ್ ಮೇಲೆ ಕ್ಲಿಕ್ ಮಾಡಿ ಸ್ಟಾರ್ಟ್ ಸಿಂಕ್ ಅಂತ ಕೊಟ್ಟು ಬೇಕಾದ ಭಾಷೆ ಆಯ್ಕೆ ಮಾಡಿದರೆ ಸಿನಿಮಾ ಧ್ವನಿ ವಿವರಣೆ ಸಿಗುತ್ತದೆ. ಶ್ರವಣದೋಷ ಇರುವವರಿಗೆ ಉಚಿತವಾಗಿ ಸಂಪೂರ್ಣ ವಿವರಗಳ ಸ್ಕ್ರಿಪ್ಟ್ ಸಿಗುತ್ತದೆ. ಅವರು ಸ್ಟಾಂಡ್‌ನಲ್ಲಿ ಮೊಬೈಲ್ ಸೆಟ್ ಮಾಡಿ ಸಿನಿಮಾ ಜೊತೆಗೆ ಈ ವಿವರಣೆ ನೋಡಬಹುದು. ಎಐ ನೆರವು ಬಳಸಿ ಇದು ಜಗತ್ತಿನ ಎಲ್ಲ ಭಾಷೆಗಳಲ್ಲೂ ಲಭ್ಯವಾಗುವಂತೆ ಅವಿನಾಶ್ ಶೆಟ್ಟಿ ವಿನ್ಯಾಸ ಮಾಡಿದ್ದಾರೆ. ಕನ್ನಡದಲ್ಲಿ ಸದ್ಯ 20 ನಿರ್ಮಾಣ ಸಂಸ್ಥೆಗಳು ಈ ಆ್ಯಪ್ ಮೂಲಕ ಎಡಿಸಿಸಿ ಸೌಲಭ್ಯ ಒದಗಿಸಿವೆ.

ಗುಣಮಟ್ಟದ ಬಗ್ಗೆ ಚಿಂತೆ ಇಲ್ಲ: ಇದೀಗ ಕೇಂದ್ರ ಸರ್ಕಾರ ಎಡಿಸಿಸಿ ನಿಯಮ ಜಾರಿಗೆ ತಂದರೂ ಅದರ ಗುಣಮಟ್ಟ ಪರೀಕ್ಷಿಸುವ ಯಾವುದೇ ಮಾನದಂಡವಿಲ್ಲ. ಇದು ದೃಷ್ಟಿದೋಷ ಮತ್ತು ಶ್ರವಣದೋಷ ಇರುವ ವಿಶೇಷಚೇತನರಿಗೆ ನಿಜಕ್ಕೂ ಉಪಯೋಗವಾಗುವಂತಿದೆಯಾ ಎಂಬುದನ್ನೂ ಗಮನಿಸುವ ವ್ಯವಸ್ಥೆ ಇಲ್ಲ. ಇದು ಕಾರ್ಯಸಾಧುವಾಗಬೇಕಿದ್ದರೆ ಸಿಬಿಎಫ್‌ಸಿಯಲ್ಲಿ ಪ್ರತಿ ಸಿನಿಮಾವನ್ನೂ ದೃಷ್ಟಿ ಹಾಗೂ ಶ್ರವಣದೋಷವಿರುವವರಿಗೆ ತೋರಿಸಿ ಮೌಲ್ಯಮಾಪನ ಮಾಡಬೇಕಾಗುತ್ತದೆ.

ತೆಲಂಗಾಣ ರೀತಿ ಒಳಮೀಸಲಿಗೆ ಮಾದಿಗರ ಬೇಡಿಕೆ

ಒಳಮೀಸಲು ವಿಚಾರದಲ್ಲಿ ಒಂದೇ ನೀತಿ ಇರಲಿ | ಮಾದಿಗ ಚಿಂತಕರ ದುಂಡು ಮೇಜಿನ ಸಭೆ ನಿರ್ಧಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತೆಲಂಗಾಣ ಮಾದರಿ ಒಳಮೀಸಲಾತಿ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕು. ರಾಜ್ಯ ಒಳಮೀಸಲಾತಿಯಲ್ಲಿರುವ ಸಣ್ಣಪುಟ್ಟ ಲೋಪಗಳನ್ನು ಸರಿಪಡಿಸಬೇಕು ಎಂಬುದೂ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಮಾದಿಗರ ಚಿಂತಕರ ದುಂಡು ಮೇಜಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಭಾನುವಾರ ಶಾಸಕರ ಭವನದಲ್ಲಿ ಮಾದಿಗ ಸಮುದಾಯದ ಮಾಜಿ ಸಚಿವರು, ಮಾಜಿ ಸಂಸದರು, ನಿವೃತ್ತ ಅಧಿಕಾರಿಗಳು, ಚಿಂತಕರು, ಸಾಹಿತಿಗಳು ಒಳಗೊಂಡಂತೆ ಅನೇಕರು ದುಂಡು ಮೇಜಿನ ಸಭೆ ನಡೆಸಿ ಚರ್ಚೆ ನಡೆಸಿದರು.

ವಿಶೇಷ ಸಚಿವ ಸಂಪುಟ ಸಭೆಯಲ್ಲಿ



ಬೆಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಮಾದಿಗರ ಚಿಂತಕರ ದುಂಡು ಮೇಜಿನ ಸಭೆಯನ್ನು ಗೋನಾಳ್ ಭೀಮಪ್ಪ ಉದ್ಘಾಟಿಸಿದರು. ಮಾಜಿ ಸಚಿವ ಎಚ್.ಆಂಜನೇಯ, ರಾಜ್ಯಸಭೆ ಮಾಜಿ ಸದಸ್ಯ ಡಾ.ಎಲ್.ಹನುಮಂತಯ್ಯ ಇತರರಿದ್ದರು.

ಪರಿಶಿಷ್ಟ ಜಾತಿಗಳಿಗೆ ಬರುವ ಹುದ್ದೆಗಳ ಸಂಖ್ಯೆ 3ಕ್ಕಿಂತ ಕಡಿಮೆ ಇದ್ದರೆ ಎಸ್ಸಿ ಸಾಮಾನ್ಯ ಎಂದು ಪರಿಗಣಿಸುವ ಆದೇಶ ಹಿಂಪಡೆಯಬೇಕು. ರೋಸ್ಟರ್‌ಬಿಂದುವಿನಲ್ಲಿ ಇರುವ ದೋಷಗಳನ್ನು ಸರಿಪಡಿಸಲು ಸಮಾಜ ಕಲ್ಯಾಣ ಇಲಾಖೆಗೆ ವಹಿಸಿರುವ ಜವಾಬ್ದಾರಿ ವಾಪಸ್ ಪಡೆಯಬೇಕು. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ವಹಿಸಬೇಕು. ಕರ್ನಾಟಕ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಸರ್ಕಾರವೇ ಇದೆ. ಆದ್ದರಿಂದ ಎರಡೂ ಕಡೆ ಒಳಮೀಸಲಾತಿ ನೀತಿ ಒಂದೇ ರೀತಿ ಇರಬೇಕು. ತೆಲಂಗಾಣ ಮಾದರಿ ಒಳಮೀಸಲಾತಿ ನೀತಿ ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕು.

ಕಳ್ಳದಾರಿಯಲ್ಲಿ ದುರ್ಬಳಕೆ ತಡೆಯಬೇಕು: ರಾಜ್ಯದಲ್ಲಿ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ ಜಾತಿ ಸೂಚಕದಡಿ ಮಾದಿಗರು, ಛಲವಾದಿಗರು ಇಬ್ಬರೂ ಪ್ರಮಾಣ ಪತ್ರ ಪಡೆಯುತ್ತಿದ್ದು, ಪ್ರಸ್ತುತ ಎ, ಬಿ, ಸಿ ಎಂದು ಒಳಮೀಸಲಾತಿ ವರ್ಗೀಕರಣ ಮಾಡಲಾಗಿದೆ. ವರ್ಗ 1 ಗುಂಪಿನಲ್ಲಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿದ್ದು, ಈ ಗುಂಪಿಗೆ ಕಳ್ಳದಾರಿಯಲ್ಲಿ ಅನೇಕರು ನುಸುಳುವ ಸಾಧ್ಯತೆ ಇದೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಕ್ರಮಕೈಗೊಳ್ಳಬೇಕೆಂದು ಸಭೆ ನಿರ್ಣಯ ಕೈಗೊಂಡಿದೆ.

ಕೊಲೆ ಕೇಸ್: ಸುಪ್ರೀಂನಲ್ಲಿಂದು ದರ್ಶನ್ ಜಾಮೀನು ವಿಚಾರಣೆ

8 ತಿಂಗಳಾದ್ರೂ ಸಾಕ್ಷಿಗಳ ವಿಚಾರಣೆ ಪೂರ್ಣಗೊಳ್ಳದ ಹಿನ್ನೆಲೆ ನಟನಿಂದ ಸುಪ್ರೀಂಕೋರ್ಟ್‌ಗೆ ಹೊಸ ರಿಟ್ ಅರ್ಜಿ ಸಲ್ಲಿಕೆ

• **ಕನ್ನಡಪ್ರಭ ವಾರ್ತೆ** ನವದೆಹಲಿ



ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ದರ್ಶನ್ ಸಲ್ಲಿಸಿರುವ ಹೊಸ ಜಾಮೀನು ಅರ್ಜಿ ಸೋಮವಾರ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬರಲಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ 2025ರ ಆಗಸ್ಟ್ 14ರಂದು ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ದರ್ಶನ್ ಹಾಗೂ ಇತರ ಆರೋಪಿಗಳಿಗೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಿತ್ತು. ಆದರೆ, 8 ತಿಂಗಳು ಕಳೆದರೂ ಸಾಕ್ಷಿಗಳ ವಿಚಾರಣೆ ಪೂರ್ಣಗೊಳ್ಳದ ಕಾರಣ ದರ್ಶನ್ ಪರ ವಕೀಲರು ಸುಪ್ರೀಂಕೋರ್ಟ್‌ಗೆ ಹೊಸ ರಿಟ್ ಅರ್ಜಿ ಸಲ್ಲಿಸಿದ್ದು, ಜಾಮೀನಿಗೆ ಮನವಿ ಮಾಡಿದ್ದಾರೆ.

8 ತಿಂಗಳು ಕಳೆದರೂ ಸಾಕ್ಷಿಗಳ ವಿಚಾರಣೆ ಮುಕ್ತಾಯವಾಗಿಲ್ಲ. 273 ಸಾಕ್ಷಿಗಳ ಪೈಕಿ ಕೇವಲ 15 ಸಾಕ್ಷಿಗಳ ವಿಚಾರಣೆಯಷ್ಟೇ ಮುಗಿದಿದೆ. ಇದೇ ರೀತಿಯಾದರೆ ವಿಚಾರಣೆ ಮುಗಿಯಲು ಹಲವು ವರ್ಷಗಳೇ ಬೇಕಾಗುತ್ತದೆ. ಹೀಗಾಗಿ, ದರ್ಶನ್‌ಗೆ ಜಾಮೀನು ಮಂಜೂರು ಮಾಡಬೇಕು ಎಂದು ದರ್ಶನ್ ಪರ ವಕೀಲರು ಮನವಿ ಮಾಡಿದ್ದಾರೆ.

ಬಡ ಹೆಣ್ಮಕ್ಕಳಿಗೆ ಗವಿಮಠದ ಉಚಿತ ಕಾಲೇಜು

ಕೊಪ್ಪಳ ಬಳಿ ಲೋಕಾರ್ಪಣೆ | ₹60 ಕೋಟಿ ವೆಚ್ಚದಲ್ಲಿ ನಿರ್ಮಾಣ | 600 ಮಂದಿಗೆ ಪ್ರವೇಶ

• **ಕನ್ನಡಪ್ರಭ ವಾರ್ತೆ** ಕೊಪ್ಪಳ

ಗ್ರಾಮೀಣ ಪ್ರದೇಶದ ಬಡ ವಿದ್ಯಾರ್ಥಿನಿಯರಿಗಾಗಿ ಕೊಪ್ಪಳದ ಗವಿಸಿದ್ಧೇಶ್ವರ ಸ್ವಾಮೀಜಿಗಳು ಆರಂಭಿಸಿರುವ ವಸತಿ ಸಹಿತ ಉಚಿತ ಪಿಯು ಕಾಲೇಜು 'ಶ್ರೀ ಗವಿಸಿದ್ಧೇಶ್ವರ ಗುರುಕುಲ' ಮಠಾಧೀಶರು ಮತ್ತು ಜನಪ್ರತಿನಿಧಿಗಳ ಸಮ್ಮುಖದಲ್ಲಿ ಭಾನುವಾರ ಲೋಕಾರ್ಪಣೆಗೊಂಡಿದೆ.

ಈ ಕಾಲೇಜು ಗವಿಸಿದ್ಧೇಶ್ವರ ಸ್ವಾಮೀಜಿಗಳ ಕನಸಿನ ಕೂಸು. ಕೊಪ್ಪಳದಿಂದ 11 ಕಿ.ಮೀ. ದೂರದಲ್ಲಿದೆ. ವೀರಶೈವ ಲಿಂಗಾಯತ ಮಠಗಳಲ್ಲಿ ಇದುವರೆಗೂ ವಿದ್ಯಾರ್ಥಿಗಳಿಗಾಗಿ ಪ್ರಸಾದ ನಿಲಯ ದೊಡ್ಡ ಸಂಖ್ಯೆಯಲ್ಲಿ ಇವೆ. ಆದರೆ ಮಹಿಳೆಯರ ಶಿಕ್ಷಣಕ್ಕಾಗಿ ವಸತಿಸಹಿತ ಪಿಯು ಕಾಲೇಜು ಪ್ರಾರಂಭಿಸಿದ್ದು ಇದೇ ಮೊದಲು ಎಂದು ಗಣ್ಯರು ಅಭಿಪ್ರಾಯ ವ್ಯಕ್ತಪಡಿಸಿದರು.



'ಗುರುಕುಲ' ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಗವಿಸಿದ್ಧೇಶ್ವರ ಸ್ವಾಮೀಜಿ

ಸುಮಾರು 48 ಎಕರೆ ವಿಸ್ತಾರವಾದ ಕ್ಯಾಂಪಸ್‌ನಲ್ಲಿ ₹60 ಕೋಟಿ ವೆಚ್ಚದಲ್ಲಿ ತಲೆಎತ್ತಿರುವ ಹೈಟೆಕ್ ವಸತಿ ಕಾಲೇಜು ಯಾವುದೇ ಖಾಸಗಿ ಶಿಕ್ಷಣ ಸಂಸ್ಥೆಗಳಿಗಿಂತಲೂ ಕಡಿಮೆ ಇಲ್ಲ ಎನ್ನುವಂತಿದೆ.

ವಿದ್ಯಾರ್ಥಿನಿಯರಿಗೆ ಇಲ್ಲಿ ಪಿಯು ವಿಜ್ಞಾನ, ಕಲಾ ವಿಭಾಗ ಇದ್ದು, ಜತೆಗೆ ಸಿಇಟಿ, ನೀಟ್, ಜೆಇಇ ಸೇರಿದಂತೆ ಹಲವಾರು ವೃತ್ತಿ ತರಬೇತಿ ಕೋರ್ಸ್‌ಗಳಿಗೆ ಉಚಿತ ಕೋಚಿಂಗ್ ಸಹ ಲಭ್ಯವಿರುತ್ತದೆ. ಕಾಲೇಜು, ತರಬೇತಿ ಮತ್ತು ವಸತಿ ಸಂಪೂರ್ಣ ಉಚಿತವಾಗಿರುತ್ತದೆ. ಆದರೆ, ವಿದ್ಯಾರ್ಥಿನಿಯರು ಊಟದ ವೆಚ್ಚ ಭರಿಸಬೇಕಾಗುತ್ತದೆ. 600 ವಿದ್ಯಾರ್ಥಿನಿಯರಿಗೆ ಪ್ರವೇಶಾವಕಾಶ ಇರುತ್ತದೆ.

ವಿದ್ಯಾಕಾಶಿಯಾಗಲಿ: ಸಂಸದ ಬಸವರಾಜ ಬೊಮ್ಮಾಯಿ ಗುರುಕುಲ ಲೋಕಾರ್ಪಣೆ ಮಾಡಿ ಮಾತನಾಡಿ, ಗವಿಸಿದ್ಧೇಶ್ವರ ಮಹಾಸ್ವಾಮೀಜಿಗಳು ಕೈಗೊಳ್ಳುತ್ತಿರುವ ಶೈಕ್ಷಣಿಕ ಕ್ರಾಂತಿಯಿಂದ ಕೊಪ್ಪಳ ವಿದ್ಯಾಕಾಶಿಯಾಗಲಿದೆ ಎಂದು ಹೇಳಿದರು.

ಮಕ್ಕಳ ಎದೆಯಲ್ಲಿ ಅಕ್ಷರದ ಹಣತೆ

ಪೂಜಿಸುವ ದೇವರ ಗುಡಿಯಲ್ಲಿನ ದೀಪ ಹಚ್ಚುವುದಕ್ಕಿಂತ ದೀಪವೇ ಇಲ್ಲದ ಗುಡಿಸಲಲ್ಲಿನ ಮಕ್ಕಳ ಎದೆಯಲ್ಲಿ ಅಕ್ಷರದ ಹಣತೆ ಹಚ್ಚುವುದು ಗವಿಮಠ ಶ್ರೀಗಳ ಪರಂಪರೆ ಮತ್ತು ಸಂಕಲ್ಪವಾಗಿದೆ. ಎಲ್ಲರ ಕಳಕಳಿ ಮತ್ತು ಕೊಡುಗೈ ದಾನಿಗಳಿಂದ ಇಂಥದ್ದೊಂದು ದೊಡ್ಡ ಶಿಕ್ಷಣ ಸಂಸ್ಥೆ ಹೆಣ್ಣುಮಕ್ಕಳಿಗಾಗಿ ತಲೆ ಎತ್ತಿದೆ.

• **ಗವಿಸಿದ್ಧೇಶ್ವರ ಸ್ವಾಮೀಜಿ**

ಜೈಂಟ್‌ವ್ಹೀಲ್ ಮುರಿದು ಬಿದ್ದು 10 ಜನರಿಗೆ ಗಾಯ, ಇಬ್ಬರು ಗಂಭೀರ

ಗದುಗಿನ ತೋಂಟದಾರ್ಯ ಮಠದ ಜಾತ್ರೆಯಲ್ಲಿ ಅವಘಡ

• **ಕನ್ನಡಪ್ರಭ ವಾರ್ತೆ** ಗದಗ

ಐತಿಹಾಸಿಕ ತೋಂಟದಾರ್ಯ ಮಠದ ಜಾತ್ರಾ ಮಹೋತ್ಸವದ ಅಂಗವಾಗಿ ಅಳವಡಿಸಲಾಗಿದ್ದ ಜೈಂಟ್ ವ್ಹೀಲ್ ಮುರಿದುಬಿದ್ದು ಮಗು ಸೇರಿದಂತೆ 10ಕ್ಕೂ ಹೆಚ್ಚು ಜನರು ಗಾಯಗೊಂಡ ಘಟನೆ ಭಾನುವಾರ ರಾತ್ರಿ ನಡೆದಿದೆ.

ಬ್ರೇಕ್ ಡ್ಯಾನ್ಸ್ ಹೆಸರಿನ ಜೈಂಟ್ ವ್ಹೀಲ್‌ನಲ್ಲಿ ಹಲವರು ಆಟವಾಡುತ್ತಿದ್ದರು. ಸಾವಿರಾರು ಜನರು ವೀಕ್ಷಣೆ ಮಾಡುತ್ತಿದ್ದ ವೇಳೆ ಈ ಘಟನೆ ನಡೆದಿದ್ದು, ಕ್ಷಣಾರ್ಧದಲ್ಲಿ ಸ್ಥಳದಲ್ಲಿ ಭಾರೀ ಆತಂಕ ಸೃಷ್ಟಿಯಾಯಿತು. ಈ ಬೃಹತ್ ಆಟಿಕೆ ಯಂತ್ರವೊಂದು ತಾಂತ್ರಿಕ ದೋಷದಿಂದ ಮುರಿದು ಬಿದ್ದ ಪರಿಣಾಮ ಅದರಲ್ಲಿ ಆಟವಾಡುತ್ತಿದ್ದವರಲ್ಲಿ 10ಕ್ಕೂ ಹೆಚ್ಚು ಜನರಿಗೆ ಗಾಯವಾಗಿದ್ದು, ಅವರಲ್ಲಿ ಇಬ್ಬರ ಸ್ಥಿತಿ ತೀರಾ ಗಂಭೀರ




ವಾಗಿದೆ. ತಕ್ಷಣವೇ ಗಾಯಗೊಂಡವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಮಧ್ಯೆ, ಈ ರೀತಿಯ ಬೃಹತ್ ಆಟಿಕೆಗಳ ಅಳವಡಿಕೆಗೆ ಅವಕಾಶ ಕೊಟ್ಟಿದ್ದನ್ನು ಖಂಡಿಸಿ, ಸ್ಥಳೀಯರು ಮಠದ ಮುಂದೆಯೇ ಪ್ರತಿಭಟನೆ ನಡೆಸಿದರು.

ಬಿಸಿಲಿನಾಘಾತ | ಬ್ಲಡ್ ಬ್ಯಾಂಕ್‌ಗಳಿಗೆ ತಟ್ಟಿದ ಬಿಸಿ | ರಕ್ತ ಸಂಗ್ರಹ ಕುಸಿತ

ಬೇಸಿಗೆ: ರಕ್ತದಾನಕ್ಕೆ ಹಿಂದೇಟು ಹಾಕುತ್ತಿರುವ ರಾಜ್ಯದ ಜನ!

• **ಅಜೀಜ ಅಹ್ಮದ ಬಳಗಾನೂರ**
ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ



ಕಳೆದ ಒಂದೂವರೆ ತಿಂಗಳಿನಿಂದ ಬಿಸಿಲ ಬೇಗೆಯಿಂದ ಜನತೆ ತತ್ತರಿಸಿದ್ದು, ಜನಜೀವನವೇ ಅಸ್ತವ್ಯಸ್ತಗೊಂಡಿದೆ. ಈಗ ಬ್ಲಡ್ ಬ್ಯಾಂಕ್‌ಗಳಿಗೂ ಈ ಬಿಸಿಲು ಆಘಾತವನ್ನುಂಟು ಮಾಡಿದ್ದು ಜನರು ರಕ್ತದಾನ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಇದರಿಂದಾಗಿ ಹುಬ್ಬಳ್ಳಿಯ ಕೆಎಂಸಿಆರ್‌ಐ ಸೇರಿದಂತೆ ಹಲವೆಡೆ ಬ್ಲಡ್ ಬ್ಯಾಂಕ್‌ಗಳಲ್ಲಿ ರಕ್ತದ ಕೊರತೆ ಕಂಡುಬರುತ್ತಿದೆ.

ಕೆಎಂಸಿಆರ್‌ಐಗೂ ಕಳೆದೊಂದು ತಿಂಗಳಿನಿಂದ ರಕ್ತದ ಕೊರತೆ ಕಂಡು ಬಂದಿದೆ. ಹೆರಿಗೆ, ತುರ್ತು ಚಿಕಿತ್ಸೆ, ಅಪಘಾತ ವಿಭಾಗಗಳಿಗೆ ನಿತ್ಯವೂ ಹೆಚ್ಚಿನ ರಕ್ತದ ಬೇಡಿಕೆ ಇದ್ದೇ ಇರುತ್ತದೆ. ನಿತ್ಯ 40-50 ಯೂನಿಟ್ ರಕ್ತದ ಪ್ಯಾಕೆಟ್‌ಗಳನ್ನು ರೋಗಿಗಳಿಗೆ ನೀಡಲಾಗುತ್ತಿದೆ. ಆದರೆ, ಇತ್ತೀಚಿಗೆ ರಕ್ತದಾನಿಗಳ ಸಂಖ್ಯೆ ಕಡಿಮೆಯಾಗಿದ್ದು, ತೀವ್ರ ಸಮಸ್ಯೆಯಾಗುತ್ತಿದೆ.

ನಗರದ ರಾಷ್ಟ್ರೋತ್ಥಾನ ಬ್ಲಡ್ ಬ್ಯಾಂಕ್‌ನಲ್ಲಿ ನಿತ್ಯ 90ರಿಂದ 100 ಯೂನಿಟ್ ರಕ್ತ ಸಂಗ್ರಹವಾದರೆ ಅಷ್ಟೇ ಪ್ರಮಾಣದಲ್ಲಿ ವಿತರಿಸಲಾಗುತ್ತಿತ್ತು. ಆದರೆ, ಪ್ರಸ್ತುತ 10ರಿಂದ 15 ಯೂನಿಟ್‌ಗಳಿಗೆ ಕುಸಿದಿದೆ. ಈಗ ರಕ್ತದ ಅಭಾವದ ನಡುವೆಯೂ ಮೊಬೈಲ್‌ಕ್ಲಿನಿಕ್, ದಾನಿಗಳಿಗೆ ಫೋನ್ ಮಾಡಿ ರಕ್ತ ಪಡೆಯುವ ಕೆಲಸ ಮಾಡಲಾಗುತ್ತಿದೆ. 4-5 ದಾನಿಗಳು ಏಕಕಾಲಕ್ಕೆ ರಕ್ತದಾನ ಮಾಡಲು ಮುಂದೆ ಬಂದಲ್ಲಿ ಮೊಬೈಲ್ ಕ್ಲಿನಿಕ್ ಅನ್ನು ಅವರಿರುವ ಸ್ಥಳಕ್ಕೆ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

ಬೇಸಿಗೆಯಲ್ಲಿ ಏಕೆ ರಕ್ತದ ಕೊರತೆ? : ಬೇಸಿಗೆಯಾದರಿಂದ ರಕ್ತದಾನಿಗಳಿಗೆ ವಿಶ್ರಾಂತಿ ಅವಶ್ಯಕತೆ ಇದೆ. ಚಳಿಗಾಲ, ಮಳೆಗಾಲದಲ್ಲಿ 10-15 ನಿಮಿಷ ವಿಶ್ರಾಂತಿ ನಡೆಯುತ್ತದೆ. ಆದರೆ, ಬೇಸಿಗೆಯಲ್ಲಿ ಕನಿಷ್ಠ 30ರಿಂದ 45 ನಿಮಿಷ ಕಡ್ಡಾಯ ವಿಶ್ರಾಂತಿ ಮಾಡಬೇಕು. ಹೊರಗಡೆ ಹೆಚ್ಚಿನ ಬಿಸಿಲು ಇರುವುದರಿಂದ ತಲೆಸುತ್ತು, ಸುಸ್ತಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಸಮಸ್ಯೆ | ಕಾರ್ಯಾರಂಭ ಆಗಬೇಕಿರುವ ನಿಲ್ದಾಣಗಳಿಗೆ ಸಂಕಷ್ಟ

ವಿಮಾನ ಸಂಸ್ಥೆಗಳಿಂದ ನಿರಾಸಕ್ತಿ: ಹೊಸ ಏರ್ಪೋರ್ಟ್‌ಗಳಿಗೆ ಡವಡವ

• **ಮಲ್ಲಿಕಾರ್ಜುನ ಸಿದ್ದಣ್ಣವರ**
ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ರಾಜ್ಯದ ಪ್ರಮುಖ ಜಿಲ್ಲೆಗಳಿಂದ ರಾಷ್ಟ್ರದ ಪ್ರಮುಖ ನಗರಗಳಿಗೆ ವೈಮಾನಿಕ ಸೇವಾ ಸಂಪರ್ಕ ಕಲ್ಪಿಸುವ ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗೆ ವಿಮಾನಯಾನ ಸಂಸ್ಥೆಗಳ ನಿರಾಸಕ್ತಿಯಿಂದಾಗಿ ಮಂಕು ಕವಿದಿದ್ದು, ಹೊಸ ವಿಮಾನ ನಿಲ್ದಾಣಗಳಿಂದ ವಿಮಾನಗಳು ಹಾರಾಟ ನಡೆಸುವುದು ಬಹುತೇಕ ಅನುಮಾನ ಎನಿಸಿದೆ.

ಶಿವಮೊಗ್ಗ ವಿಮಾನ ನಿಲ್ದಾಣ ಉದ್ಘಾಟನೆಯಾದರೂ ಅಲ್ಲಿಂದ ವಿಮಾನಗಳು ಹಾರಾಟ ನಡೆಸಿದ್ದು ಅಷ್ಟಕಷ್ಟೆ. ಕಳೆದ 3 ದಿನಗಳಿಂದ ಇಂಡಿಗೊ ಸಂಸ್ಥೆಯು ವಿಮಾನ ಮತ್ತು ಪೈಲಟ್‌ಗಳ ಕೊರತೆಯ ನೆಪ ಹೇಳಿ ಸ್ಥಗಿತಗೊಳಿಸಿದೆ. ಈ ಹೊಸ ವಿಮಾನ ನಿಲ್ದಾಣ ಖಾಲಿ ಬೀಳಬಾರದು ಎನ್ನುವ ಕಾರಣಕ್ಕೆ 'ಕರ್ನಾಟಕ ಔದ್ಯಮಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ' ಏರ್ ಇಂಡಿಯಾ ಸಂಸ್ಥೆಗೆ ಪತ್ರ ಬರೆದು ಶಿವಮೊಗ್ಗ ವಿಮಾನ ನಿಲ್ದಾಣದಿಂದ ವೈಮಾನಿಕ ಸೇವೆ ಆರಂಭಿಸುವಂತೆ ಕೋರಿದೆ. ಅದೂ ಕೂಡ ವಿಮಾನ

ಶಿವಮೊಗ್ಗದಿಂದ ವಿಮಾನ ಹಾರಾಟಕ್ಕೆ ವಿಮಾನಯಾನ ಸಂಸ್ಥೆಗಳು ಆಸಕ್ತಿ ತೋರುತ್ತಿಲ್ಲ. ವಿಜಯಪುರ, ರಾಯಚೂರು, ಹಾಸನ ವಿಮಾನ ನಿಲ್ದಾಣಗಳ ಬಗ್ಗೆ ಚಿಂತೆ ಕಾಡುತ್ತಿದೆ.

• **ಎಸ್.ಜಿ.ನಂಜಯ್ಯನಮಠ** ಅಧ್ಯಕ್ಷರು, ಕರ್ನಾಟಕ ಔದ್ಯಮಿಕ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ

ಇಲ್ಲ-ಪೈಲಟ್ ಇಲ್ಲ ಎನ್ನುವ ಕಾರಣ ನೀಡಿದೆ.

ಹೊಸ ವಿಮಾನ ನಿಲ್ದಾಣಗಳು: ಬಿಜೆಪಿ ಸರ್ಕಾರ ರಾಜ್ಯದ ಶಿವಮೊಗ್ಗ, ವಿಜಯಪುರ, ರಾಯಚೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಮುಂದಾಗಿತ್ತು. ವಿಜಯಪುರ ವಿಮಾನ ನಿಲ್ದಾಣ ಪೂರ್ಣಗೊಂಡಿದ್ದರೂ ಪರಿಸರ ಇಲಾಖೆಯ ಅನುಮತಿ ಪಡೆದಿಲ್ಲ ಎನ್ನುವ ಕಾರಣಕ್ಕೆ ಸುಪ್ರೀಂ ಕೋರ್ಟಿನ ಹಸಿರು ಪೀಠದಲ್ಲಿ ಪ್ರಕರಣ ಎದುರಿಸುತ್ತಿದೆ. ರಾಯಚೂರು ವಿಮಾನ ನಿಲ್ದಾಣದ ಕಾಮಗಾರಿ ಶೇ.45ರಷ್ಟು ಆಗಿದೆ. ಹಾಸನ ವಿಮಾನ ನಿಲ್ದಾಣದ ಕಾಮಗಾರಿ ನಿರೀಕ್ಷಿತ ಪ್ರಗತಿ ಆಗಿಲ್ಲ.

ಲೈಂಗಿಕ ಕ್ರಿಯೆಗೆ ಒಪ್ಪದ್ದಕ್ಕೆ ಮಹಿಳೆ ಮರ್ಮಾಂಗಕ್ಕೆ ಒದ್ದು ಹತ್ಯೆಗೈದ!

ವಿಧವೆ ಜತೆ ಅಕ್ರಮ ಸಂಬಂಧ ಹೊಂದಿದ್ದವನಿಂದ ಕೃತ್ಯ ಸಕಲೇಶಪುರ ತಾಲೂಕಿನ ಅತ್ತಿಹಳ್ಳಿ ಗ್ರಾಮದಲ್ಲಿ ಘಟನೆ





• **ಕನ್ನಡಪ್ರಭ ವಾರ್ತೆ** ಸಕಲೇಶಪುರ

ಲೈಂಗಿಕ ಕ್ರಿಯೆಗೆ ನಿರಾಕರಿಸಿದ ಹಿನ್ನೆಲೆಯಲ್ಲಿ ರೊಚ್ಚಿಗೆದ್ದ ವ್ಯಕ್ತಿ ಮಹಿಳೆಯ ಮರ್ಮಾಂಗಕ್ಕೆ ಒದ್ದು ಕೊಲೆಗೈದ ಘಟನೆ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಅತ್ತಿಹಳ್ಳಿ ಗ್ರಾಮದಲ್ಲಿ ನಡೆದಿದೆ. ರಮ್ಯಾ.ಎ.ಆರ್. (35) ಮೃತ ಮಹಿಳೆ. ಚಂದ್ರ (41) ಕೊಲೆ ಆರೋಪಿ.


ನಡೆದಿದ್ದೇನು?: ರಮ್ಯಾ ಅವರ ಪತಿ ಉಮೇಶ್ 2 ವರ್ಷಗಳ ಹಿಂದೆ ಮೃತಪಟ್ಟಿದ್ದು, ನಂತರ ರಮ್ಯಾ ಅದೇ ಗ್ರಾಮದ ಚಂದ್ರನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದರೆಂದು ತಿಳಿದುಬಂದಿದೆ. ಏ.28ರಂದು ರಮ್ಯಾ ಮನೆಗೆ ಬಂದ ಚಂದ್ರ ಲೈಂಗಿಕ ಕ್ರಿಯೆಗೆ ಒತ್ತಾಯಿಸಿದ್ದಾನೆ ಎನ್ನಲಾಗಿದೆ. ಇದಕ್ಕೆ ರಮ್ಯಾ ವಿರೋಧಿಸಿದಾಗ ಸಿಟ್ಟಿಗೆದ್ದ ಚಂದ್ರ, ಆಕೆಯ ಮೇಲೆ ಹಲ್ಲೆ ನಡೆಸಿ ಮರ್ಮಾಂಗಕ್ಕೆ ಕಾಲಿನಿಂದ ಒದ್ದಿದ್ದಾನೆ ಎನ್ನಲಾಗಿದೆ. ಏ.30 ರಂದು ರಮ್ಯಾ ತೀವ್ರ ಹೊಟ್ಟೆ ನೋವಿನಿಂದ ಆಸ್ಪತ್ರೆಗೆ ದಾಖಲಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಯಸಳೂರಲ್ಲಿ ಕೇಸ್ ದಾಖಲಾಗಿದ್ದು ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ.

ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಗದಗ	ಬಾಗಲಕೋಟೆ	ದಾವಣಗೆರೆ	ಕಾರವಾರ	ಧಾರವಾಡ
ಗರಿಷ್ಠ	39.0	38.9	37.2	36.8	36.8
ಕನಿಷ್ಠ	21.6	24.0	21.0	26.0	21.0

ಉಪಚುನಾವಣೆಯಲ್ಲಿ ಬಿಜೆಪಿ ಗೆಲುವು ನಿಶ್ಚಿತ: ಬೊಮ್ಮಾಯಿ

ಕೊಪ್ಪಳ: ರಾಜ್ಯದ 2 ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲಲಿದೆ ಮತ್ತು 5 ರಾಜ್ಯಗಳ ಚುನಾವಣೆಯಲ್ಲಿಯೂ ಬಿಜೆಪಿಗೆ ಉತ್ತಮ ಬೆಂಬಲ ದೊರೆಯಲಿದೆ ಎಂದು ಮಾಜಿ ಸಿಎಂ, ಸಂಸದ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಜನರು ರೋಸಿ ಹೋಗಿದ್ದಾರೆ. ಅದರ ಪರಿಣಾಮ ಫಲಿತಾಂಶದಿಂದ ಗೊತ್ತಾಗಲಿದೆ. ಇನ್ನು ಬಂಗಾಳದಲ್ಲಿಯೂ ಬಿಜೆಪಿಗೆ ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಇದೆ. ಈ ಮೂಲಕ ದೇಶದಲ್ಲಿ ಬಿಜೆಪಿ ಮತ್ತಷ್ಟು ಬಲಗೊಳ್ಳುತ್ತದೆ ಎಂದರು. ಜಗತ್ತು ಮುಂದೆ ಹೋಗುತ್ತಿದ್ದರೆ ಕಾಂಗ್ರೆಸ್ ಮತ್ತೆ ಓಬಿರಾಯನ ಕಾಲದತ್ತ ಸಾಗುತ್ತಿದೆ. ಮತಯಂತ್ರದ ಮೇಲೆ ಅನುಮಾನ ವ್ಯಕ್ತಪಡಿಸಿ, ಮತ್ತೆ ಬ್ಯಾಲೆಟ್ ಜಾರಿ ಮಾಡುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದರು.


ಸಿದ್ಧಗಂಗಾ ಮಠಕ್ಕೆ ಬಿವೈವಿ ಭೇಟಿ



ತುಮಕೂರಿನ ಸಿದ್ಧಗಂಗಾ ಮಠಕ್ಕೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭೇಟಿ ನೀಡಿ ಶಿವಕುಮಾರ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು. ವಿಜಯೇಂದ್ರ ಜೊತೆ ಶಾಸಕ ಜ್ಯೋತಿ ಗಣೇಶ್, ಮಾಜಿ ಶಾಸಕ ಪ್ರೀತಮ್ ಗೌಡ ಸೇರಿ ಹಲವರಿದ್ದರು.

ಮತ ಮರು ಎಣಿಕೆಯಾದ್ರೂ ರಿಸಲ್ಟ್ ಘೋಷಣೆಗೆ ಕೈ ಬಿಡ್ತಿಲ್ಲ: ಕಾರಜೋಳ

ತುಮಕೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಪೋಸ್ಟಲ್ ಬ್ಯಾಲೆಟ್‌ಗಳ ಮತಗಳ ಮರು ಎಣಿಕೆ ಮುಗಿದಿದ್ದರೂ ಅದರ ಫಲಿತಾಂಶ ಘೋಷಣೆ ಮಾಡಲು ಕಾಂಗ್ರೆಸ್ ಬಿಡದೇ ಇರುವುದು ಅವರ ದುರಾಡಳಿತಕ್ಕೆ ಸಾಕ್ಷಿಯಾಗಿದೆ ಎಂದು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ವಾಗ್ದಾಳಿ ನಡೆಸಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಸರ್ಕಾರ ಇದೇ ರೀತಿ ಆಡಳಿತ ಮಾಡಿದರೆ ಪ್ರಜಾಪ್ರಭುತ್ವದ ಕಗ್ಗೊಲೆ ಆಗುತ್ತದೆ. ಚುನಾವಣಾ ಆಯೋಗ ಒಂದು ಸ್ವತಂತ್ರ ಸಂಸ್ಥೆ. ಅದಕ್ಕೆ ಫಲಿತಾಂಶ ಘೋಷಣೆ ಮಾಡುವ ಅಧಿಕಾರ ಇದೆ. ಅವರು ಕೂಡಲೇ ಫಲಿತಾಂಶ ಘೋಷಣೆ ಮಾಡಬೇಕೆಂದು ಒತ್ತಾಯಿಸುತ್ತೇನೆ ಎಂದರು. ಚುನಾವಣಾಧಿಕಾರಿಗಳ ಮೇಲೆ ಒತ್ತಡ ಹಾಕಿ ಫಲಿತಾಂಶ ತಡೆ ಹಿಡಿಯುವುದು. ಗೊಂದಲ ಸೃಷ್ಟಿಸುವುದು. ಗಲಾಟೆ ಮಾಡುವುದು ಕಾಂಗ್ರೆಸ್ ನೀತಿ ಎಂದು ಕಿಡಿಕಾಡಿದರು.

ಅಶೋಕ್ ಪುತ್ರನ ಗಿನ್ನೆಸ್ ಸಾಹಸ!



ಮೊದಲ ಪುಟದಿಂದ

ಅಂಡಮಾನ್ ಆಡಳಿತ ಮತ್ತು ಭಾರತೀಯ ರಕ್ಷಣಾ ಪಡೆಗಳ ಸಹಯೋಗದೊಂದಿಗೆ ನಡೆದ ಈ ಅಭಿಯಾನದಲ್ಲಿ, 60X40 ಮೀಟರ್ (2,400 ಚದರ ಮೀಟರ್) ವಿಸ್ತೀರ್ಣದ ಬೃಹತ್ ರಾಷ್ಟ್ರಧ್ವಜವನ್ನು ಅಲೆಗಳ ಅಬ್ಬರ ಮತ್ತು ನೀರಿನ ತೀವ್ರ ಒತ್ತಡದ ನಡುವೆ ಸಮುದ್ರದಾಳದಲ್ಲಿ ಅನಾವರಣಗೊಳಿಸಲಾಯಿತು. ಈ ಅಪ್ರತಿಮ ಸಾಧನೆಯನ್ನು ಗುರುತಿಸಿ ಅಂಡಮಾನ್ ಮತ್ತು ನಿಕೋಬಾರ್‌ನ ಲೆಫ್ಟಿನೆಂಟ್ ಗವರ್ನರ್ ಡಿ.ಕೆ.ಜೋಶಿ ಅವರು ಗಿನ್ನೆಸ್ ವಿಶ್ವ ದಾಖಲೆಯ ಪ್ರಮಾಣಪತ್ರ ನೀಡಿ ಗೌರವಿಸಿದ್ದಾರೆ.

ಸುದ್ದಿ ಸಿಂಚನ

ತ.ನಾಡು ಬಿಟ್ಟು ಉಳಿದ ರಾಜ್ಯಗಳಲ್ಲಿ ಬಿಜೆಪಿಗೆ ಸ್ಪಷ್ಟ ಗೆಲುವು: ಶ್ರೀರಾಮುಲು

ಕಂಪ್ಲಿ(ಬಳ್ಳಾರಿ): ಪಂಚರಾಜ್ಯಗಳಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ತಮಿಳುನಾಡು ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ಬಿಜೆಪಿಗೆ ಸ್ಪಷ್ಟವಾದ ಗೆಲುವು ಸಿಗಲಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಿಶ್ವಾಸ ವ್ಯಕ್ತಪಡಿಸಿದರು. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಹಾಗೂ ದೇಶದ ರಾಜಕೀಯ ಪರಿಸ್ಥಿತಿ ಬಗ್ಗೆ ವಿವರವಾಗಿ ಅಭಿಪ್ರಾಯ ಹಂಚಿಕೊಂಡರು. ದಾವಣಗೆರೆಯಲ್ಲಿ ಎರಡರಿಂದ ಮೂರು ಸಾವಿರ ಮತಗಳ ಅಂತರದಲ್ಲಿ, ಬಾಗಲಕೋಟೆಯಲ್ಲಿ ಸುಮಾರು 5 ಸಾವಿರ ಮತಗಳಲ್ಲಿ ಬಿಜೆಪಿ ಜಯ ಸಾಧಿಸಲಿದೆ ಎಂದರು.

ಕರ್ನಾಟಕದ ರಾಜಕೀಯ ದಿಕ್ಕನ್ನು ಬದಲಿಸಿದ್ದು ಬಿಎಸ್‌ವೈ: ಬೊಮ್ಮಾಯಿ

ಚಿತ್ರದುರ್ಗ: ಕರ್ನಾಟಕದ ರಾಜಕೀಯದ ದಿಕ್ಕು ಬದಲಿಸಿರುವ ನಾಯಕ ಬಿ.ಎಸ್.ಯಡಿಯೂರಪ್ಪ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಮೇ 9ರಂದು ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿ, ಯಡಿಯೂರಪ್ಪ ಅವರು ಸಿದ್ದರಾಮಯ್ಯ ಅವರ ರೀತಿ ಒಂದು ಪಕ್ಷ ಬಿಟ್ಟು ಮತ್ತೊಂದು ಪಕ್ಷಕ್ಕೆ ಹೋಗಿ ಸಿಎಂ ಆದವರಲ್ಲ. ಒಂದು ಪಕ್ಷವನ್ನು ಕೆಳಹಂತದಿಂದ ಸಂಘಟಿಸಿ ವಿಧಾನಸೌಧದ 3ನೇ ಮಹಡಿ ವರೆಗೂ ತಂದು ಜನನಾಯಕರಾಗಿದ್ದಾರೆ ಎಂದರು.

ಮಹಿಳಾ ಮೀಸಲಾತಿ ಜಾರಿಯಾಗುತ್ತದೆ ಅಂತ ಅನಿಸುತ್ತಿಲ್ಲ: ಹೊರಟ್ಟಿ

ಕೊಪ್ಪಳ: ಮಹಿಳಾ ಮೀಸಲಾತಿ ಜಾರಿಯಾಗುತ್ತದೆ ಎಂದು ನಾನು ಅಂದುಕೊಂಡಿಲ್ಲ. ಈ ಹಿಂದೆಯೂ ಬಹಳ ಪ್ರಯತ್ನ ಮಾಡಿದಾಗಲೂ ಅದು ಆಗಿಲ್ಲ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಎಲ್ಲ ರಾಜಕೀಯ ಪಕ್ಷಗಳು ಮಹಿಳಾ ಮೀಸಲಾತಿ ಪರವಾಗಿದ್ದೇವೆ ಎಂದು ತೋರಿಸುತ್ತಾರೆ, ಜಾರಿ ಮಾಡುತ್ತಿಲ್ಲ ಎಂದು ಹೇಳಿದರು.

ಶೃಂಗೇರಿ ಮತಎಣಿಕೆ ವಿಚಾರದಲ್ಲಿ ಷಡ್ಯಂತ್ರ: ಡಿಕೆಶಿ

ನಮ್ಮ ಅಭ್ಯರ್ಥಿಯ ಅಂಚೆ ಮತ ಅಸಿಂಧುಗೆ ಯತ್ನ | ಈ ಕೃತ್ಯ ಪ್ರಜಾಪ್ರಭುತ್ವಕ್ಕೆ ಕಳಂಕ | ಇದರ ವಿರುದ್ಧ ಹೋರಾಟ: ಡಿಸಿಎಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು


ಶೃಂಗೇರಿ ವಿಧಾನಸಭಾ ಕ್ಷೇತ್ರದ ಮತ ಎಣಿಕೆ ವಿಚಾರದಲ್ಲಿ ದೊಡ್ಡಮಟ್ಟದ ಷಡ್ಯಂತ್ರ ಆಗಿದೆ. ಇಂಥ ಕ್ರಿಮಿನಲ್ ಚಟುವಟಿಕೆ ಮಾಡುತ್ತಾರೆಂದು ಯಾರೂ ಊಹಿಸಲು ಸಾಧ್ಯವಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಕಾನೂನು ಹೋರಾಟ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಮಾಜಿ ಶಾಸಕ ಜೀವರಾಜ್ ಅವರು ತಮ್ಮೊಂದಿಗೆ ಕೆಲಸ ಮಾಡುತ್ತಿದ್ದ ಅಧಿಕಾರಿಗಳನ್ನು ಬಳಸಿಕೊಂಡಿದ್ದಾರೆ. ಇದು ದೊಡ್ಡ ಷಡ್ಯಂತ್ರ, ವ್ಯವಸ್ಥಿತ ಅಪರಾಧದ ಕೃತ್ಯ. ಈ ಘಟನೆ ದೇಶ, ಪ್ರಜಾಪ್ರಭುತ್ವಕ್ಕೆ ಕಳಂಕ ಎಂದು ಕಿಡಿ ಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಈ ರೀತಿಯೂ ಮಾಡುತ್ತಾರೆ ಎಂದು ಊಹೆ ಮಾಡಿರಲಿಲ್ಲ. ಮಾಜಿ ಶಾಸಕರಾದ ಜೀವರಾಜ್ ಅವರು ಅಧಿಕಾರಿಗಳ ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳಲ್ಲಿ ಅಕ್ರಮ ಮಾಡಿದ್ದಾರೆ. ಇದರ ಬಗ್ಗೆ ವರದಿ ಬಂದಿದ್ದು, ಅಧ್ಯಯನ ಮಾಡುತ್ತಿದ್ದೇನೆ. ನ್ಯಾಯಾಲಯಕ್ಕೆ ಹೋಗಿ ಕೇವಲ ಅಂಚೆ ಮತಗಳನ್ನು ಮಾತ್ರ ಮರು ಎಣಿಕೆ ಮಾಡಲು ಕೇಳಿದ್ದಾರೆ. ಚುನಾವಣೆ ಮತ ಎಣಿಕೆ ದಿನ ಅವರ ಏಜೆಂಟರು ಹಾಗೂ ಅಧಿಕಾರಿಗಳು ಸಹಿಯೂ ಹಾಕಿದ್ದಾರೆ. ಇದಾದ ಬಳಿಕ ಇಷ್ಟೆಲ್ಲಾ ನಡೆಸಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾನೂನು ಹೋರಾಟ ಮಾಡುತ್ತೇವೆ: ಎಲ್ಲಾ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ನಮ್ಮ ಅಭ್ಯರ್ಥಿಗೆ ಬಂದ ಅಂಚೆ ಮತಗಳನ್ನು ತಿದ್ದಿ ಅವುಗಳನ್ನು ಅಸಿಂಧುಗೊಳಿಸಲು ಷಡ್ಯಂತ್ರ ಮಾಡಲಾಗಿತ್ತು. ಈ ವಿಚಾರವಾಗಿ ದೊಡ್ಡ ತನಿಖೆ ಆಗಬೇಕು. ಕಾನೂನು ಹಾಗೂ ನ್ಯಾಯಾಲಯದಲ್ಲಿ ಇರುವ ಅವಕಾಶದಲ್ಲಿ ಹೋರಾಟ ಮಾಡುತ್ತೇವೆ. ಜಯನಗರ ಕ್ಷೇತ್ರದಲ್ಲೂ ಇದೇ ರೀತಿ ಅನ್ಯಾಯ ಮಾಡಲಾಗಿದೆ. ಹೀಗಾಗಿ ನಾವು ಕಾನೂನು ಹೋರಾಟ ಮಾಡುತ್ತೇವೆ ಎಂದರು.

ಪ್ರಯತ್ನಕ್ಕೆ ಫಲ ಸಿಕ್ಕೇ ಸಿಗುತ್ತೆ: ಡಿಕೆಶಿ ಮತ್ತೆ ಮಾರ್ಮಿಕ ನುಡಿ



ರಾಯಚೂರು: ಪ್ರಯತ್ನವನ್ನು ರಹಸ್ಯವಾಗಿ ಇಡಬೇಕು. ಫಲ ಎಲ್ಲರಿಗೂ ಕಾಣಬೇಕು. ಪ್ರಯತ್ನಕ್ಕೆ ಯಾವತ್ತು ಕೂಡ ಫಲ ಸಿಕ್ಕೇ ಸಿಗುತ್ತೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಮಾರ್ಮಿಕವಾಗಿ ನುಡಿದಿದ್ದಾರೆ.


ರಾಯಚೂರಿನ ಸಿಂಧನೂರಿನಲ್ಲಿ ಭಾನುವಾರ ಬಸನಗೌಡ ಫೌಂಡೇಶನ್‌ನಿಂದ 151 ಜೋಡಿಗಳಿಗೆ ಉಚಿತ ಸಾಮೂಹಿಕ ವಿವಾಹ ಹಾಗೂ 5001 ಮಾತೆಯರಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ದೇವರು ವರವನ್ನೂ ಕೊಡಲ್ಲ, ಶಾಪವನ್ನೂ ಕೊಡಲ್ಲ. ಬರೀ ಅವಕಾಶವನ್ನು ಮಾತ್ರ ಕೊಡ್ತಾನೆ. ಪ್ರಯತ್ನವನ್ನು ರಹಸ್ಯವಾಗಿ ಇಡಬೇಕು. ಫಲ ಎಲ್ಲರಿಗೂ ಕಾಣಬೇಕು. ಪ್ರಯತ್ನಕ್ಕೆ ಯಾವತ್ತೂ ಕೂಡ ಫಲ ಸಿಕ್ಕೇ ಸಿಗುತ್ತೆ ಎಂದು ಮಾರ್ಮಿಕವಾಗಿ ನುಡಿದರು. ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಕೂಗು ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಡಿಕೆಶಿಯವರ ಈ ಮಾರ್ಮಿಕ ನುಡಿ ಸಾಕಷ್ಟು ರಾಜಕೀಯ ಕುತೂಹಲಕ್ಕೆ ಕಾರಣವಾಗಿದೆ.

ನೂತನ ವಧು-ವರರನ್ನು ಆಶೀರ್ವದಿಸಿ ಮಾತನಾಡಿದ ಡಿಕೆಶಿ, ಇದು ಸಾಮೂಹಿಕ ವಿವಾಹ ಮಾತ್ರವಲ್ಲ, ನಮ್ಮ ಸಂಸ್ಕೃತಿ, ಧರ್ಮ ಕಾಪಾಡುತ್ತಿರುವ ಸಮಾರಂಭ. ಸಾಮೂಹಿಕ ವಿವಾಹ ಮಾಡುವುದೆಂದರೆ ಹಗುರವಾದ ಕೆಲಸವಲ್ಲ. ಚಿನ್ನದ ಬೆಲೆ ಗಗನಮುಟ್ಟಿದೆ. ಇಂಥ ಸಮಯದಲ್ಲಿ ಚಿನ್ನದ ಮಾಂಗಲ್ಯ, ಬೆಳ್ಳಿ ಕಾಲುಂಗುರ, ಬಟ್ಟೆ ಬರೆ ಕೊಡುವುದಲ್ಲದೆ ಮತ್ತಿತರ ಸೇವಾ ಕಾರ್ಯಗಳಲ್ಲಿ ಬಸನಗೌಡ ತಮ್ಮನ್ನು ತೊಡಗಿಸಿಕೊಂಡಿದ್ದಾರೆ ಎಂದು ಶ್ಲಾಘಿಸಿದರು.

ಶೃಂಗೇರಿ ಕ್ಷೇತ್ರದ ಫಲಿತಾಂಶ ಕೂಡಲೇ ಪ್ರಕಟಿಸಿ: ಅಶೋಕ್

ಸರ್ಕಾರದಿಂದ ಚು.ಅಧಿಕಾರಿ ಮೇಲೆ ಒತ್ತಡ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ಚುನಾವಣಾಧಿಕಾರಿ ಪ್ರಕಟಿಸದಂತೆ ಕಾಂಗ್ರೆಸ್ ಸರ್ಕಾರ ಒತ್ತಡ ಹೇರಿದೆ. ಚುನಾವಣಾಧಿಕಾರಿಗಳು ಕೂಡಲೇ ಫಲಿತಾಂಶ ಪ್ರಕಟಿಸಿ ಹೈಕೋರ್ಟ್ ಆದೇಶ ಪಾಲಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಒತ್ತಾಯಿಸಿದ್ದಾರೆ.

ಭಾನುವಾರ ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿ, ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ 52 ಅಂಚೆ ಮತಗಳು ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರಿಗೆ ದೊರೆತಿದೆ. ಮತ ಎಣಿಕೆಯಲ್ಲಿ ಯಾರಿಗೆ ಹೆಚ್ಚು ಮತ ಬರುತ್ತದೋ ಅದನ್ನು ಘೋಷಿಸಬೇಕೆಂದು ಕೋರ್ಟ್ ಆದೇಶದಲ್ಲಿ ಹೇಳಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ಕೇಳಿದಾಗ, ಹೈಕೋರ್ಟ್‌ಗೆ ಮಾಹಿತಿ ನೀಡುತ್ತೇವೆ ಎಂದು ಸಬೂಬು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಚುನಾವಣಾಧಿಕಾರಿ ಮೇಲೆ ಒತ್ತಡ ಹೇರಿ ಫಲಿತಾಂಶ ತಡೆಹಿಡಿದಿದೆ. ಈ ಮೂಲಕ ಕೋರ್ಟ್ ಆದೇಶ ಉಲ್ಲಂಘಿಸಲಾಗಿದೆ. ಇದು ರಾಜ್ಯದ ಜನತೆಗೆ ಬಗೆದ ದ್ರೋಹ ಎಂದರು. ವೋಟ್ ಚೋರಿ ಎನ್ನುವ ರಾಹುಲ್ ಗಾಂಧಿ ಈಗ ಎಲ್ಲಿದ್ದಾರೆ? ಬಿಜೆಪಿ ಪರ ಫಲಿತಾಂಶ ಬರಲಿದೆ ಎಂದು ತಿಳಿದಾಕ್ಷಣ ಅಧಿಕಾರಿಗಳು ಉಲ್ಟಾ ಹೊಡೆದಿದ್ದಾರೆ. ಚುನಾವಣಾಧಿಕಾರಿ ಕೂಡಲೇ ಫಲಿತಾಂಶ ಪ್ರಕಟಿಸಬೇಕು ಎಂದರು.

ಶೃಂಗೇರಿಯಲ್ಲಿ ಚುನಾವಣಾ ಅಕ್ರಮ ಬಯಲಿಗೆ: ಬಿವೈವಿ

ಅಧಿಕಾರಿಗಳ ಮೇಲೆ ಒತ್ತಡ ಹೇರಿ ಅಕ್ರಮ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ



2023ರ ವಿಧಾನಸಭಾ ಚುನಾವಣೆ ವೇಳೆ ಕಾಂಗ್ರೆಸ್ ಅಕ್ರಮ ನಡೆಸಿದ್ದು ಶೃಂಗೇರಿಯಲ್ಲಿ ಬಯಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದ್ದಾರೆ.

ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಯಲ್ಲಿ ಬಿಜೆಪಿಗೆ ಮುನ್ನಡೆ ಸಿಕ್ಕಿರುವ ಕುರಿತು ಪ್ರತಿಕ್ರಿಯಿಸಿದರು. ವೋಟ್ ಚೋರಿ ಎಂದು ಹೇಳಿ ಜನರ ಕಿವಿಗೆ ಕಾಂಗ್ರೆಸ್‌ನವರು ಹೂವು ಮುಡಿಸಿದ್ದರು. ಆದರೆ, 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಕ್ರಮ ನಡೆಸಿರುವುದು ಶೃಂಗೇರಿಯಲ್ಲಿ ಬಯಲಾಗಿದೆ. ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರ ಗೆಲುವಿನಿಂದ ಇದು ತಿಳಿಯುತ್ತಿದೆ. ವೋಟ್ ಚೋರಿ ಎಂದು ಹೇಳಿಕೊಂಡಿದ್ದವರ ಬಂಡವಾಳ ಈಗ ಬಯಲಾಗಿದೆ. ಅಧಿಕಾರಿಗಳ ಮೇಲೆ ಒತ್ತಡ ಹೇರಿ ಅಕ್ರಮ ಎಸಗಿದ್ದಾರೆ. ನ್ಯಾಯಯುತವಾಗಿ ಗೆದ್ದ ಜೀವರಾಜ್‌ಗೆ 3 ವರ್ಷ ಮಾಜಿ ಮಾಡಿದ್ದರು. ಕಾಂಗ್ರೆಸ್‌ನವರು ಈ ಬಗ್ಗೆ ಜನರಿಗೆ ಉತ್ತರ ನೀಡಬೇಕು, ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಶೃಂಗೇರಿ ಮತ ಎಣಿಕೆ ವಿಚಾರದಲ್ಲಿ ಷಡ್ಯಂತ್ರ ನಡೆದಿದೆ ಎಂಬ ಡಿಕೆಶಿ ಹೇಳಿಕೆಗೆ ಪ್ರತಿಕ್ರಿಯಿಸಿ, ಡಿಕೆಶಿಯವರು ಈಗ ಜೀವರಾಜ್‌ಗೆ 52 ಮತಗಳ ಮುನ್ನಡೆ ಸಿಕ್ಕಿದ್ದರ ಬಗ್ಗೆ ಉತ್ತರಿಸಲಿ ಎಂದರು.

ಗೊಂದಲದಿಂದಾಗಿ ಶೃಂಗೇರಿ ರಿಸಲ್ಟ್ ಘೋಷಣೆ ಆಗ್ತಿಲ್ಲ: ಪರಂ

ಅಭ್ಯರ್ಥಿಗಳ ಪರವಾಗಿ ಕೆಲವರು ಸಹಿ ಮಾಡಿಲ್ಲ ಇದರಿಂದಾಗಿ ಫಲಿತಾಂಶ ಘೋಷಣೆ ಆಗುತ್ತಿಲ್ಲ

• **ಕನ್ನಡಪ್ರಭ ವಾರ್ತೆ** ತುಮಕೂರು

ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಎಣಿಕೆಯಲ್ಲಿ ಬಹಳಷ್ಟು ಗೊಂದಲಗಳಿರುವುದರಿಂದ ಫಲಿತಾಂಶ ಘೋಷಿಸಲು ಆಗುತ್ತಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ತುಮಕೂರಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಬಿಜೆಪಿ ಅಭ್ಯರ್ಥಿ ಜೀವರಾಜ್ ಕಡೆಯ ಕೆಲವರು ಸಹಿ ಮಾಡಿದ್ದಾರೆ. ಮತ್ತೆ, ಕೆಲವರು ಮಾಡಿಲ್ಲ. ಹಾಗೆಯೇ ಕಾಂಗ್ರೆಸ್ ಶಾಸಕ ರಾಜೇಗೌಡ ಕಡೆಯವರು ಕೂಡ ಕೆಲವರು ಸಹಿ ಮಾಡಿದ್ದಾರೆ. ಕೆಲವರು ಮಾಡಿಲ್ಲ. ಹಾಗಾಗಿ, ಫಲಿತಾಂಶ ಘೋಷಿಸಲು ಆಗುತ್ತಿಲ್ಲ. ಹಾಗಾಗಿ, ಚುನಾವಣಾ ಆಯೋಗಕ್ಕೆ ವರದಿ ಕಳುಹಿಸಲಾಗುತ್ತಿದೆ. ಅಲ್ಲಿಗೆ ಹೋದ ಮೇಲೆ ಎಲೆಕ್ಷನ್ ಕಮೀಷನ್‌ವರು ನೋಡಿ ಕೊಳ್ಳುತ್ತಾರೆ, ನಂತರ ಘೋಷಣೆ ಆಗುತ್ತದೆ ಎಂದು ಹೇಳಿದರು.



X ಫೈಲ್ಸ್

ಈರುಳ್ಳಿ ಇಟ್ಕೊಂಡ, ನೆಗಡಿ ಬರಿಸಿಕೊಂಡ!

ಬ್ರೇಕಿಂಗ್ ನ್ಯೂಸ್: ಬೇಸಿಗೆಯ ಬೇಗೆ ತಾಳದೆ 2 ಈರುಳ್ಳಿಗಳನ್ನು ಜೇಬಿನಲ್ಲಿ ಇರಿಸಿಕೊಂಡವಗೆ ವಿಪರೀತ ಶೀತ. ಆಸ್ಪತ್ರೆಗೆ ದಾಖಲು.

• **ವಿನಯ್**

ಅಮೆರಿಕ, ಇರಾನ್‌ಗೆ ತರೂರ್ ಬೇಕು!

ಇರಾನ್, ಅಮೆರಿಕ ಎರಡೂ ದೇಶಗಳು, ಒಪ್ಪಂದ ಪತ್ರವೊಂದು ಬರೆದುಕೊಡುವಂತೆ ಶಶಿ ತರೂರ್‌ರನ್ನು ಸಂಪರ್ಕಿಸಿವೆಯಂತೆ. ಪತ್ರವು ಎರಡೂ ದೇಶಗಳ ನಾಯಕರಿಗೆ ಅರ್ಥವಾಗದಷ್ಟು ಕಠಿಣ, ಕ್ಲಿಷ್ಟ ಇಂಗ್ಲಿಷ್ ಪದಗಳಿಂದ ಕೂಡಿರಬೇಕು. ಮತ್ತು ಓದಿದರೆ ಎರಡೂ ದೇಶಗಳು ತಾನು ಗೆದ್ದಿವೆ ಎಂದು ಸಮಾಧಾನಪಟ್ಟುಕೊಳ್ಳುವಂತಿರಬೇಕು ಎಂದು ಷರತ್ತು ಹಾಕಲಾಗಿದೆಯಂತೆ.

• **ಮುಕುಲ್**

15ಕ್ಕೆ ಟಿಬಿ ಡ್ಯಾಂನ ಕ್ರಸ್ಟ್‌ಗೇಟ್ ಉದ್ಘಾಟನೆ?

ತುಂಗಭದ್ರಾ ಜಲಾಶಯಕ್ಕೆ ಡಿಸಿಎಂ ಭೇಟಿ, ಗೇಟ್ ಅಳವಡಿಕೆ ಕಾರ್ಯ ಪರಿಶೀಲನೆ

• **ಕನ್ನಡಪ್ರಭ ವಾರ್ತೆ** ಹೊಸಪೇಟೆ

ತುಂಗಭದ್ರಾ ಜಲಾಶಯದ ಜಲಾಶಯದ ಕ್ರಸ್ಟ್‌ಗೇಟ್ ಬದಲಾಯಿಸುವ ಕಾರ್ಯ ಪೂರ್ಣಗೊಂಡಿದ್ದು, ಶೀಘ್ರವೇ ಉದ್ಘಾಟನೆ ಮಾಡಲಾಗುವುದು. ಮೇ 15ಕ್ಕೆ ಉದ್ಘಾಟನೆ ನಡೆಸಲು ಸಾಧ್ಯವೇ ಎಂಬುದರ ಬಗ್ಗೆ ಚಿಂತನೆ ನಡೆಸುತ್ತಿದ್ದೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಭಾನುವಾರ ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿ, ಬಹುತೇಕ ಅಂತಿಮ ಹಂತ ತಲುಪಿದ ಗೇಟ್ ಅಳವಡಿಕೆ ಕಾರ್ಯ ಪರಿಶೀಲಿಸಿದರು. ಬಳಿಕ, ಸುದ್ದಿಗಾರರೊಂದಿಗೆ ಮಾತನಾಡಿ, ಕರ್ನಾಟಕ, ಆಂಧ್ರಪ್ರದೇಶ ರಾಜ್ಯಗಳು 64:34 ಅನುಪಾತದಲ್ಲಿ ಜಲಾಶಯಕ್ಕೆ ಬಂಡವಾಳ ಹೂಡುತ್ತಿದ್ದು, ಡ್ಯಾಂ ಮಂಡಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಸದ್ಯ ಜಲಾಶಯದಲ್ಲಿ 10.5 ಟಿಎಂಸಿ ನೀರಿದ್ದು, ಈಗ ಮಳೆ ಪ್ರಾರಂಭವಾದರೆ ಎರಡು ತಿಂಗಳಲ್ಲಿ ಸುಮಾರು 44 ಟಿಎಂಸಿ ನೀರು ಸಂಗ್ರಹವಾಗಲಿದೆ. ಕ್ರಸ್ಟ್‌ಗೇಟ್ ಅಳವಡಿಕೆ ದೊಡ್ಡ ಸವಾಲಾಗಿತ್ತು. ಈ ಕಾರ್ಯ ಯಶಸ್ವಿಯಾಗಿ ಹಮ್ಮಿಕೊಂಡು ನಾವು ದೇಶಕ್ಕೆ ಮಾದರಿಯಾಗಿದ್ದೇವೆ. ಇದರಿಂದ ಇಂದು ದೇಶವೇ ನಮ್ಮ ರಾಜ್ಯದತ್ತ ತಿರುಗಿ ನೋಡುತ್ತಿದೆ ಎಂದರು.



ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯಕ್ಕೆ ಭಾನುವಾರ ಡಿಸಿಎಂ ಡಿ.ಕೆ. ಶಿವಕುಮಾರ್ ಭೇಟಿ ಪರಿಶೀಲನೆ ನಡೆಸಿದರು. ಸಚಿವ ಶಿವರಾಜ್ ತಂಗಡಗಿ ಮತ್ತಿತರರಿದ್ದರು.

ತಜ್ಞರ ವರದಿಯಂತೆ ಕ್ರಸ್ಟ್‌ಗೇಟ್ ಅಳವಡಿಕೆ ಕಾರ್ಯದಿಂದ ಅಣೆಕಟ್ಟಿನ ಆಯಸ್ಸು ಮುಂದಿನ 50 ವರ್ಷಗಳವರೆಗೆ ವೃದ್ಧಿಸಲಿದೆ. ತಜ್ಞರ ವರದಿಯಂತೆ ಹೊಸ ಚೈನ್ ಅಳವಡಿಸಲು ನಿರ್ಧರಿಸಿದ್ದು, ಮೊದಲ ಸೆಟ್ ಹೊಸ ಚೈನ್ ಮೇ 7ರಂದು ಆಗಮಿಸಲಿದೆ. ಮೇ ಅಂತ್ಯದೊಳಗೆ ಚೈನ್ ಅಳವಡಿಕೆ ಕಾರ್ಯ ಸಂಪೂರ್ಣ ಮುಗಿಯಲಿದೆ ಎಂದು ಅವರು ತಿಳಿಸಿದರು.

ಇದೇ ವೇಳೆ, ನವಲಿ ಸಮಾನಾಂತರ ಜಲಾಶಯ ನಿರ್ಮಾಣದ ಬಗ್ಗೆ ನಾವು ಸಿದ್ಧರಿದ್ದೇವೆ. ಆದರೆ, ಆಂಧ್ರಪ್ರದೇಶ, ತೆಲಂಗಾಣ ಮುಖ್ಯಮಂತ್ರಿಗಳು ಈ ಕುರಿತು ಮಾತುಕತೆ ನಡೆಸಲು ಸಮಯ ನೀಡುತ್ತಿಲ್ಲ ಎಂದು ಶಿವಕುಮಾರ್ ಹೇಳಿದರು. ಆಂಧ್ರ, ತೆಲಂಗಾಣ ರಾಜ್ಯಗಳಿಗೆ ಜಲಾಶಯದಿಂದ ನೀರು ಹೋಗುತ್ತಿದೆಯಲ್ಲ, ಅದಕ್ಕೆ ಅವರು ಸುಮ್ಮನೆ ಇದ್ದಾರೆ. ನವಲಿ ಸಮಾನಾಂತರ ಜಲಾಶಯದ ಬಗ್ಗೆ ಮಾತುಕತೆ ಮಾಡಿ ಬಗೆಹರಿಸಿಕೊಳ್ಳೋಣ ಎಂದು ಅವರಲ್ಲಿ ನಾವು ಮನವಿ ಮಾಡಿದ್ದೇವೆ ಎಂದರು.

ಸಿಎಂ ಸ್ಥಾನಕ್ಕೆ ಸಿದ್ದುಗೆ ಖರ್ಗೆ ಮಾತ್ರ ಪರ್ಯಾಯ ನಾಯಕ: ರಾಯರೆಡ್ಡಿ

ಮೊದಲ ಪುಟದಿಂದ



'ಮಲ್ಲಿಕಾರ್ಜುನ ಖರ್ಗೆಯವರು ಸಿಎಂ ಆಗಲಿ ಎನ್ನುವುದು ನನ್ನ ಅಭಿಪ್ರಾಯ. ಹಾಗಂತ, ನಾನು ಡಿ.ಕೆ.ಶಿವಕುಮಾರ್ ಆಗಬಾರದು ಎನ್ನುವುದಿಲ್ಲ. ಶಾಸಕರಾಗಿರುವ ಪ್ರತಿಯೊಬ್ಬರೂ ಸಿಎಂ ಆಗಲು ಅರ್ಹರಿರುತ್ತಾರೆ. ನಾನು ಪ್ರಧಾನಿಯಾಗಬೇಕು ಅಂದುಕೊಂಡಿದ್ದೇನೆ, ಪ್ರತಿಯೊಬ್ಬರೂ ಆಸೆ ಪಡಬಹುದು. ಆದರೆ, ಆಗಬೇಕಲ್ಲ' ಎಂದರು.

ರಾಜ್ಯದಲ್ಲಿನ ರಾಜಕೀಯ ಕುರಿತು ಮಾಧ್ಯಮಗಳಲ್ಲಿ ನಡೆಯುತ್ತಿರುವ ಚರ್ಚೆಯ ಹಿನ್ನೆಲೆಯಲ್ಲಿ ನಾನೇ ಖುದ್ದು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಬಂದಿದ್ದೇನೆ. ಮುಖ್ಯಮಂತ್ರಿಯಾಗುವಂತೆ ನಾನೇ ಅವರಿಗೆ ಮನವಿ ಮಾಡಿದ್ದೇನೆ. ಆದರೆ, ಖರ್ಗೆಯವರು, 'ಈ ಹಿಂದೆಯೇ ಆಗಬೇಕಾಗಿತ್ತು, ನೀವೆಲ್ಲ ಸೋತಿದ್ದರಿಂದ 2008ರಲ್ಲಿ ನಾನು ಆಗಲಿಲ್ಲ' ಎಂದಷ್ಟೇ ಹೇಳಿದರು ಎಂದರು.

ಭೇಟಿ ವೇಳೆ, ಸಚಿವ ಸಂಪುಟ ಪುನಾರಚನೆ ಮಾಡಿ, 25 ಬೇರೆ ಶಾಸಕರಿಗೆ ಸಚಿವ ಸ್ಥಾನ ಕೊಡಿ, ಅದರಲ್ಲೂ ಹೊಸಬರು, ಹಿರಿಯರು ಸಹ ಇರಲಿ ಎಂದಷ್ಟೇ ಹೇಳಿದ್ದೇನೆ. ನನ್ನನ್ನು ಸಚಿವನ್ನಾಗಿ ಮಾಡಿ ಎಂದು ನಾನು ಕೇಳಿಲ್ಲ. ಮಗು ಅತ್ತಾಗಲೇ ಹಾಲು ಕೊಡಬೇಕು ಎಂದೇನೂ ಇಲ್ಲ. ಒಳ್ಳೆಯ ತಾಯಿಗೆ ಮಗುವಿಗೆ ಯಾವಾಗ ಹಾಲು ಬೇಕು ಎನ್ನುವುದು ಗೊತ್ತಾಗಿ ಅಳುವ ಮೊದಲೇ ಹಾಲು ಕೊಡುತ್ತಾಳೆ. ನಾನು ಸಚಿವ ಸ್ಥಾನದ ಆಕಾಂಕ್ಷಿಯಲ್ಲ. ಪಕ್ಷ ಕೊಟ್ಟರೆ ನಿಭಾಯಿಸುವೆ. ಸಿದ್ದರಾಮಯ್ಯ ಅವರೇ ನೀನು ಫೈನಾನ್ಸ್ ಮಿನಿಸ್ಟರ್ ಆಗಬೇಕು ಎಂದು ಈ ಹಿಂದೆ ಹೇಳಿದ್ದರು, ಮಾಡಿಲ್ಲ. ಹಾಗಂತ ನಾನು ಈಗ ಅದನ್ನು ಕೇಳಲು ಆಗುತ್ತದೆಯೇ ಎಂದು ಪ್ರಶ್ನೆ ಮಾಡಿದರು.

ಸಕಲ ಸಿದ್ಧತೆ ಮೇ 9ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಅಭಿಮಾನೋತ್ಸವ | ವಿಜಯೇಂದ್ರ ನೇತೃತ್ವದಲ್ಲಿ ನಿನ್ನೆ ಪೂರ್ವಭಾವಿ ಸಭೆ

ಬಿಎಸ್‌ವೈ ಅಭಿಮಾನೋತ್ಸವ ಸಿದ್ಧತೆ ಪರಿಶೀಲಿಸಿದ ಬಿವೈವಿ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ



ಬಿಎಸ್‌ವೈ ಅಭಿಮಾನೋತ್ಸವದ ಸ್ಥಳ ಪರಿಶೀಲನೆ ನಡೆಸಿದ ವಿಜಯೇಂದ್ರ, ಬೊಮ್ಮಾಯಿ.



ಸುದೀರ್ಘ 50 ವರ್ಷಗಳ ರಾಜಕೀಯ ಪ್ರಯಾಣದಲ್ಲಿ ಬಿ.ಎಸ್.ಯಡಿಯೂರಪ್ಪ ನವರು 45 ವರ್ಷಗಳ ಕಾಲ ನಿರಂತರ ಹೋರಾಟ ನಡೆಸಿ 5 ವರ್ಷ ಮಾತ್ರ ಅಧಿಕಾರ ಅನುಭವಿಸಿದ್ದಾರೆ. ಅಧಿಕಾರ ಇರಲಿ, ಬಿಡಲಿ, ರೈತರು, ಜನಸಾಮಾನ್ಯರು, ಬಡವರು, ಶೋಷಿತರ ಕಣ್ಣೊರೆಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಶ್ಲಾಘಿಸಿದ್ದಾರೆ.

ಯಡಿಯೂರಪ್ಪ ಅಭಿಮಾನೋತ್ಸವ ಹಿನ್ನೆಲೆಯಲ್ಲಿ ಭಾನುವಾರ ಚಿತ್ರದುರ್ಗಕ್ಕೆ ಆಗಮಿಸಿದ ಅವರು, ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡರು. ಬಳಿಕ, ಸಮಾರಂಭ ನಡೆಯಲಿರುವ ಸ್ಥಳಕ್ಕೆ ತೆರಳಿ, ಸಮಾರಂಭದ ಸಿದ್ಧತೆಗಳ ಪರಿಶೀಲನೆ ನಡೆಸಿದರು. ನಂತರ, ಮಾದಾರ ಚೆನ್ನಯ್ಯ ಪೀಠಕ್ಕೆ ತೆರಳಿ, ಶ್ರೀಗಳನ್ನು ಸಮಾರಂಭಕ್ಕೆ ಆಹ್ವಾನಿಸಿದರು.

ಈ ವೇಳೆ ಮಾತನಾಡಿ, ಯಾರಿಗೆ ಅನ್ಯಾಯವಾಗುತ್ತದೆಯೋ ಅಲ್ಲಿ ಯಡಿಯೂರಪ್ಪ ಇರುತ್ತಿದ್ದರು. ಮುಖ್ಯಮಂತ್ರಿಯಾಗಿದ್ದಾಗ ರಾಜ್ಯದಲ್ಲಿ ನೆರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಮನೆಗಳನ್ನು ಕಳೆದುಕೊಂಡವರಿಗೆ ಕೇಂದ್ರ ಸರ್ಕಾರ ನೀಡಿದ 1 ಲಕ್ಷ ರು. ಜೊತೆಗೆ ರಾಜ್ಯದಿಂದ 4 ಲಕ್ಷ ರು.ಸೇರಿಸಿ ಮನೆ ಕಟ್ಟಿಸಿಕೊಳ್ಳಲು ನೆರವಾಗಿದ್ದನ್ನು ಜನ ಇನ್ನು ಮರೆತಿಲ್ಲ ಎಂದು ಹೇಳಿದರು.

ಕೋಟ್ಯಂತರ ಜನರ ಪ್ರೀತಿ ವಿಶ್ವಾಸ ಗಳಿಸಿರುವ ಯಡಿಯೂರಪ್ಪನವರ ಅಭಿಮಾನೋತ್ಸವದಲ್ಲಿ ಜಿಲ್ಲೆಯಿಂದ 10 ಸಾವಿರ ಭಾಗ್ಯಲಕ್ಷ್ಮಿ ಫಲಾನುಭವಿಗಳು ಭಾಗವಹಿಸಲಿದ್ದಾರೆ. ಮೇ 8ರಂದು ಸಂಜೆ ಯಡಿಯೂರಪ್ಪನವರನ್ನು ಭವ್ಯವಾಗಿ ಸ್ವಾಗತಿಸಲಾಗುವುದು. 9ರಂದು ನಡೆಯುವ ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ನಾಡಿನ ಮೂಲೆ ಮೂಲೆಗಳಿಂದ ವಿವಿಧ ಮಠಾಧೀಶರು, ರಾಜಕಾರಣಿಗಳು ಆಗಮಿಸಲಿದ್ದಾರೆ ಎಂದರು.


ಮಾದಾರ ಚನ್ನಯ್ಯ ಶ್ರೀಗೆ ಆಹ್ವಾನ



ಮೇ 9 ರಂದು ಚಿತ್ರದುರ್ಗದಲ್ಲಿ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಮಾನೋತ್ಸವ ಸಮಾರಂಭಕ್ಕೆ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿಗೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸತ್ ಸದಸ್ಯ ಗೋವಿಂದ ಎಂ.ಕಾರಜೋಳ, ಮಾಜಿ ಸಚಿವ ಆರಗ ಜ್ಞಾನೇಂದ್ರ ಅವರು ಆಹ್ವಾನ ನೀಡಿದರು.

ದೇಶದಲ್ಲಿ 20 ಇಎಸ್‌ಐಸಿ ವೈದ್ಯ ಕಾಲೇಜು ಸ್ಥಾಪನೆ: ಕೇಂದ್ರ ಸಚಿವ

ಕಾರ್ಮಿಕರಿಗೆ ಇಎಸ್‌ಐಸಿ ಆಸ್ಪತ್ರೆ ವರ: ಸಚಿವ ಮನ್ಸುಖ್ ದೊಡ್ಡಬಳ್ಳಾಪುರದಲ್ಲಿ 100 ಹಾಸಿಗೆ ಆಸ್ಪತ್ರೆ ಉದ್ಘಾಟನೆ



• **ಕನ್ನಡಪ್ರಭ ವಾರ್ತೆ** ದೊಡ್ಡಬಳ್ಳಾಪುರ

ಶ್ರಮಿಕ ವರ್ಗದವರು ಹಾಗೂ ಅವರ ಅವಲಂಬಿತರಿಗೆ ಉಚಿತ ವೈದ್ಯಕೀಯ ಸೇವೆಗಳನ್ನು ಒದಗಿಸುವಲ್ಲಿ ಇಎಸ್‌ಐಸಿ ಆಸ್ಪತ್ರೆ ವರದಾನವಾಗಲಿದೆ. ಎಲ್ಲಾ ಕಾರ್ಮಿಕರು ವೈದ್ಯಕೀಯ ಸೇವೆಯ ಸದುಪಯೋಗ ಪಡೆಯಬೇಕು ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿದರು.

ನಗರದ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನೂತನವಾಗಿ ನಿರ್ಮಿಸಿರುವ 100 ಹಾಸಿಗೆ ಸಾಮರ್ಥ್ಯದ ಇಎಸ್‌ಐ-ಸಿ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತೆಯೇ ಕೇಂದ್ರ ಸರ್ಕಾರದ ಮೂಲಮಂತ್ರವಾಗಿದ್ದು, ದೊಡ್ಡಬಳ್ಳಾಪುರದಲ್ಲಿ ಸುಮಾರು ₹101 ಕೋಟಿ ವೆಚ್ಚದಲ್ಲಿ ಇಎಸ್‌ಐಸಿ ಆಸ್ಪತ್ರೆ ಕಟ್ಟಡ ನಿರ್ಮಿಸಲಾಗಿದೆ. ಜತೆಗೆ ಬಳ್ಳಾರಿಯಲ್ಲಿ ಸುಮಾರು 1.5 ಲಕ್ಷ ಜವಳಿ ಕಾರ್ಮಿಕರ ಅನುಕೂಲಕ್ಕಾಗಿ ₹150 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಇಎಸ್‌ಐಸಿ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದೆ. ದೇಶಾದ್ಯಂತ 20 ಇಎಸ್‌ಐಸಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುತ್ತೇವೆ ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತದ ಸಂಸದ ಡಾ. ಕೆ.ಸುಧಾಕರ್, ದೊಡ್ಡಬಳ್ಳಾಪುರ ಶಾಸಕ ಧೀರಜ್ ಮುನಿರಾಜು ಇತರರಿದ್ದರು.

ನಿಧನವಾರ್ತೆ

ಗೋಪಾಲಕೃಷ್ಣ ಪ್ರಭು



ಉಡುಪಿ: ಉಡುಪಿ ಅಂಬಾಗಿಲು ಎಲ್‌ವಿಟಿ ನಿವಾಸಿ, ಹಲವು ವರ್ಷಗಳಿಂದ ಮಣಿಪಾಲದ ಲೈಬ್ರರಿ ಕ್ಯಾಂಟೀನ್ ನಡೆಸುತ್ತಿದ್ದ ಗೋಪಾಲಕೃಷ್ಣ ಪ್ರಭು (69) ಅಲ್ಪಕಾಲದ ಅಸೌಖ್ಯದಿಂದ ಭಾನುವಾರ ನಿಧನರಾದರು. ಧಾರ್ಮಿಕ ಮನೋಭಾವದರಾಗಿದ್ದ ಅವರು ಹಲವಾರು ಸಂಘ ಸಂಸ್ಥೆಯ ಸದಸ್ಯರಾಗಿದ್ದರು. ಪತ್ನಿ, ಪುತ್ರ, ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ಶಶಿಕಲಾ ಕೋಟ್ಯಾನ್



ಮೂಲ್ಕಿ: ಮೂಲ್ಕಿಯ ಚಿತ್ರಾಪು ಭಜನಿ ಬಳಿ ನಿವಾಸಿ ಶಶಿಕಲಾ ಎಸ್. ಕೋಟ್ಯಾನ್ (83) ಸ್ವಗೃಹದಲ್ಲಿ ಭಾನುವಾರ ನಿಧನರಾದರು. ಮೃತರು ಮೂಲ್ಕಿ ನಗರ ಪಂಚಾಯಿತಿ ಮಾಜಿ ಸದಸ್ಯ ಯೋಗೀಶ್ ಕೋಟ್ಯಾನ್ ಸಹಿತ ಐವರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಹಿರಿಯ ಕೃಷಿಕೆಯಾಗಿ, ಮೂಲ್ಕಿ ಪುರಸಭೆ ಸದಸ್ಯೆಯಾಗಿ, ಕಾಂಗ್ರೆಸ್ ಪಕ್ಷದ ಹಿರಿಯ ನಾಯಕಿಯಾಗಿ, ಕೊಡುಗೈ ದಾನಿಯಾಗಿ, ಪರೋಪಕಾರಿಯಾಗಿ ಜನಾನುರಾಗಿಯಾಗಿದ್ದರು.

ಮಹಾಬಲ ಭಟ್

ಉಡುಪಿ: ಮಣಿಪಾಲ ರಾಜೀವ ನಗರ ನಿವಾಸಿ ಕುಂಭಾಸಿ ಮಹಾಬಲ ಭಟ್ (73) ಸ್ವಗೃಹದಲ್ಲಿ ನಿಧನರಾದರು. ಕುಂಭಾಸಿ ಹರಿಹರ ದೇವಸ್ಥಾನ ಆಡಳಿತ ಮೊಕ್ತೇಸರರಾಗಿದ್ದ ಅವರು ಉಡುಪಿ ಜನತಾ ಕೋ ಆಪರೇಟಿವ್ ಬ್ಯಾಂಕ್ ನಲ್ಲಿ ಸುದೀರ್ಘ ಕಾಲ ಕರ್ತವ್ಯ ನಿರ್ವಹಿಸಿ ನಿವೃತ್ತರಾಗಿದ್ದರು. ಸ್ನೇಹಜೀವಿಯಾಗಿದ್ದ ಅವರು ಪರಿಸರದ ಧಾರ್ಮಿಕ ಚಟುವಟಿಕೆಯಲ್ಲಿ ಸದಾ ಮುಂಚೂಣಿಯಲ್ಲಿ ಇರುತ್ತಿದ್ದರು. ಪತ್ನಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ.

ಪೂರ್ಣಿಮಾ ಆರ್. ಮಾಡ



ಉಡುಪಿ: ಮುಂಬೈನ ಕೇಬಲ್ ಕಾರ್ಪೊರೇಶನ್ ಆಫ್ ಇಂಡಿಯಾ ಕಂಪನಿಯ ಉದ್ಯೋಗಿಯಾಗಿದ್ದ ದಿ. ರಮಾನಾಥ ಎಸ್. ಮಾಡ ಅವರ ಪತ್ನಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಗಾಂಧಿವಾದಿ ದಿ. ಮುದ್ರಾಡಿ ಕೃಷ್ಣಯ್ಯ ಶೆಟ್ಟಿಯವರ ನಾಲ್ಕನೇ ಪುತ್ರಿ ಆತ್ರಾಡಿ ಬೀರ್ಬೆಟ್ಟುಮನೆ ಶ್ರೀಮತಿ ಪೂರ್ಣಿಮಾ ಆರ್. ಮಾಡ (81) ಅವರು ಮುಂಬೈಯ ಸ್ವಗೃಹದಲ್ಲಿ ನಿಧನ ಹೊಂದಿದರು. ಅವರು ಪುತ್ರ ಹಾಗೂ ಮೂವರು ಪುತ್ರಿಯರನ್ನು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುತ್ತಾರೆ. ಸುಮಾರು 30 ವರ್ಷಗಳಿಗೂ ಅಧಿಕ ಕಾಲ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದ ಅವರು ಮುಂಬೈಯಲ್ಲಿ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೊಡುಗೈ ದಾನಿಯಾಗಿ ಅಪಾರ ಜನಮನ್ನಣೆ ಗಳಿಸಿದ್ದರು.

ಸರೋಜಿನಿ ಆಚಾರ್ಯ



ಮಂಗಳೂರು: ಬೆಳ್ಮ ಕಲ್ಲುಪಾದೆ ರುದ್ರಯ್ಯ ಆಚಾರ್ಯರ ಪತ್ನಿ ಸರೋಜಿನಿ ಆಚಾರ್ಯ(79) ಅಲ್ಪಕಾಲದ ಅಸೌಖ್ಯದಿಂದ ಏ.28ರಂದು ಸ್ವಗೃಹದಲ್ಲಿ ನಿಧನ ಹೊಂದಿದರು. ಮೃತರು ಆರು ಪುತ್ರರು, ಇಬ್ಬರು ಪುತ್ರಿಯರು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಮಾದಕವಸ್ತುಸಾಗಾಟ: ಸೆರೆ

ಬಂಟ್ವಾಳ: ಮಾದಕ ವಸ್ತು ಎಂಡಿಎಂಎ ಸಾಗಿಸುತ್ತಿದ್ದ ಇಬ್ಬರು ಆರೋಪಿಗಳ ಸಹಿತ 46 ಲಕ್ಷ ರು. ಮೌಲ್ಯದ ಮಾದಕ ವಸ್ತು, ಮೊಬೈಲ್ ಫೋನ್, ಬೊಲೆರೋ ವಾಹನವನ್ನು ಬಂಟ್ವಾಳ ಗ್ರಾಮಾಂತರ ಠಾಣೆ ಪೊಲೀಸರು ಮಂಚಿ ಗ್ರಾಮದ ಪಂಜಾಲ ಎಂಬಲ್ಲಿ ವಶಕ್ಕೆ ಪಡೆದುಕೊಂಡಿದ್ದಾರೆ. ಬಂಧಿತರನ್ನು ಪುತ್ತೂರು ಕಲೆಂಬಿ ನಿವಾಸಿಗಳಾದ ಮೊಹಮ್ಮದ್ ನಿಜಾಮುದ್ದೀನ್ (30) ಹಾಗೂ ಮೊಹಮದ್ ಶಾಹೀಂ (19) ಎಂದು ಗುರುತಿಸಲಾಗಿದೆ.

ಮಂಗಳೂರಿಗೆ ದೊರೆಯಲಿದೆ ಬಿಳಿಯೂರು ಡ್ಯಾಂ ನೀರು

ಅಣೆಕಟ್ಟೆಯಲ್ಲಿ 0.2 ಟಿಎಂಸಿ ನೀರು ಸಂಗ್ರಹ | ಉದ್ಭವ ಲಿಂಗಕ್ಕೆ ಶಿವರಾತ್ರಿ ಪೂಜೆಯಿಲ್ಲದೆ ಭಕ್ತರಿಗೆ ನಿರಾಸೆ

• **ಕನ್ನಡಪ್ರಭವಾರ್ತೆ** ಉಪ್ಪಿನಂಗಡಿ

ನೇತ್ರಾವತಿ ಹಾಗೂ ಕುಮಾರಧಾರಾ ನದಿಗಳು ಸಂಗಮಿಸುವ ಉಪ್ಪಿನಂಗಡಿಯಲ್ಲಿ ಬಿಳಿಯೂರು ಅಣೆಕಟ್ಟಿನಲ್ಲಿ 0.2 ಟಿ ಎಂಸಿ ನೀರು ಸಂಗ್ರಹಗೊಂಡಿದ್ದು, ಮಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿದರೆ ಈ ನೀರು ಆಧಾರವಾಗಲಿದೆ.

ಮಂಗಳೂರು ಮಹಾನಗರಕ್ಕೆ ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಬಾರದೆಂದು ಸಮತೋಲನ ಜಲಾಶಯವಾಗಿ ಬಿಳಿಯೂರು ಎಂಬಲ್ಲಿ ಅಣೆಕಟ್ಟನ್ನು ರಚಿಸಲಾಗಿದೆ. ಡಿಸೆಂಬರ್ ತಿಂಗಳ ಆಸುಪಾಸಿನಲ್ಲಿ ಈ ಅಣೆಕಟ್ಟಿಗೆ ಗೇಟು ಅಳವಡಿಸುತ್ತಿರುವುದರಿಂದ ಸರಿ ಸುಮಾರು 6 ತಿಂಗಳಾವಧಿ ಹರಿಯುವ ನೀರನ್ನು ತಡೆ ಹಿಡಿದು ನಿಲ್ಲಿಸಲಾಗುತ್ತದೆ. ಅಣೆಕಟ್ಟಿನಲ್ಲಿ ನಾಲ್ಕು ಮೀಟರ್ ಎತ್ತರದ ಗೇಟು ಅಳವಡಿಕೆಯಾಗಿರುವುದರಿಂದ 6 ಕಿ ಮೀ ಉದ್ದಕ್ಕೂ ಹಿನ್ನೀರು ಸಂಗ್ರಹಗೊಳ್ಳುತ್ತಿದೆ. ಪರಿಣಾಮ ಈ ಭಾಗದುದ್ದಕ್ಕೂ ಅಂತರ್ಜಲ ಸಂಗ್ರಹಣೆಗೊಂಡಿದೆ.



ನೇತ್ರಾವತಿ ಕುಮಾರಧಾರಾ ನದಿಯ ಸಂಗಮ ತಾಣದ ದೃಶ್ಯ .

ಕೃಷಿಕರಿಗೆ ಸಂತಸ, ಆಸ್ತಿಕರಿಗೆ ನೋವು ನಿರಾಸೆ: ಬಿಳಿಯೂರು ಅಣೆಕಟ್ಟಿನಲ್ಲಿ ಡಿಸೆಂಬರ್‌ತಿಂಗಳಿಂದಲೇ ಗೇಟು ಅಳವಡಿಸಿ ನೀರು ಸಂಗ್ರಹಿಸುತ್ತಿರುವುದರಿಂದ ನದಿ ಪಾತ್ರದ ಕೃಷಿಕರಿಗೆ ಸುಲಲಿತ ನೀರಿನ ಸೌಲಭ್ಯ ದೊರೆಂತಂತಾಗಿ ಸಂತಸ ಮೂಡಿದೆ. ಆದರೆ ನೇತ್ರಾವತಿ ನದಿ ಗರ್ಭದಲ್ಲಿರುವ ಶಿವನ ಉದ್ಭವ ಲಿಂಗಕ್ಕೆ ಸನಾತನ ಕಾಲದಿಂದ ನಡೆದುಕೊಂಡು ಬರಲಾಗುತ್ತಿದ್ದ ಶಿವರಾತ್ರಿ ವಿಶೇಷ ಪೂಜೆಯು ನಡೆಯದಂತಾಗಿ ಭಕ್ತರಿಗೆ ನೋವು ಮತ್ತು ನಿರಾಸೆ ಆಗಿದೆ. ಗೇಟಿನ ಗಾತ್ರವನ್ನು ತಗ್ಗಿಸಿ ಮಾರ್ಚ್ ತಿಂಗಳ ನಂತರ ಗೇಟಿನ ಗಾತ್ರವನ್ನು ಹೆಚ್ಚಿಸಲು ತನ್ಮೂಲಕ ಪರಂಪರಾಗತವಾಗಿ ನಡೆಯುತ್ತಿದ್ದ ಪೂಜಾ ವಿಧಿವಿಧಾನವನ್ನು ನಡೆಸುವಂತಾಗಲು ಅವಕಾಶ ಕಲ್ಪಿಸಬೇಕೆಂಬ ಭಕ್ತರ ಮನವಿಗೆ ಮೂರು ವರ್ಷಗಳಲ್ಲಿ ಮಾನ್ಯತೆ ದೊರಕಿಲ್ಲ.

> ನೇತ್ರಾವತಿ ನದಿಯಲ್ಲಿ ಬಿಳಿಯೂರು ಅಣೆಕಟ್ಟಿನ ಕಾರಣಕ್ಕೆ ಹಿನ್ನೀರು ಸಂಗ್ರಹವಾಗಿ ಕೃಷಿಕರಿಗೆ ಅನುಕೂಲವಾಗಿರುವುದು, ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಣೆಯಾಗಿರುವುದು ಸಂತಸದ ವಿಚಾರ. ಆದಾಗ್ಯೂ ನೇತ್ರಾವತಿ ನದಿ ಗರ್ಭದ ಶಿವನ ಉದ್ಭವ ಲಿಂಗಕ್ಕೆ ಶಿವರಾತ್ರಿಯ ವಿಶೇಷ ಪೂಜೆ ನಡೆಯುವಂತಾಗಲೂ ಜಿಲ್ಲಾಡಳಿತ ಮುಂದಾಗಬೇಕು.
>
> • **ಸಂದೀಪ್ ಶೆಟ್ಟಿ,** ಹೋಟೆಲ್ ಮಾಲೀಕರು ಉಪ್ಪಿನಂಗಡಿ

ಅತೀ ಹೆಚ್ಚು ಕಲ್ಮಶ ನದಿ ಸೇರ್ಪಡೆ: ಬೆಳೆಯುತ್ತಿರುವ ಪಟ್ಟಣವಾಗಿರುವ ಉಪ್ಪಿನಂಗಡಿಯಲ್ಲಿ ದ್ರವ ತ್ಯಾಜ್ಯ ದೊಡ್ಡ ಪ್ರಮಾಣದಲ್ಲಿ ನದಿ ಸೇರುತ್ತಿದ್ದು, ಇನ್ನು ಕೆಲವು ವಸತಿ ಸಂಕೀರ್ಣಗಳಿಂದ ಶೌಚಾಲಯದ ತ್ಯಾಜ್ಯಗಳೂ ಸೇರುತ್ತಿದೆ ಎಂಬ ಆರೋಪವಿದೆ. ಇದು ಕುಡಿಯುವ ನೀರಿಗಾಗಿ ಬಳಕೆಯಾಗುವ ಈ ನದಿ ನೀರಿನ ಬಗ್ಗೆ ಕಳವಳಕಾರಿ ವಿದ್ಯಾಮಾನವಾಗಿದೆ. ಆದಾಗ್ಯೂ ನದಿಯಲ್ಲಿ ಹೆಚ್ಚುತ್ತಿರುವ ಮೀನಿನ ಸಂತತಿಯಿಂದಾಗಿ ಒಂದಷ್ಟು ನೀರಿನ ಶುಧಿ ಪ್ರಾಕೃತಿಕವಾಗಿ ಆಗುತ್ತಿದೆ ಎನ್ನುವುದು ಸಮಾಧಾನಕರ ಸಂಗತಿ. ಸುಡುವ ಬಿಸಿಲ ಬೇಗೆಯ ನಡುವೆ ಭರಪೂರ ಜಲರಾಶಿ ತುಂಬಿಕೊಂಡಿರುವ ನೇತ್ರಾವತಿಯ ಒಡಲು ಕಂಡಾಗ ಮನಸ್ಸು ತಂಪಾಗುತ್ತಿದೆ. ಈ ಬಾರಿಯ ಜೂನ್ ತಿಂಗಳಾರಂಭದವರೆಗೆ ಈ ಜಲರಾಶಿ ಜಿಲ್ಲೆಯ ಜನತೆಗೆ ಜಲಕ್ಷಾಮ ತಡೆಯುವ ಆಶಾಕಿರಣವಾಗಿಯೂ ಕಾಣಿಸುತ್ತಿದೆ.

ಬಿ.ಸಿ.ರೋಡ್: ಇಂದಿನಿಂದ ಕರಾವಳಿ ಕಲೋತ್ಸವ, ಆಹಾರ ಮೇಳ

ಆಹಾರ, ವಸ್ತು ಪ್ರದರ್ಶನ, ಪುಸ್ತಕ ಮಳಿಗೆ | ಸಾಧಕರಿಗೆ ಪ್ರಶಸ್ತಿ ಪ್ರದಾನ, ಯಕ್ಷಪ್ರದರ್ಶನ

• **ಕನ್ನಡಪ್ರಭವಾರ್ತೆ** ಬಂಟ್ವಾಳ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಹಾಗೂ ಚಿಣ್ಣರ ಲೋಕ ಮೋಕೆದ ಕಲಾವಿದೆರ್‌ಸೇವಾ ಟ್ರಸ್ಟ್ ಬಂಟ್ವಾಳ, ಚಿಣ್ಣರಲೋಕ ಸೇವಾ ಬಂಧು ಸಂಯುಕ್ತ ಆಶ್ರಯದಲ್ಲಿ ಕರಾವಳಿ ಕಲೋತ್ಸವ 2026 ಹಾಗೂ ತುಳು, ಕೊಂಕಣಿ, ಬ್ಯಾರಿ, ಅರೆಭಾಷೆ ಅಕಾಡೆಮಿ ಸಹಯೋಗದೊಂದಿಗೆ ಬಹುಸಂಸ್ಕೃತಿ ಉತ್ಸವ ಮತ್ತು ಆಹಾರ ಮೇಳ ಮೇ 4ರಿಂದ 9ವರೆಗೆ ಬಿ.ಸಿ.ರೋಡಿನ ಸ್ಪರ್ಶ ಕಲಾ ಮಂದಿರದಲ್ಲಿ ನಡೆಯಲಿದೆ ಎಂದು ಕರಾವಳಿ ಕಲೋತ್ಸವ ಅಧ್ಯಕ್ಷ ಸುದರ್ಶನ ಜೈನ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಕೀರ್ತಿಶೇಷ ಬಿ.ಎ.ಅಹ್ಮದ್ ಹಾಜಿ ಕಲಾವೇದಿಕೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ವಿಶೇಷವಾಗಿ ಆಹಾರ ಮೇಳ ಇರಲಿದೆ. ಬಂಟ್ವಾಳ ತಾಲೂಕಿನಲ್ಲಿ ಪ್ರಥಮ ಬಾರಿ ಮಹಿಳೆಯರಿಗೆ ಸೀರೆ ನಡಿಗೆ ಸ್ಪರ್ಧೆ ನಡೆಯಲಿದೆ. ಇದನ್ನು ಗೇರು ಅಭಿವೃದ್ಧಿ ನಿಗಮ ಅಧ್ಯಕ್ಷೆ ಮಮತಾ ಗಟ್ಟಿ ಉದ್ಘಾಟಿಸುವರು ಎಂದರು.

ಸ್ಥಾಪಕಾಧ್ಯಕ್ಷ ಮೋಹನದಾಸ ಕೊಟ್ಟಾರಿ ಮುನ್ನೂರು ಮಾತನಾಡಿ, 4ರಂದು ಸೋಮವಾರ ಸಂಜೆ 5 ಗಂಟೆಗೆ ಬಿ.ಸಿ.ರೋಡಿನ ಅನ್ನಪೂರ್ಣೇಶ್ವರಿ ದೇವಸ್ಥಾನದಿಂದ ಸ್ಪರ್ಶ ಕಲಾ ಮಂದಿರದವರೆಗೆ ಜಾನಪದ ದಿಬ್ಬಣ ನಡೆಯಲಿದೆ. ಅಂದು ಸಂಜೆ 7ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಆಹಾರ, ವಸ್ತು ಪ್ರದರ್ಶನ, ಪುಸ್ತಕ ಮಳಿಗೆಗಳು ಇರಲಿವೆ ಎಂದರು.



ಕರಾವಳಿ ಕಲೋತ್ಸವ ಕುರಿತು ಮಾಹಿತಿ ನೀಡುತ್ತಿರುವ ಸುದರ್ಶನ ಜೈನ್

ಆಡಳಿತ ಟ್ರಸ್ಟಿ ತೇವು ತಾರಾನಾಥ ಕೊಟ್ಟಾರಿ ಮಾತನಾಡಿ, ಕರಾವಳಿ ಸೌರಭ ರಾಜ್ಯಪ್ರಶಸ್ತಿಯನ್ನು ಸಾಮಾಜಿಕ ಕಾರ್ಯಕರ್ತ ಎಲಿಯಾಸ್ ಸ್ಯಾಕ್ಟಿಸ್ ಅವರಿಗೆ, ಉದಯ ಚೌಟ ಸಾಧನಾ ಪ್ರಶಸ್ತಿಯನ್ನು ಅಂತಾರಾಷ್ಟ್ರೀಯ ಕಬಡ್ಡಿ ಪಟು ರೋಹಿತ್ ಮಾರ್ಲ ಅವರಿಗೆ, ಚಿಣ್ಣರ ಸೌರಭ ರಾಜ್ಯ ಪ್ರಶಸ್ತಿಯನ್ನು ಸಾನ್ವಿ ಕೆ. ಅವರಿಗೆ ನೀಡಿ ಗೌರವಿಸಲಾಗುವುದು. ದತ್ತು ಸ್ವೀಕರಿಸಿದ ಶಾಲಾ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣೆ, ಸಂಸ್ಥೆಯಲ್ಲಿ ತರಬೇತು ಪಡೆಯುವ ಕಾಲೇಜು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣೆ ನಡೆಯಲಿದೆ. ಉದ್ಘಾಟನಾ ದಿನ ಚಿಣ್ಣರಲೋಕದ ಯಕ್ಷಗಾನ ಗುರು ಓಂ ಪ್ರಕಾಶ್ ರೈ ಕಲ್ಲಡ್ಕ ಅವರ ಶಿಷ್ಯವೃಂದದಿಂದ ಶ್ರೀರಾಮದರ್ಶನ ಯಕ್ಷಗಾನ ನಡೆಯಲಿದೆ ಎಂದರು.

ಮೇ 5ರಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸಹಯೋಗದೊಂದಿಗೆ ತುಳು ಸಾಹಿತ್ಯ ಸಂಭ್ರಮ ಅಧ್ಯಕ್ಷ ಬೇಬಿ ಕುಂದರ್ ಅಧ್ಯಕ್ಷತೆಯೊಂದಿಗೆ ನಡೆಯಲಿದೆ. ಈ ವೇಳೆ ತುಳುನಾಡ ಸೌಹಾರ್ದತೆ ತುಳು ಕವಿಗೋಷ್ಠಿ ಇರಲಿದೆ.

6ರಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸಹಯೋಗದೊಂದಿಗೆ ಅರೆಭಾಷೆ ಸಾಂಸ್ಕೃತಿಕ ಸಂಭ್ರಮ ಉಮೇಶ್ ಕುಮಾರ್‌ವೈ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಅಂದು ಅರೆಭಾಷೆ ಕವಿಗೋಷ್ಠಿ ನಡೆಯಲಿದೆ. 7ರಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಬ್ಯಾರಿ ಸಾಹಿತ್ಯ ಸಂಭ್ರಮನಡೆಯಲಿದ್ದು, ಅಧ್ಯಕ್ಷತೆಯನ್ನು ಅಬ್ದುಲ್ ರಝಾಕ್ ಕುಕ್ಕಾಜೆ ವಹಿಸುವರು. ಬ್ಯಾರಿ ಕವಿಗೋಷ್ಠಿ, ದಫ್, ರಸಮಂಜರಿ ಅಂದು ಇರಲಿದೆ. 8ರಂದು ಕೊಂಕಣಿ ಸಾಹಿತ್ಯ ಸಂಭ್ರಮ ಪಿಯೂಸ್ ಎಲ್ ರೋಡ್ರಿಗಸ್ ಅಧ್ಯಕ್ಷತೆಯಲ್ಲಿ ನಡೆಯಲಿದೆ. 9ರಂದು ತೀರ್ಥಪ್ರಸಾದ್ ಅನಂತಾಡಿ ಸ್ಮರಣಾರ್ಥ ಕರಾವಳಿ ಸರಿಗಮಪ ರಾಜ್ಯಮಟ್ಟದ ಸಂಗೀತ ಸ್ಪರ್ಧೆ ನಡೆಯಲಿದೆ. ಸಂಜೆ ಸಮಾರೋಪ ನಡೆಯುವುದು ಎಂದವರು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ, ಹಿರಿಯ ನ್ಯಾಯವಾದಿ ಪಿ.ಜಯರಾಮ ರೈ ತುಳು ಸಾಹಿತ್ಯ ಸಂಭ್ರಮ ಅಧ್ಯಕ್ಷ ಬೇಬಿ ಕುಂದರ್, ಬ್ಯಾರಿ ಸಾಹಿತ್ಯ ಸಂಭ್ರಮ ಅಧ್ಯಕ್ಷ ಅಬ್ದುಲ್ ರಝಾಕ್ ಕುಕ್ಕಾಜೆ, ಕಾರ್ಯದರ್ಶಿ ಲತೀಫ್ ನೇರಳಕಟ್ಟೆ, ಗೌರವ ಸಲಹೆಗಾರ ರಾಮಕೃಷ್ಣರಾವ್ ಉಪಸ್ಥಿತರಿದ್ದರು.

> ▪ 6ರಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಸಹಯೋಗದೊಂದಿಗೆ ಅರೆಭಾಷೆ ಸಾಂಸ್ಕೃತಿಕ ಸಂಭ್ರಮ ಉಮೇಶ್ ಕುಮಾರ್‌ವೈ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಅಂದು ಅರೆಭಾಷೆ ಕವಿಗೋಷ್ಠಿ ನಡೆಯಲಿದೆ. 7ರಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಬ್ಯಾರಿ ಸಾಹಿತ್ಯ ಸಂಭ್ರಮ ನಡೆಯಲಿದ್ದು, ಅಧ್ಯಕ್ಷತೆ ಅಬ್ದುಲ್ ರಝಾಕ್ ಕುಕ್ಕಾಜೆ ವಹಿಸುವರು.

ಗ್ರಾ.ಪಂ.ಸದಸ್ಯ ಸ್ಥಾನಗಳ ನಿಗದಿ: ಆಕ್ಷೇಪಣೆ ವಿಸ್ತರಣೆ

ಮಂಗಳೂರು: ಕರ್ನಾಟಕ ರಾಜ್ಯದ ಗ್ರಾಮ ಪಂಚಾಯತ್‌ಗಳ ಚುನಾಯಿತ ಸದಸ್ಯ ಸ್ಥಾನಗಳನ್ನು ಪ್ರಕರಣ 5(1) ರಂತೆ ನಿಗದಿಪಡಿಸಿ ಏ.18 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಹೊರಡಿಸಲಾದ ಕರಡು ಪ್ರಕಟಣೆಗೆ ಸಾರ್ವಜನಿಕರು ಆಕ್ಷೇಪಣೆಯನ್ನು ಸಲ್ಲಿಸುವ ಅವಧಿಯನ್ನು ಮೇ 2ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ. ಈಗಾಗಲೇ ಸ್ವೀಕರಿಸಿದ ಆಕ್ಷೇಪಣೆ/ ಅಹವಾಲುಗಳ ಬಗ್ಗೆ ನಿಗದಿಪಡಿಸಿದ ಏ.27ರ ಪರಿಶೀಲನಾ ಅದಾಲತನ್ನು ಮುಂದೂಡಲಾಗಿದೆ.

ಪರಿಶೀಲನಾ ಅದಾಲತ್‌ನ ವೇಳಾಪಟ್ಟಿ: ಮೇ 5 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30 ರವರೆಗೆ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಬೆಳಗಾವಿ, ಧಾರವಾಡ, ಬಾಗಲಕೋಟೆ, ಗದಗ, ವಿಜಯಪುರ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆ ಭಾಗವಹಿಸಬಹುದು. ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆಯವರೆಗೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ದಕ್ಷಿಣ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಡ್ಯ, ಹಾಸನ, ಕೊಡಗು, ಚಿಕ್ಕಮಗಳೂರು, ಚಾಮರಾಜನಗರ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಭಾಗವಹಿಸಬಹುದು.

> ▪ ಮೇ 5 ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30 ರವರೆಗೆ ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಕೊಪ್ಪಳ, ಬಳ್ಳಾರಿ, ವಿಜಯನಗರ, ಬೆಳಗಾವಿ, ಧಾರವಾಡ, ಬಾಗಲಕೋಟೆ, ಗದಗ, ವಿಜಯಪುರ, ಹಾವೇರಿ ಮತ್ತು ಉತ್ತರಕನ್ನಡ ಜಿಲ್ಲೆ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅದಾಲತ್ ಬೆಂಗಳೂರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 2 ನೇ ಮಹಡಿಯಲ್ಲಿ ನಡೆಯಲಿದೆ. ಆಕ್ಷೇಪಣೆ ಮತ್ತು ಅಹವಾಲುಗಳನ್ನು ಸಲ್ಲಿಸಿದವರು ಅದಾಲತ್‌ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ತಮ್ಮ ಆಧಾರ್‌ಅಥವಾ ಗುರುತಿನ ಚೀಟಿ ಅಥವಾ ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಯಾವುದೇ ಗುರುತಿನ ಚೀಟಿಯ ಪ್ರತಿಯನ್ನು ಕಡ್ಡಾಯವಾಗಿ ತರಬೇಕು ಎಂದು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ಸದಸ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಡುಬಿದಿರೆ ಕೆಸರ್‌ಗದ್ದೆ: ಆರೋಗ್ಯ ತಪಾಸಣಾ ಉಚಿತ ಶಿಬಿರ

ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜು ಸಹಯೋಗ | ಯೋಗ, ಪ್ರಕೃತಿ ಚಿಕಿತ್ಸೆ ಮಹತ್ವ ವಿವರಣೆ

• **ಕನ್ನಡಪ್ರಭ ವಾರ್ತೆ** ಮೂಡುಬಿದಿರೆ

ಇಲ್ಲಿನ ಕೆಸರ್‌ಗದ್ದೆಯ ಸುನಂದಾ ಮಾಧವ ಪ್ರಭು ಸಭಾ ಭವನದಲ್ಲಿ ಶ್ರೀ ರಾಮ ಭಜನಾ ಮಂದಿರ ಕೆಸರುಗದ್ದೆ, ಮಿಜಾರು ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜು ಮತ್ತು ಆಳ್ವಾಸ್ ಆನಂದಮಯ ಆರೋಗ್ಯಧಾಮ ಸಹಭಾಗಿತ್ವದಲ್ಲಿ ಉಚಿತ ಆರೋಗ್ಯ ಶಿಬಿರ ಭಾನುವಾರ ನಡೆಯಿತು.

ಮೂಡುಬಿದಿರೆ ಶ್ರೀ ವೆಂಕಟರಮಣ ಮತ್ತು ಶ್ರೀ ಹನುಮಂತ ದೇವಸ್ಥಾನದ ಮೊಕ್ತೇಸರ ಎಂ ದಯಾನಂದ ಪೈ ಉದ್ಘಾಟಿಸಿದರು.

ಮೂಡುಬಿದಿರೆ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರ ರಘುವೀರ ಶೆಣೈ ಅಧ್ಯಕ್ಷತೆ ವಹಿಸಿದ್ದರು. ಶ್ರೀರಾಮ ಭಜನಾ ಮಂಡಳಿಯ ಅಧ್ಯಕ್ಷ ರಾಜೇಶ್ ಕಾಮತ್, ಮೂಡುಬಿದಿರೆಯ ವಾಸ್ತು ತಜ್ಞ ಎಂ ರಾಘವೇಂದ್ರ ಭಂಡಾರ್ಕರ್‌ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾಲೇಜಿನ ವೈದ್ಯೆ ಅಸೋಸಿಯೇಟ್ ಪ್ರೊಫೆಸರ್‌ಮತ್ತು ಮೆಡಿಕಲ್ ಆಫೀಸರ್ ಡಾ ಸ್ವಾತಿ ಕೆ.ವಿ. ಹಾಜರಿದ್ದರು.



ಕೆಸರ್‌ಗದ್ದೆಯಲ್ಲಿ ಉಚಿತ ಆರೋಗ್ಯ ಶಿಬಿರ ಭಾನುವಾರ ನಡೆಯಿತು.

ಸ್ಥಳೀಯ ಪ್ರತಿಭೆ ಡಾ.ಶ್ರೀನಿವಾಸ ಶೆಣೈ ಮಾತನಾಡಿ, ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಚಿಕಿತ್ಸೆಯಲ್ಲಿನ ರೋಗ ನಿರೋಧಕ ಶಕ್ತಿ ಹಾಗೂ ಈ ಚಿಕಿತ್ಸೆ ಮೂಲಕ ಯಾವುದೇ ಕಾಯಿಲೆಯನ್ನು ಹತೋಟಿಯಲ್ಲಿಡುವುದರ ಜೊತೆಗೆ ಸಂಪೂರ್ಣವಾಗಿ ಗುಣಪಡಿಸುವ ಶಕ್ತಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯಲ್ಲಿದೆ ಎಂದರು.

> ▪ ಡಾ.ಶ್ರೀನಿವಾಸ ಶೆಣೈ ರೋಗನಿರೋಧಕ ಶಕ್ತಿಯಲ್ಲಿ ಯೋಗ ಚಿಕಿತ್ಸೆ ಮಹತ್ವ ವಿವರಿಸಿದರು

ವೈದ್ಯಕೀಯ ವಿದ್ಯಾರ್ಥಿನಿ ಭೂಮಿಕಾ ಟಿ ಮನೆಕೋಟಿ ಸ್ವಾಗತಿಸಿದರು. ಗಣ್ಯರಾದ ಕೃಷ್ಣ ಶೆಣೈ , ನಿರ್ಮಲಾ ಆರ್‌ಕಾಮತ್ ವಿವೇಕ ಪ್ರಭು, ವಿಠ್ಠಲ ಪ್ರಭು, ನಿತಿನ್ ಕಾಮತ್, ಪ್ರದ್ಯೋತ್ ಪ್ರಭು, ಸುಕುಮಾರ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಸುನಂದಾ ಮಾಧವ ಪ್ರಭು ಸಭಾಭವನದ ಮಾಲಕರಾದ ವಿಶ್ವನಾಥ ಪ್ರಭು ಸಭಾಭವನ ಉಚಿತವಾಗಿ ನೀಡಿ ಸಹಕರಿಸಿದರು.

ಶಿರ್ಲಾಲು-ಸುಲ್ಕೇರಿ: 7 ಎಕರೆ ಅರಣ್ಯಪ್ರದೇಶದಲ್ಲಿ ಬೆಂಕಿ

ಕಾರ್ಕಳ: ಪಶ್ಚಿಮಘಟ್ಟಗಳ ಸಾಲಿನ ಕುದುರೆಮುಖ ವನ್ಯಜೀವಿ ವಿಭಾಗದ ಕುದುರೆಮುಖ ಘಟ್ಟ ತಪ್ಪಲಿನ ಅಳದಂಗಡಿ ಭಾಗದ ಶಿರ್ಲಾಲು-ಸುಲ್ಕೆರಿ ವ್ಯಾಪ್ತಿಯಲ್ಲಿ ಶನಿವಾರ ಸಂಜೆ ವೇಳೆಗೆ ಕಾಡ್ಗಿಚ್ಚು ಕಾಣಿಸಿಕೊಂಡಿತ್ತು. ಬೆಂಕಿ ಸುಮಾರು 7 ಎಕರೆ ಪ್ರದೇಶಕ್ಕೆ ವ್ಯಾಪಿಸಿದ್ದು. ಅರಣ್ಯ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

> ▪ ಸುಮಾರು 7 ಎಕರೆ ಹುಲ್ಲುಗಾವಲು ಪ್ರದೇಶದಲ್ಲಿ ಕಾಡ್ಗಿಚ್ಚು ಹಬ್ಬಿದೆ.

ಈ ಬಗ್ಗೆ ಕುದುರೆಮುಖ ವನ್ಯಜೀವಿ ವಿಭಾಗದ ಬೆಳ್ತಂಗಡಿ ವಲಯದ ವಲಯ ಅರಣ್ಯಾಧಿಕಾರಿ ಶರ್ಮಿಷ್ಠಾ ಅವರು ಮಾಹಿತಿ ನೀಡಿದ್ದು, ಸುಮಾರು 7 ಎಕರೆ ಹುಲ್ಲುಗಾವಲು ಪ್ರದೇಶದಲ್ಲಿ ಕಾಡ್ಗಿಚ್ಚು ಹಬ್ಬಿದ್ದು, ವಜ್ರಾಲು ಬೆಟ್ಟದ ಭಾಗದಲ್ಲಿಯೂ ವ್ಯಾಪಿಸಿತ್ತು ಎಂದರು. ಇದೇ ವೇಳೆ, ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ಹತೋಟಿಗೆ ತರಲು ಶ್ರಮಿಸಿದ್ದಾರೆ ಎಂದು ತಿಳಿಸಿದ್ದಾರೆ.

ಸಮಾವೇಶ ವರ್ಟೆಕ್ಸ್ ಸಿಎಕ್ಸ್‌ಒ ಕಾನ್‌ಕ್ಲೇವ್– 2026

ಉದ್ಯಮ-ತಂತ್ರಜ್ಞಾನ ಬೆಳವಣಿಗೆಯ ಕೇಂದ್ರವಾಗಿ ಮಂಗಳೂರು

• **ಕನ್ನಡಪ್ರಭವಾರ್ತೆ** ಮಂಗಳೂರು

ಉದ್ಯಮ ಮತ್ತು ತಂತ್ರಜ್ಞಾನ ಆಧಾರಿತ ಬೆಳವಣಿಗೆಯ ಪ್ರಮುಖ ಕೇಂದ್ರವಾಗಿ ಮಂಗಳೂರು ಹೊರಹೊಮ್ಮುತ್ತಿದೆ ಎಂದು 'ವರ್ಟೆಕ್ಸ್ ಸಿಎಕ್ಸ್‌ಒ ಕಾನ್‌ಕ್ಲೇವ್- 2026' ಸಮಾವೇಶದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಡಾ. ಟಿಎಂಎ ಪೈ ಇಂಟರ್ ನ್ಯಾಷನಲ್ ಕನ್ವೆನ್ಷನ್ ಸೆಂಟರ್‌ನಲ್ಲಿ ವರ್ಟೆಕ್ಸ್ ವರ್ಕ್‌ಸ್ಪೇಸ್ ಆಯೋಜಿಸಿದ್ದ ಸಮಾವೇಶದಲ್ಲಿ ಉದ್ಯಮ ವಲಯದ ನಾಯಕರು, ಜನಪ್ರತಿನಿಧಿಗಳು, ಹಿರಿಯ ಅಧಿಕಾರಿಗಳು ಮತ್ತು ಸಂಸ್ಥೆಯ ಉನ್ನತ ಮಟ್ಟದ ನಿರ್ವಹಣಾಧಿಕಾರಿಗಳು ಭಾಗವಹಿಸಿ, ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ ವ್ಯವಹಾರ ವಿಸ್ತರಣೆಯ ಅವಕಾಶಗಳ ಕುರಿತು ಚರ್ಚಿಸಿದರು. ಮಂಗಳೂರನ್ನು ಕೈಗಾರಿಕೆ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಬೆಳೆಯುವ ಕೇಂದ್ರವನ್ನಾಗಿ ರೂಪಿಸುವ ಕುರಿತು ಚಿಂತನೆ ನಡೆಯಿತು.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಹಾಗೂ ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ ಸಂಸ್ಥೆಗಳ ಹಿರಿಯ ಅಧಿಕಾರಿಗಳು ಹೊರಗಿನ ಪ್ರದೇಶಗಳಲ್ಲಿ ಹೂಡಿಕೆ ಹೆಚ್ಚಿಸಲು ರೂಪಿಸಿದ ನೀತಿಗಳನ್ನು ವಿವರಿಸಿದರು. ಕಿಟ್ಸ್‌ನ ವ್ಯವಸ್ಥಾಪಕ ನಿರ್ದೇಶಕ ರಾಹುಲ್ ಶರಣಪ್ಪ ಸಂಕನೂರ್, ಕೆಡಿಇಎಂನ ಸಮೀರ್‌ವೇಣುಗೋಪಾಲ್, ಭರತ್ ಚಂದ್ರ ಬಿ.ಕೆ. ಮತ್ತು ವೈಶಾಕ್ ಪೈ ಅವರು, ಕಂಪನಿಗಳು ದೊಡ್ಡ ನಗರಗಳ ಹೊರಗೂ ವಿಸ್ತರಿಸಲು ಮೂಲಸೌಕರ್ಯ, ಪ್ರತಿಭೆ ಮತ್ತು ನಿಯಮಾತ್ಮಕ ಸೌಲಭ್ಯಗಳಿಗೆ ನೀಡುವ ಪ್ರೋತ್ಸಾಹಗಳನ್ನು ವಿವರಿಸಿದರು.



ವರ್ಟೆಕ್ಸ್ ಸಿಎಕ್ಸ್‌ಒ ಕಾನ್‌ಕ್ಲೇವ್-2026 ಸಮಾರೋಪ

ವರ್ಟೆಕ್ಸ್ ವರ್ಕ್‌ಸ್ಪೇಸ್‌ನ ಮುಖ್ಯ ಮಾರ್ಕೆಟಿಂಗ್ ಅಧಿಕಾರಿ ವಿನಾಯಕ್ ಪಲನಕರ್‌ಮಾತನಾಡಿ, ಸಂಸ್ಥೆ ಕೇವಲ ಕಾರ್ಯಸ್ಥಳ ಒದಗಿಸುವುದಲ್ಲ, ವ್ಯವಹಾರ ಬೆಳವಣಿಗೆಗೆ ಸಹಾಯ ಮಾಡುವತ್ತ ಕೆಲಸ ಮಾಡುತ್ತಿದೆ. ಕಂಪನಿಗಳಿಗೆ ನೇಮಕಾತಿ ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡುತ್ತದೆ ಎಂದರು. ಸಮಾವೇಶದಲ್ಲಿ ಸಂಪನ್ಮೂಲ ವ್ಯಕ್ತಿಗಳು ಮಂಗಳೂರಿನ ಶೈಕ್ಷಣಿಕ ಹಿನ್ನೆಲೆ, ಸುಧಾರಿಸುತ್ತಿರುವ ಮೂಲಸೌಕರ್ಯ ಮತ್ತು ಐಟಿ ಸಂಸ್ಥೆಗಳ ವಿಸ್ತರಣೆ ಉಲ್ಲೇಖಿಸಿದರು. ಜೊತೆಗೆ ಪ್ರತಿಭೆ ಉಳಿಸಿಕೊಳ್ಳುವುದು, ಉದ್ಯಮ ಸಹಯೋಗ ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಎಂದರು. ಎಕ್ಸ್‌ಫೆನೊ ಸಹ-ಸಂಸ್ಥಾಪಕ ಕಮಲ್ ಕಾರಂತ್ ಮಾತನಾಡಿ, ಮಂಗಳೂರು-ಉಡುಪಿ ಪ್ರದೇಶದಲ್ಲಿ ಹೊಸ ಮತ್ತು ಅನುಭವಿ ಉದ್ಯೋಗಿಗಳು ಸಾಕಷ್ಟಿದ್ದರೂ, ಹಿರಿಯ ವೃತ್ತಿಪರರ ಕೊರತೆ ಇದೆ. ಉದ್ಯೋಗಿಗಳು ದೊಡ್ಡ ನಗರಗಳಿಗೆ ಹೋಗುವುದನ್ನು ತಡೆಯಲು ಉತ್ತಮ ನೇಮಕಾತಿ ವ್ಯವಸ್ಥೆ ಮತ್ತು ಸ್ಥಳೀಯ ಸೌಲಭ್ಯಗಳನ್ನು ಬಲಪಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

> ▪ ಕಾರ್ಯಕ್ರಮದಲ್ಲಿ ಉದ್ಯಮ ಹಾಗೂ ಜಾಗತಿಕ ಸಾಮರ್ಥ್ಯ ಕೇಂದ್ರಗಳ ಕಾರ್ಯಾಚರಣೆಗೆ ಬೆಂಬಲ ನೀಡುವ ಉದ್ದೇಶದಿಂದ ರೂಪಿಸಲಾದ ವರ್ಟೆಕ್ಸ್ ಅಶೋಕ ಎಂಬ ಮೂಲಸೌಕರ್ಯ ಯೋಜನೆಯನ್ನು ಪರಿಚಯಿಸಲಾಯಿತು.

ಸರ್ಕಾರದ ಸೌಲಭ್ಯಗಳ ಬಗ್ಗೆ ಅರಿವು ಇದ್ದರೂ, ಅವನ್ನು ಪಡೆಯುವ ಪ್ರಕ್ರಿಯೆ ಸ್ಪಷ್ಟವಾಗಿಲ್ಲ. ಕಂಪನಿಗಳಿಗೆ ಈ ಸೌಲಭ್ಯಗಳು ಮತ್ತು ಉದ್ಯೋಗಿಗಳ ಸಂಪರ್ಕದಲ್ಲಿ ಸಹಾಯ ಮಾಡುವುದಾಗಿ ವರ್ಟೆಕ್ಸ್ ವರ್ಕ್‌ಸ್ಪೇಸ್ ತಿಳಿಸಿದೆ. ಸಹಕಾರವನ್ನು ಹೆಚ್ಚಿಸಲು ಸಂಸ್ಥೆಗಳ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಸಮಾರೋಪದಲ್ಲಿ ವರ್ಟೆಕ್ಸ್ ವರ್ಕ್‌ಸ್ಪೇಸ್‌ನ ವ್ಯವಸ್ಥಾಪಕ ಪಾಲುದಾರ ಗುರುದತ್ತ ಶೆಣೈ, ಈ ಕಾರ್ಯಕ್ರಮ ಸಮಾವೇಶಕ್ಕೆ ಮಾತ್ರ ಸೀಮಿತವಾಗದೆ ಮುಂದುವರಿಯಲಿದೆ. ಮುಂದಿನ ದಿನಗಳಲ್ಲಿ ನಾಯಕತ್ವ ಕಾರ್ಯಕ್ರಮ, ಉದ್ಯೋಗ ಮೇಳ, ಉದ್ಯಮಗಳಿಗೆ ಬೆಂಬಲ ನೀಡುವ ಯೋಜನೆಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

ಎಂಆರ್‌ಪಿಎಲ್‌ಗೆ ಕೇಂದ್ರ 'ಸ್ವಚ್ಛತಾ ಪಕ್ವಾಡ' ಪ್ರಶಸ್ತಿ

ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ವತಿಯಿಂದ ಮನ್ನಣೆ



• **ಕನ್ನಡಪ್ರಭ ವಾರ್ತೆ ಮಂಗಳೂರು**

ಎಂಆರ್‌ಪಿಎಲ್ ಸಂಸ್ಥೆಗೆ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ವತಿಯಿಂದ 'ಸ್ವಚ್ಛತಾ ಪಕ್ವಾಡ' ಪ್ರಶಸ್ತಿಗಳು ಲಭಿಸಿವೆ.

2023 ಮತ್ತು 2024ನೇ ಸಾಲಿನ ಸ್ವಚ್ಛತಾ ಪಕ್ವಾಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಂಆರ್‌ಪಿಎಲ್ 2023ರಲ್ಲಿ 'ಕ್ಯಾಟಗರಿ' ವಿಭಾಗದಲ್ಲಿ ದ್ವಿತೀಯ ಬಹುಮಾನ ಪಡೆದಿದ್ದರೆ, 2024ರಲ್ಲಿ ಸಮಾಧಾನಕರ ಬಹುಮಾನ ಗಳಿಸಿದೆ. ಸಂಸ್ಥೆಯ ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳಿಗೆ ಸಚಿವಾಲಯ ಮೆಚ್ಚುಗೆ ವ್ಯಕ್ತಪಡಿಸಿದೆ. 2022ರಲ್ಲಿ ಎಂಆರ್‌ಪಿಎಲ್ ನಾಲ್ಕನೇ ಬಹುಮಾನವನ್ನು ಪಡೆದಿತ್ತು.

2026 ಏಪ್ರಿಲ್ 28ರಂದು ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಎಂಆರ್‌ಪಿಎಲ್ ಪರವಾಗಿ ಚಂದರ್‌ಮಣಿ (ಜಿಜಿಎಂ), ಪ್ಯಾಟ್ರಿಕ್ ರಾಜೇಶ್ ಮಿನ್ಜ್ (ಜಿಎಂಎಚ್‌ಆರ್) ಹಾಗೂ ಎ.ಕೆ. ಮಿಶ್ರಾ, (ಸೀನಿಯರ್‌ಮೆನೇಜರ್) ಅವರು ಪ್ರಶಸ್ತಿ ಸ್ವೀಕರಿಸಿದರು. ಪ್ರತಿ ವರ್ಷ ಜುಲೈ 1ರಿಂದ 15ರವರೆಗೆ ನಡೆಯುವ 'ಸ್ವಚ್ಛತಾ ಪಕ್ವಾಡ' ಅಭಿಯಾನ ನಡೆಸುತ್ತಿದೆ.

ಸುದ್ದಿ ಸಿಂಚನ

ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ



ಮಂಗಳೂರು: ರೋಟರಿ ಕ್ಲಬ್ ಪುತ್ತೂರು, ಕಣ್ಣಿನ ಆಸ್ಪತ್ರೆ ನಿರ್ವಹಣೆ ಪ್ರಸಾದ್ ನೇತ್ರಾಲಯ, ಪ್ರಸಾದ್ ನೇತ್ರಾಲಯ ಸೂಪರ್‌ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ ಮಂಗಳೂರು, ONE SIGHT ESSILOR LUXOTTICA FOUNDATION ನೇತೃತ್ವದಲ್ಲಿ ಪುತ್ತೂರಿನ ಸ್ನೇಹ ಸಂಗಮ ಆಟೋ ಚಾಲಕ ಮಾಲಕರ ಸಂಘ, ಬಿಎಂಎಸ್ ಹಾಗೂ ಇತರ ಸಂಘಟನೆಗಳ ಚಾಲಕರು ಹಾಗೂ ಅವರ ಕುಟುಂಬದವರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆದಿದ್ದು, ಅಲ್ಲಿ 96 ಮಂದಿ ಕನ್ನಡಕ ಪಡೆಯಲು ಆಯ್ಕೆಯಾಗಿದ್ದು ಅವರಿಗೆ ಕನ್ನಡಕ ವಿತರಿಸಲಾಯಿತು. ಶನಿವಾರ ಕ್ಲಬ್ ಪುತ್ತೂರು ಕಣ್ಣಿನ ಆಸ್ಪತ್ರೆ ನಿರ್ವಹಣೆ ಪ್ರಸಾದ್ ನೇತ್ರಾಲಯ ಪುತ್ತೂರಿನಲ್ಲಿ 'ಉಚಿತ ಕನ್ನಡಕ ವಿತರಣಾ ಕಾರ್ಯಕ್ರಮ' ನಡೆಯಿತು. ಕನ್ನಡಕವನ್ನು ಪ್ರಸಾದ ನೇತ್ರಾಲಯದ ಹಿರಿಯ ನೇತ್ರ ತಜ್ಞ ಡಾ. ವಿಷ್ಣು ಪೂಜಾ ಅವರ ನೇತೃತ್ವದಲ್ಲಿ ಸ್ನೇಹ ಸಂಗಮ ಆಟೋ ಚಾಲಕ ಮಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಹರೀಶ್ ಕುಮಾರ್‌ತೆಂಕಿಲ ವಿತರಿಸಿದರು. ಪ್ರಸಾದ್ ನೇತ್ರಾಲಯ ಮ್ಯಾನೇಜರ್ ಮತ್ತು ಸಾರ್ವಜನಿಕ ಸಂಪರ್ಕಧಿಕಾರಿ ಮನೋಹರ್ ಮತ್ತಿತರರು ಇದ್ದರು.

ದಕ್ಷಿಣ ಕನ್ನಡ ಅಂಗನವಾಡಿ ಕಾರ್ಯಕರ್ತೆ-ಸಹಾಯಕಿ ಹುದ್ದೆಗೆ ಅರ್ಜಿ ಆಹ್ವಾನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿ ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಕಾರ್ಯಕರ್ತೆಯರ ಮಾಸಿಕ ಗೌರವಧನ 5,500 ರು. ಹಾಗೂ ಸಹಾಯಕಿಯರ ಮಾಸಿಕ ಗೌರವಧನ 3,000 ಆಗಿರುತ್ತದೆ. ಅರ್ಜಿ ಸಲ್ಲಿಸಲು ಮೇ 16 ಕೊನೆಯ ದಿನ. ಸೂಕ್ತ ದಾಖಲೆಗಳೊಂದಿಗೆ ಅದೇ ಅಂಗನವಾಡಿ ಸರ್ವೆ ವ್ಯಾಪ್ತಿಯ 18 ರಿಂದ 35 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರನ್ನು ಪರಿಗಣಿಸಲಾಗುತ್ತದೆ.

ಸಹಾಯಕಿ ಹುದ್ದೆಗೆ ಕರ್ನಾಟಕ ರಾಜ್ಯದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ 7ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರನ್ನು ಪರಿಗಣಿಸಲಾಗುತ್ತದೆ. ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸುವುದಿಲ್ಲ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಆಯಾ ವ್ಯಾಪ್ತಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಮಂಗಳೂರು ನಗರ: 0824-2959809, ಮಂಗಳೂರು ಗ್ರಾಮಾಂತರ :9620636888, 7760729919, ವಿಟ್ಲ: 08255-238080, ಬೆಳ್ತಂಗಡಿ: 08256-295134, ಸುಳ್ಯ: 08257-298139 ಯನ್ನು ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಎಎಸ್ ಅಧಿಕಾರಿ ಮುಹಮ್ಮದ್ ನಿವೃತ್ತಿ

ಮಂಗಳೂರು: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿಶೇಷ ಭೂಸ್ವಾಧೀನಾಧಿಕಾರಿ ಕೆ.ಎ.ಎಸ್. ಅಧಿಕಾರಿ ಮುಹಮ್ಮದ್ ಇಸಾಕ್ ಏ.30ರಂದು ಸರಕಾರಿ ಸೇವೆಯಿಂದ ನಿವೃತ್ತರಾದರು. ನಿವೃತ್ತಿ ಪ್ರಯುಕ್ತ ಗುರುವಾರ ನಗರದ ಮಿನಿ ವಿಧಾನಸೌಧ ಆವರಣದಲ್ಲಿರುವ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿಯಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ಅಧಿಕಾರಿಗಳು, ಕಚೇರಿ ಸಿಬ್ಬಂದಿ ಹಾಗೂ ನಿವೃತ್ತ ಅಧಿಕಾರಿಗಳು ಉಪಸ್ಥಿತರಿದ್ದು, ಶುಭ ಹಾರೈಸಿದರು.

ಸಂವಹನದಿಂದಲೇ ಕನ್ನಡ ಉಳಿವು: ಭಾಸ್ಕರಾನಂದ ಕುಮಾರ್

ಉಡುಪಿ ತಾಲೂಕು 16ನೇ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ 'ಭೀಷ್ಮೋತ್ಸವ' | ಸಮ್ಮೇಳನಕ್ಕೂ ಮುನ್ನ ಭವ್ಯ ಮೆರವಣಿಗೆ

• **ಕನ್ನಡಪ್ರಭ ವಾರ್ತೆ** ಉಡುಪಿ

ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಇರುವ ಏಕೈಕ ಮತ್ತು ಅತ್ಯಂತ ಸರಳ ಮಾರ್ಗವೆಂದರೆ ನಮ್ಮ ನಿತ್ಯದ ಸಂವಹನದಲ್ಲಿ ಅದನ್ನು ಬಳಸುವುದು ಎಂದು ಖ್ಯಾತ ವೈದ್ಯ, ಸಂಘಟಕ ಡಾ. ಭಾಸ್ಕರಾನಂದ ಕುಮಾರ್ ಹೇಳಿದರು.

ಭಾನುವಾರ ಉಡುಪಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಇಲ್ಲಿನ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ಉಡುಪಿ ತಾಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನ ''ಭೀಷ್ಮೋತ್ಸವ''ದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕರಾವಳಿ ಭಾಗದಲ್ಲಿ ಕನ್ನಡ ಭಾಷೆ ಬೆಳೆಯಲು ಯಕ್ಷಗಾನವೇ ಪ್ರಮುಖ ಕಾರಣ. ಈ ಮಣ್ಣಿನ ಜನರಿಗೆ ರಾಮಾಯಣ, ಮಹಾಭಾರತದಂತಹ ಪುರಾಣ ಕಥೆಗಳು ಹಾಗೂ ಶುದ್ಧ ಕನ್ನಡದ ಪರಿಚಯವಾಗಿದ್ದು ಯಕ್ಷಗಾನದಿಂದ. ಪಠ್ಯಪುಸ್ತಕದ ಕನ್ನಡ ಮತ್ತು ಆಡುಭಾಷೆಯ ನಡುವಿನ ಸೇತುವೆಯಾಗಿ ಯಕ್ಷಗಾನ ಅಪೂರ್ವ ಕೊಡುಗೆ ನೀಡಿದೆ ಎಂದರು.

ಉದ್ಯೋಗಕ್ಕಾಗಿ ಹೊರ ಜಿಲ್ಲೆಗಳಿಂದ ಬಂದವರ ಜೊತೆನಾವು ಅವರ ಭಾಷೆಯಲ್ಲಿ ಮಾತನಾಡುವುದನ್ನು ಬಿಡಬೇಕು. ನಾವು ಅವರೊಂದಿಗೆ ಕನ್ನಡದಲ್ಲೇ ವ್ಯವಹರಿಸಿದಾಗ ಮಾತ್ರ ಅವರಿಗೆ ಕನ್ನಡ ಕಲಿಯುವುದು ಅನಿವಾರ್ಯವಾಗುತ್ತದೆ. ಆಗ ಸ್ಥಳೀಯ ಸಾಹಿತ್ಯವೂ ವೃದ್ಧಿಯಾಗುತ್ತದೆ ಎಂದು ಸಲಹೆ ನೀಡಿದರು.



ಉಡುಪಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಡಾ. ಮೋಹನ್ ಆಳ್ವಾ ಉದ್ಘಾಟಿಸಿದರು.

ಯುವಕರನ್ನು ಸಾಹಿತ್ಯದತ್ತ ಸೆಳೆಯಲು ಮಕ್ಕಳ ಸಮ್ಮೇಳನ ಹಾಗೂ ಸಾಹಿತ್ಯ ಸ್ಪರ್ಧೆಗಳನ್ನು ನಿರಂತರ ನಡೆಸುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಸಮ್ಮೇಳನವನ್ನು ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಡಾ. ಎಂ. ಮೋಹನ್ ಆಳ್ವ ಉದ್ಘಾಟಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಪುಸ್ತಕಗಳನ್ನು ಬಿಡುಗಡೆಗೊಳಿಸಿದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಪ್ರೊ.ಎಂ.ಎಲ್. ಸಾಮಗ ಶುಭ ನುಡಿಗಳನ್ನಾಡಿದರು. ಉಡುಪಿ ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ಸ್ಥಾಪಕ ಉಡುಪಿ ವಿಶ್ವನಾಥ ಶೆಣೈ, ಜಿಲ್ಲಾ ಪಪೂ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ, ಕರ್ಣಾಟಕ ಬ್ಯಾಂಕಿನ ರಮೇಶ್ ವೈದ್ಯ ಅತಿಥಿಗಳಾಗಿ ಆಗಮಿಸಿದ್ದರು.

ಸಮ್ಮೇಳನದ ಅಂಗವಾಗಿ ವಿವಿಧ ಕ್ಷೇತ್ರಗಳ ಸಾಧಕರಾದ ತಿಲಕನಾಥ್ ಮಂಜೇಶ್ವರ, ಗೋಪಾಲ್ ಭಟ್ ಎಂ., ವಿಮಲಾ ಚಂದ್ರಶೇಖರ್, ಮರವಂತೆ ನಾಗರಾಜ್ ಹೆಬ್ಬಾರ್, ಲಕ್ಷ್ಮಿ ಹರಿಶ್ಚಂದ್ರ, ವಿಶ್ವೇಶ್ವರ ಅಡಿಗ, ಪಿ.ಎಂ. ವೇಣು ಗೋಪಾಲ್ ಹೆಬ್ಬಾರ್‌ಮತ್ತು ವಿದ್ಯಾಲತಾ ಯು.ಶೆಟ್ಟಿ ಅವರಿಗೆ ಕಸಾಪ ಉಡುಪಿ ತಾಲೂಕು ಗೌರವ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ಕಸಾಪ ಉಡುಪಿ ತಾಲೂಕು ಅಧ್ಯಕ್ಷ ರವಿರಾಜ್ ಎಚ್.ಪಿ., ಗೌರವ ಕಾರ್ಯದರ್ಶಿ ರಂಜಿನಿ ವಸಂತ್, ಗೌರವ ಕೋಶಾಧ್ಯಕ್ಷ ರಾಜೇಶ್ ಭಟ್ ಪಣಿಯಾಡಿ, ಸಲಹೆಗಾರ ಭುವನಪ್ರಸಾದ್ ಹೆಗ್ಡೆ ಉಪಸ್ಥಿತರಿದ್ದರು.

ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಸತೀಶ್ ಕೊಡವೂರು ಸ್ವಾಗತಿಸಿ, ತಾಲೂಕು ಗೌರವ ಕಾರ್ಯದರ್ಶಿ ಜನಾರ್ದನ ಕೊಡವೂರು ವಂದಿಸಿದರು. ಪೂರ್ಣಿಮಾ ಜನಾರ್ದನ ನಿರೂಪಿಸಿದರು.

ಸಮ್ಮೇಳನಕ್ಕೂ ಮುನ್ನ ಕುಂಜಿಬೆಟ್ಟು ಶಾರದಾ ಕಲ್ಯಾಣಮಂಟಪದಿಂದ ಭವ್ಯ ಮೆರವಣಿಗೆ ನಡೆಯಿತು. ಆಸ್ಟ್ರೋ ಮೋಹನ್ ಹಾಗೂ ಜನಾರ್ದನ ಕೊಡವೂರು ಸಂಪಾದಿತ ''ಚಿತ್ರ ಮಯ ಉಡುಪಿ'' ಪ್ರದರ್ಶನ ಮತ್ತು ನಿತ್ಯಾನಂದ ನಾಯಕ್ ಅವರ ಮುರಲ್ ಕಲಾಕೃತಿಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಸರ್ಕಾರ ಸೋತಿದೆ: ಡಾ. ಆಳ್ವ

- ಡಾ. ಎಂ. ಮೋಹನ್ ಆಳ್ವ ಮಾತನಾಡಿ, ರಾಜ್ಯ ಸರ್ಕಾರವು ಕನ್ನಡ ಮಾಧ್ಯಮ ಶಾಲೆಗಳನ್ನು ಗಟ್ಟಿಯಾಗಿ ಕಟ್ಟುವಲ್ಲಿ ಸಂಪೂರ್ಣ ಸೋತು ಹೋಗಿದೆ. ನೂರಾರು ವರ್ಷಗಳ ಇತಿಹಾಸವಿರುವ ಕನ್ನಡ ಶಾಲೆಗಳು ಶಿಕ್ಷಕರಿಲ್ಲದೆ ಸೊರಗುತ್ತಿದ್ದು, ಪ್ರತಿ ವರ್ಷ ಶಾಲೆಗಳು ಮುಚ್ಚುತ್ತಿರುವುದು ಆತಂಕಕಾರಿ. ಕನ್ನಡವನ್ನು ಉಳಿಸಲು ಕೇವಲ ಸರಕಾರವನ್ನೇ ನಂಬಿ ಕುಳಿತುಕೊಳ್ಳಬಾರದು. ಕೈಗಾರಿಕೋದ್ಯಮಿಗಳು ತಮ್ಮ ಲಾಭಾಂಶದ ಒಂದು ಭಾಗವನ್ನು ಕನ್ನಡ ಶಾಲೆಗಳ ಉನ್ನತೀಕರಣಕ್ಕೆ ಮೀಸಲಿಟ್ಟು, ಆಂಗ್ಲ ಮಾಧ್ಯಮ ಶಾಲೆಗಳ ಮಾದರಿಯಲ್ಲಿ ಕನ್ನಡ ಶಾಲೆಗಳನ್ನು ಕಟ್ಟಬೇಕು ಎಂದು ಕರೆ ನೀಡಿದರು.

ಸಿನಿಮಾ ಮೂಲಕ ತುಳುವಿಗೆ ಜಾಗತಿಕ ಮನ್ನಣೆ: ಡಾ. ಆಳ್ವ

ಮಂಗಳೂರು ಪುರಭವನದಲ್ಲಿ 'ಕಜ್ಜ' ತುಳು ಸಿನಿಮಾದ ಆಡಿಯೋ, ಟೇಲರ್ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಪಂಚ ದ್ರಾವಿಡ ಭಾಷೆಗಳಲ್ಲಿ ತುಳು ಭಾಷೆ ಪ್ರಮುಖ ಭಾಷೆಯಾಗಿದೆ. ನಾಟಕ, ಸಿನಿಮಾಗಳ ಮೂಲಕ ತುಳು ಭಾಷೆ ಇಂದು ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದೆ. ಎಲ್ಲರೂ ಇಷ್ಟ ಪಡುವ ಭಾಷೆ ತುಳು. ಸುಮುಖ ಪ್ರೊಡಕ್ಷನ್ ಲಾಂಛನದಲ್ಲಿ, ಈ ಹಿಂದೆ ತೆರೆಕಂಡ 'ತುರ್ದ' ಯಶಸ್ವಿ ಪ್ರದರ್ಶನ ದಾಖಲಿಸಿದೆ. ಅದೇ ತಂಡದಿಂದ 'ಕಜ್ಜ' ತುಳು ಸಿನಿಮಾ ಪ್ರೇಕ್ಷಕರ ಮನಗೆಲ್ಲಲಿ. ತುಳುವಿನಲ್ಲಿ 150 ಕ್ಕೂ ಮಿಕ್ಕಿದ ಸಿನಿಮಾಗಳು ತೆರೆಗೆ ಬಂದಿದೆ. ಎಲ್ಲವನ್ನು ಮೀರಿ ತುಳು ಚಿತ್ರರಂಗ ಬೆಳೆಯುತ್ತಿದೆ ಎಂದು ಮೂಡುಬಿದಿರೆ ಆಳ್ವಾಸ್ ಸಂಸ್ಥೆಯ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹೇಳಿದರು.

ಮಂಗಳೂರು ಪುರಭವನದಲ್ಲಿ ಶನಿವಾರ ನಡೆದ ಶಾಮ್ ಇನ್‌ಸ್ಟಿಟ್ಯೂಶನ್ ಪ್ರಸ್ತುತ ಪಡಿಸುವ 'ಕಜ್ಜ' ತುಳು ಸಿನಿಮಾದ ಆಡಿಯೋ ಮತ್ತು ಟ್ರೇಲರ್‌ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಲಕ್ಷ್ಮೀನಾರಾಯಣ ಅಸ್ರಣ್ಣ ದೀಪ ಬೆಳಗಿಸಿ ಉದ್ಘಾಟಿಸಿ ಮಾತನಾಡಿ, ತುಳು ಸಿನಿಮಾದ ಮೂಲಕ ಸಂಸ್ಕಾರ, ಸಂಸ್ಕೃತಿ, ಆಚಾರ ವಿಚಾರ ಜಗತ್ತಿಗೆ ಪಸರಿಸಲಿ ಎಂದರು.

ತುಳು ಭಾಷೆ ಎತ್ತರಕ್ಕೆ: ಕರ್ನಾಟಕ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್‌ಮಾತನಾಡಿ, ಇಂದು ತುಳು ಸಿನಿಮಾಗಳ ಮೂಲಕ ಭಾಷೆ ಎತ್ತರಕ್ಕೆ ಬೆಳೆದಿದೆ ಎಂದರು.

ಶಾಸಕ ವೇದವ್ಯಾಸ ಕಾಮತ್ ಮಾತನಾಡಿ ಅನೇಕ ತುಳು ಭಾಷೆಯ ಸಿನಿಮಾಗಳು ತೆರೆಗೆ ಬರುತ್ತಿರುವುದನ್ನು ನಾವು ನೋಡುತ್ತೇವೆ. ಎಲ್ಲರೂ ತುಳು ಭಾಷೆಯ ಸಿನಿಮಾಗಳನ್ನು ನೋಡಿ ಪ್ರೋತ್ಸಾಹಿಸಬೇಕು ಎಂದರು.



'ಕಜ್ಜ' ತುಳು ಸಿನಿಮಾದ ಆಡಿಯೋ, ಟೇಲರ್‌ಬಿಡುಗಡೆ

- ಶಾಸಕ ವೇದವ್ಯಾಸ ಕಾಮತ್ ಮಾತನಾಡಿ ಅನೇಕ ತುಳು ಭಾಷೆಯ ಸಿನಿಮಾಗಳು ತೆರೆಗೆ ಬರುತ್ತಿರುವುದನ್ನು ನಾವು ನೋಡುತ್ತೇವೆ. ಎಲ್ಲರೂ ತುಳು ಭಾಷೆಯ ಸಿನಿಮಾಗಳನ್ನು ನೋಡಿ ಪ್ರೋತ್ಸಾಹಿಸಬೇಕು ಎಂದರು.

ನಾಟಕ, ಸಿನಿಮಾ ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್ ಬೈಲ್ ಮಾತನಾಡಿ'ಕಜ್ಜ' ತುಳು ಸಿನಿಮಾ ತುಳುವಿನಲ್ಲಿ ಮೈಲುಗಲ್ಲಾಗಲಿ ಎಂದರು.

ಸರ್ವೋತ್ತಮ ಶೆಟ್ಟಿ ಅಬುದಾಬಿ ಮಾತನಾಡಿ 'ಕಜ್ಜ' ಒಳ್ಳೆಯ ಸಿನಿಮಾ ಆಗಿ ಮೂಡಿಬಂದು ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯಲಿ ಎಂದರು.

ಆಡಿಯೋ, ಟ್ರೇಲರ್‌ಬಿಡುಗಡೆಗೊಳಿಸಿದ ನಟ ವಸಿಷ್ಠ ಸಿಂಹ ಮಾತನಾಡಿ, ಇಲ್ಲಿಯ ಭಾಷೆ ಇಲ್ಲಿಯ ಜನರ ಒಡನಾಟದಿಂದ ನಾನು ತುಳು ಭಾಷೆ ಕಲಿಯುವಂತಾಯಿತು.'ಕಜ್ಜ' ಸಿನಿಮಾದ ಚಿತ್ರೀಕರಣದ ವೇಳೆ ಒಂದು ಕುಟುಂಬದ ಸದಸ್ಯರಂತೆ ನಾವು ಇದ್ದೆವು. ಸಿನಿಮಾ ಯಶಸ್ವಿಯಾಗುತ್ತದೆ ಎಂಬ ವಿಶ್ವಾಸ ತನಗಿದೆ ಎಂದರು.

ಪ್ರಮುಖರಾದ ಪ್ರದೀಪ್ ಕುಮಾರ್ ಕಲ್ಕೂರ, ಹರಿಕೃಷ್ಣ ಪುನರೂರು, ಅರವಿಂದ ಬೋಳಾರ್, ಎಂಪಿ ಶೈಣೈ, ವಿಶ್ವನಾಥ ಶೆಟ್ಟಿ ದುಬೈ, ಸತೀಶ್ ಬಂದಲೆ, ಉದಯ ಪೂಜಾರಿ ಬಲ್ಲಾಲ್ ಭಾಗ್, ರೈ ಮಸಾಲೆಯ ಮಾಲಕಿ ದಿವ್ಯಾ ರೈ, ನಿರ್ಮಾಪಕ ವಿಶಾಂತ್ ಮಿನೇಜಸ್, ಸಹ ನಿರ್ಮಾಪಕ ಪ್ರವೀಣ್ ಸುವರ್ಣ, ನಟ ಸಿದ್ಧಾರ್ಥ್ ಶೆಟ್ಟಿ, ಸಂಗೀತ ನಿರ್ದೇಶಕ ಲಿಖಿತ್ ಪ್ರಸಾದ್ ಶೆಟ್ಟಿ, ಲಂಚುಲಾಲ್, ಹರೀಶ್ ಶೆಟ್ಟಿ, ಆರತಿ ಶೆಟ್ಟಿ ಮತ್ತಿತರರಿದ್ದರು.

ಪ್ರಕಾಶ್ ಮಹಾದೇವನ್ ಪ್ರಾರ್ಥಿಸಿದರು. ಚಿತ್ರದ ಕಥೆ ಹಾಗೂ ಸಾಹಿತ್ಯ ಬರೆದ ಮೋಹನ್ ರಾಜ್ ಸ್ವಾಗತಿಸಿದರು. ಅನುರಾಗ್ ನಿರ್ವಹಿಸಿದರು.

ರಂಗಭೂಮಿಯಿಂದ ಜೀವನ ಸಂಸ್ಕಾರ: ಯಶ್‌ಪಾಲ್ ಸುವರ್ಣ

ಆನಂದ ಗಾಣಿಗರ ಸ್ಮರಣಾರ್ಥ ರಂಗಭೂಮಿ ಆನಂದೋತ್ಸವ



ರಂಗಭೂಮಿ ಆನಂದೋತ್ಸವವನ್ನು ಶಾಸಕ ಯಶ್‌ಪಾಲ್ ಸುವರ್ಣ ಉದ್ಘಾಟಿಸಿದರು

• **ಕನ್ನಡಪ್ರಭ ವಾರ್ತೆ** ಉಡುಪಿ

ನಾಟಕಗಳು ಕೇವಲ ಮನೋರಂಜನೆಗೆ ಮಾತ್ರವಲ್ಲ, ಜೀವನ ಸಂಸ್ಕಾರವನ್ನು ಬೆಳೆಸುತ್ತವೆ. ಬದುಕಿನ ಆಚಾರ ವಿಚಾರ ತಿಳಿಸುವ ಕೆಲಸ ರಂಗಭೂಮಿಯಿಂದ, ರಂಗಕಲೆಗಳಿಂದ ಇನ್ನಷ್ಟು ನಡೆಯಬೇಕು. ಈ ನಿಟ್ಟಿನಲ್ಲಿ ರಂಗಭೂಮಿ ಉಡುಪಿಯ ಕಾರ್ಯ ಮಾದರಿಯಾಗಿದೆ ಎಂದು ಉಡುಪಿ ಶಾಸಕ ಯಶಪಾಲ್ ಸುವರ್ಣ ಹೇಳಿದರು.

ಅವರು ನಗರದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ರಂಗಭೂಮಿ ಉಡುಪಿ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ಸಹಯೋಗದಲ್ಲಿ ಸಂಸ್ಥೆಯ ಸಂಸ್ಥಾಪಕ ದಿ.ಕುತ್ಪಾಡಿ ಆನಂದ ಗಾಣಿಗರ ಸ್ಮರಣಾರ್ಥ ಎರಡು ದಿನಗಳ ಕಾಲ ಹಮ್ಮಿಕೊಂಡ ರಂಗಭೂಮಿ ಆನಂದೋತ್ಸವ 2026 ನ್ನು ಉದ್ಘಾಟಿಸಿ ಮಾತನಾಡಿದರು.

ರಂಗಭೂಮಿ ಉಡುಪಿ ಸಂಸ್ಥೆಯನ್ನು ಹುಟ್ಟುಹಾಕಿ, ಅದರ ಅಧ್ಯಕ್ಷನಾಗಿ, ಕಲಾವಿದನಾಗಿ ಬೆಳೆಸಿದ ದಿ. ಕುತ್ಪಾಡಿ ಆನಂದ ಗಾಣಿಗ ಅವರ ಶ್ರಮ ಇಂದು ಫಲ ನೀಡಿದೆ. ಈ ಸಂಸ್ಥೆ ಅನೇಕ ಕಲಾವಿದರು, ಪ್ರತಿಭೆಗಳಿಗೆ ವೇದಿಕೆಯಾಗಿ ನಾಡಿಗೆ ಪರಿಚಯಿಸಿದೆ. ಆನಂದ ಗಾಣಿಗರು ರಂಗಭೂಮಿಗೆ ನೀಡಿದ ಕೊಡುಗೆ ಅಪಾರ. ಸಮಾಜದ ಅಂಕುಡೊಂಕನ್ನು ತಿದ್ದುವ ಈ ನಾಟಕೋತ್ಸವಗಳು ಇಂದಿನ ಆಧುನಿಕ ಕಾಲಘಟ್ಟದಲ್ಲಿ ಹೆಚ್ಚುಹೆಚ್ಚು ನಡೆಯಬೇಕಾದ ಅಗತ್ಯವಿದೆ ಎಂದು ಅವರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ರಂಗಭೂಮಿ ಉಡುಪಿ ಅಧ್ಯಕ್ಷ ಡಾ. ತಲ್ಲೂರು ಶಿವರಾಮ ಶೆಟ್ಟಿ ಮಾತನಾಡಿ, ರಂಗಭೂಮಿ ಉಡುಪಿ ತನ್ನ 60 ವರ್ಷಗಳ ಇತಿಹಾಸದಲ್ಲಿ ಅನೇಕ ಕೊಡುಗೆಗಳನ್ನು ಸಮಾಜಕ್ಕೆ ನೀಡಿದೆ. ಈ ಸಂಸ್ಥೆಯನ್ನು ಮುನ್ನಡೆಸಿದ ದಿ. ಆನಂದ ಗಾಣಿಗರ ಶ್ರಮ, ಮಾತು ನಮ್ಮ ಮುಂದಿದೆ. ಮಕ್ಕಳಿಗೆ ರಂಗಶಿಕ್ಷಣ ನೀಡಿ ಭವಿಷ್ಯದ ಕಲಾವಿದರನ್ನು ಹುಟ್ಟುಹಾಕುವ ಯೋಜನೆಗೆ ಉತ್ತಮ ಸ್ಪಂದನೆ ಸಿಕ್ಕಿದೆ. ಸಂಘಸಂಸ್ಥೆಗಳು, ರಂಗಾಸಕ್ತ ಮನಸ್ಸುಗಳು ರಂಗಭೂಮಿಯನ್ನು ಉಳಿಸಿ ಬೆಳೆಸಲು ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

- ರಂಗಭೂಮಿ ಉಡುಪಿ ಸಂಸ್ಥೆಯನ್ನು ಹುಟ್ಟುಹಾಕಿ, ಅದರ ಅಧ್ಯಕ್ಷನಾಗಿ, ಕಲಾವಿದನಾಗಿ ಬೆಳೆಸಿದ ದಿ. ಕುತ್ಪಾಡಿ ಆನಂದ ಗಾಣಿಗ ಅವರ ಶ್ರಮ ಇಂದು ಫಲ ನೀಡಿದೆ. ಈ ಸಂಸ್ಥೆ ಅನೇಕ ಕಲಾವಿದರು, ಪ್ರತಿಭೆಗಳಿಗೆ ವೇದಿಕೆಯಾಗಿ ನಾಡಿಗೆ ಪರಿಚಯಿಸಿದೆ. ಆನಂದ ಗಾಣಿಗರು ರಂಗಭೂಮಿಗೆ ನೀಡಿದ ಕೊಡುಗೆ ಅಪಾರ. ಸಮಾಜದ ಅಂಕುಡೊಂಕನ್ನು ತಿದ್ದುವ ಈ ನಾಟಕೋತ್ಸವಗಳು ಇಂದು ಹೆಚ್ಚುಹೆಚ್ಚು ನಡೆಯಬೇಕಾದ ಅಗತ್ಯವಿದೆ ಎಂದು ಯಶ್‌ಪಾಲ್ ಹೇಳಿದರು.

ಕರ್ನಾಟಕ ಬ್ಯಾಂಕಿನ ಅಧಿಕಾರಿ ಸುಬ್ರಹ್ಮಣ್ಯ, ರಂಗಭೂಮಿ ಪ್ರಧಾನ ಕಾರ್ಯದರ್ಶಿ ಪ್ರದೀಪ್‌ಚಂದ್ರ, ಕುತ್ಪಾಡಿ, ಉಪಾಧ್ಯಕ್ಷರಾದ ಭಾಸ್ಕರ ರಾವ್ ಕಿದಿಯೂರು, ಎನ್. ಆರ್. ಬಲ್ಲಾಳ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶಿಕ್ಷಕ ಜೆ.ಪಿ.ಪ್ರಭಾಕರ್‌ತುಮರಿ ಕಾರ್ಯಕ್ರಮ ನಿರೂಪಿಸಿದರು. ರಂಗಭೂಮಿಯ ರಂಗಶಿಕ್ಷಣ ನಿರ್ದೇಶಕ ವಿದ್ಯಾವಂತ ಆಚಾರ್ಯ ಸ್ವಾಗತಿಸಿದರು.

ಕಟೀಲು ದುರ್ಗಾಪರಮೇಶ್ವರಿ ದೇವಳದಲ್ಲಿ 49 ಜೋಡಿ ವಿವಾಹ

ಹೆಚ್ಚಿನ ಸಂಖ್ಯೆಯಲ್ಲಿ ಶುಭ ಕಾರ್ಯಕ್ರಮ | ಕ್ಷೇತ್ರ ಸಂಪರ್ಕ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್

• **ಕನ್ನಡಪ್ರಭ ವಾರ್ತೆ** ಮೂಲ್ಕಿ

ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಭಾನುವಾರ 49 ಜೋಡಿಗಳು ವಿವಾಹವಾಗುವ ಮೂಲಕ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಭಾನುವಾರ ಟೀಲು ದೇವಳದಲ್ಲಿ ಬೆಳಗ್ಗಿನಿಂದಲೇ ಜನಸಂದಣಿ ಕಂಡುಬಂದಿದ್ದು, ಹೆಚ್ಚಿನ ಸಂಖ್ಯೆಯ ವಾಹನಗಳಿಂದಾಗಿ ಕಟೀಲಿನಲ್ಲಿ ಟ್ರಾಫಿಕ್ ಜಾಮ್ ಕಂಡುಬಂದಿತ್ತು.

ಕಿನ್ನಿಗೋಳಿಯಿಂದ ಕಟೀಲು ಕಡೆಗೆ ಹಾಗೂ ಬಜಪೆ, ಎಕ್ಕಾರು ಕಡೆಯಿಂದ ಕಟೀಲಿಗೆ ಬರುವ ರಾಜ್ಯ ಹೆದ್ದಾರಿಯಲ್ಲಿ ವಾಹನ ಸಂಚಾರ ಹೆಚ್ಚಿದ್ದು, ಟ್ರಾಫಿಕ್ ಜಾಮ್ ಉಂಟಾಗಿತ್ತು. ಕಟೀಲಿನಲ್ಲಿ ಸುಮಾರು 20000ಕ್ಕೂ ಹೆಚ್ಚು ಭಕ್ತರು ದೇವಳಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು. 14000ಕ್ಕೂ ಹೆಚ್ಚು ಭಕ್ತರು ಅನ್ನ ಪ್ರಸಾದ ಸ್ವೀಕರಿಸಿದರು.



ಕಟೀಲು ಕ್ಷೇತ್ರದಲ್ಲಿ 49 ಜೋಡಿ ವಿವಾಹವಾಗಿದ್ದು, ಕಿಕ್ಕಿರಿದ ಭಕ್ತ ಸಂದಣಿ

ಟ್ರಾಫಿಕ್ ಜಾಮ್: ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಮದುವೆ ಸೇರಿದಂತೆ ಶುಭ ಕಾರ್ಯಗಳಿದ್ದುದರಿಂದ ಮೂಲ್ಕಿ ತಾಲೂಕು ಪರಿಸರದಲ್ಲಿನ ಎಲ್ಲ ಮದುವೆ ಹಾಲ್ ಗಳು ಬುಕ್ಕಿಂಗ್ ಆಗಿದ್ದು, ದಟ್ಟ ಜನ ಸಂದಣಿಯಿತ್ತು. ಮೂಲ್ಕಿ-ಮೂಡುಬಿದಿರೆ ರಾಜ್ಯ ಹೆದ್ದಾರಿಯಲ್ಲಿ ಮುಖ್ಯ ರಸ್ತೆಯಲ್ಲಿ ಕಿನ್ನಿಗೋಳಿ ಜಂಕ್ಷನ್ ನಲ್ಲಿ ಕಿಕ್ಕಿರಿದ ವಾಹನಗಳ ಸಂಚಾರದಿಂದಾಗಿ ಬೆಳಗ್ಗಿನ ಹೊತ್ತು ಟ್ರಾಫಿಕ್ ಜಾಮ್ ಆಗಿತ್ತು. ಸುಮಾರು 1 ಕಿ.ಮಿ.ವರೆಗೆ ವಾಹನಗಳ ಸರತಿ ಸಾಲು ಕಂಡುಬಂದಿತ್ತು.

ಮಧ್ಯಾಹ್ನದ ಬಳಿಕ ಸ್ವಲ್ಪ ಕಡಿಮೆಯಾಗಿದ್ದು, ಸಂಜೆ ಅವಧಿಯಲ್ಲಿ ಪುನಃ ಟ್ರಾಫಿಕ್‌ಜಾಮ್ ಆಗಿತ್ತು.

- ಮೂಲ್ಕಿ-ಮೂಡುಬಿದಿರೆ ರಾಜ್ಯ ಹೆದ್ದಾರಿಯಲ್ಲಿ ಮುಖ್ಯ ರಸ್ತೆಯಲ್ಲಿ ಕಿನ್ನಿಗೋಳಿ ಜಂಕ್ಷನ್ ನಲ್ಲಿ ಕಿಕ್ಕಿರಿದ ವಾಹನಗಳ ಸಂಚಾರದಿಂದಾಗಿ ಬೆಳಗ್ಗಿನ ಹೊತ್ತು ಟ್ರಾಫಿಕ್ ಜಾಮ್ ಆಗಿತ್ತು.

ಆನಂದೋತ್ಸವ' | ರಂಗಭೂಮಿ ಆನಂದೋತ್ಸವ ಸಂಪನ್ನ | ಮನೋಹರ್ ಶೆಟ್ಟಿಗೆ ತಲ್ಲೂರ್ಸ್ ಪ್ರಶಸ್ತಿ

ರಂಗಭೂಮಿಯಿಂದ ಸುಸಂಸ್ಕೃತ ಸಮಾಜ ನಿರ್ಮಾಣ: ಡಾ. ಎಚ್.ಎಸ್. ಬಲ್ಲಾಳ್

• **ಕನ್ನಡಪ್ರಭ ವಾರ್ತೆ** ಉಡುಪಿ

ನಾಟಕ, ರಂಗಭೂಮಿ ಮೊದಲಾದ ಚಟುವಟಿಕೆಗಳಿಂದ ಸುಸಂಸ್ಕೃತ ಸಮಾಜ ನಿರ್ಮಾಣ ಸಾಧ್ಯ. ಈ ನಿಟ್ಟಿನಲ್ಲಿ ಇಂತಹ ಕಲೆಗಳಿಗೆ ಪ್ರೋತ್ಸಾಹ ನೀಡುವವರನ್ನು ಗುರುತಿಸಿ ಗೌರವಿಸುವುದು ಉತ್ತಮ ಬೆಳವಣಿಗೆ ಎಂದು ಮಣಿಪಾಲ ಮಾಹೆ ಸಹಕುಲಾಧಿಪತಿ ಡಾ. ಎಚ್. ಎಸ್. ಬಲ್ಲಾಳ್ ಹೇಳಿದರು.

ಅವರು ಇಲ್ಲಿನ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ರಂಗಭೂಮಿ ಉಡುಪಿ ವತಿಯಿಂದ ಸಂಸ್ಥೆಯ ಸ್ಥಾಪಕ ದಿ. ಕುತ್ಪಾಡಿ ಆನಂದ ಗಾಣಿಗ ಅವರ ಸ್ಮರಣಾರ್ಥ ನಡೆದ ಎರಡು ದಿನಗಳ 'ರಂಗಭೂಮಿ ಆನಂದೋತ್ಸವ'ದಲ್ಲಿ ಸಾಯಿರಾಧಾ ಸಮೂಹ ಸಂಸ್ಥೆಗಳ ಮುಖ್ಯಸ್ಥ ಮನೋಹರ್‌ಎಸ್. ಶೆಟ್ಟಿ ಅವರಿಗೆ ತಲ್ಲೂರು ಗಿರಿಜಾ ಶಿವರಾಮ ಶೆಟ್ಟಿ ಪ್ರಾಯೋಜಿತ ತಲ್ಲೂರ್ಸ್ ಸಂಸ್ಕೃತಿ ಸಾಧಕ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಉಡುಪಿಯಲ್ಲಿ ರಂಗಭೂಮಿ ಕಟ್ಟಿ ಬೆಳೆಸಿದ ಆನಂದ ಗಾಣಿಗರ ಹೆಸರಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ಸಂತೋಷ ತಂದಿದೆ. ಅವರ ನಂತರ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಡಾ. ತಲ್ಲೂರು ಶಿವರಾಮ ಶೆಟ್ಟಿ, ಕಾರ್ಯದರ್ಶಿ ಪ್ರದೀಪ್ ಚಂದ್ರ ಹಾಗೂ ಅವರ ತಂಡ ಅಭಿನಂದನಾರ್ಹರು ಎಂದು ಹೇಳಿದರು.



ಮನೋಹರ್‌ಎಸ್. ಶೆಟ್ಟಿ ಅವರಿಗೆ ತಲ್ಲೂರ್ಸ್ ಸಂಸ್ಕೃತಿ ಸಾಧಕ ಪ್ರಶಸ್ತಿ ಪ್ರಧಾನ ಮಾಡಲಾಯಿತು

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮನೋಹರ್‌ಎಸ್ . ಶೆಟ್ಟಿ ಅವರು, ರಂಗಭೂಮಿ ನೀಡುವ ಉತ್ತಮ ಸಂದೇಶಗಳು ಸಮಾಜಕ್ಕೆ ದಾರಿ ದೀಪವಾಗಿವೆ. ರಂಗಭೂಮಿ ಉಡುಪಿ ಅನೇಕ ಪ್ರಭುದ್ಧ ಕಲಾವಿದರನ್ನು ಸಮಾಜಕ್ಕೆ ನೀಡಿದೆ. ಕುತ್ಪಾಡಿ ಆನಂದ ಗಾಣಿಗರು ರಂಗಭೂಮಿಯನ್ನು ಕಟ್ಟಿ ಬೆಳೆಸಲು ವಹಿಸಿದ್ದ ಶ್ರಮವನ್ನು ಕಣ್ಣಾರೆ ಕಂಡಿದ್ದೇನೆ. ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ನೀಡುವ ಈ ಪ್ರಶಸ್ತಿಗೆ ಆಭಾರಿಯಾಗಿದ್ದೇನೆ ಎಂದರು.

ರಂಗಭೂಮಿ ಉಡುಪಿ ಅಧ್ಯಕ್ಷ ಹಾಗೂ ತಲ್ಲೂರ್ಸ್ ಫ್ಯಾಮಿಲಿ ಟ್ರಸ್ಟ್ ಪ್ರವರ್ತಕ ಡಾ. ತಲ್ಲೂರು ಶಿವರಾಮ ಶೆಟ್ಟಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಆನಂದ ಗಾಣಿಗರು ಸುಮಾರು 45 ವರ್ಷಗಳ ಕಾಲ ರಂಗಭೂಮಿ ಉಡುಪಿ ಸಂಸ್ಥೆಯ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಮಹಾನುಭಾವರು. ಅವರ ನೆನಪಿನ ಈ ಕಾರ್ಯಕ್ರಮದಲ್ಲಿ ಸಾಧಕರನ್ನು ಗುರುತಿಸಿ ಗೌರವಿಸುವ ಕಾರ್ಯ ಮಾಡುತಿದ್ದೇವೆ. ಈವರೆಗೆ 15 ಮಂದಿ ಸಾಧಕರಿಗೆ ಈ ಪ್ರಶಸ್ತಿ ನೀಡಿ ಗೌರವಿಸಿದ್ದೇವೆ ಎಂದರು.

ಟ್ರಸ್ಟ್ ನ ಟ್ರಸ್ಟಿ, ಗಿರಿಜಾ ಶಿವರಾಮ ಶೆಟ್ಟಿ, ತಲ್ಲೂರು ಶಿವಪ್ರಸಾದ್ ಎಸ್. ಶೆಟ್ಟಿ, ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಡಾ. ಸುಧಾಕರ್‌ಶೆಟ್ಟಿ, ಅಲಯನ್ಸ್ ಉಡುಪಿ ಜಿಲ್ಲಾ ಗವರ್ನರ್‌ಸುನಿಲ್ ಕುಮಾರ್‌ಶೆಟ್ಟಿ, ಆನಂದ ಗಾಣಿಗ ಅವರ ಅಳಿಯ ಗೋಪಾಲ ಗಾಣಿಗ, ರಂಗಭೂಮಿ ಉಡುಪಿ ಉಪಾಧ್ಯಕ್ಷ ಭಾಸ್ಕರ ರಾವ್ ಕಿದಿಯೂರು, ಎನ್. ಆರ್. ಬಲ್ಲಾಳ್, ಅನುರಾಧ ಮನೋಹರ್‌ಶೆಟ್ಟಿ ಇದ್ದರು.

ಲೇಖಕಿ ಪೂರ್ಣಿಮಾ ಸುರೇಶ್ ನಿರೂಪಿಸಿದರು. ಅನುಷಾ ಆಚಾರ್‌ವಾಚಿಸಿದರು. ರಂಗಭೂಮಿ ಉಡುಪಿ ಪ್ರಧಾನ ಕಾರ್ಯದರ್ಶಿ ಪ್ರದೀಪ್ ಚಂದ್ರ ಕುತ್ಪಾಡಿ ವಂದಿಸಿದರು.

- ಆನಂದ ಗಾಣಿಗರು ಸುಮಾರು 45 ವರ್ಷಗಳ ಕಾಲ ರಂಗಭೂಮಿ ಉಡುಪಿ ಸಂಸ್ಥೆಯ ಶ್ರೇಯೋಭಿವೃದ್ಧಿಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಮಹಾನುಭಾವರು.

ಉಜಿರೆ ರುಡ್‌ಸೆಟ್: ಫಾಸ್ಟ್ ಫುಡ್ ತಯಾರಿಕೆ ತರಬೇತಿ ಸಮಾರೋಪ

• **ಕನ್ನಡಪ್ರಭ ವಾರ್ತೆ** ಬೆಳ್ತಂಗಡಿ

ಉಜಿರೆಯಲ್ಲಿ ರುಡ್ ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ ಫಾಸ್ಟ್ ಫುಡ್ ತಯಾರಿಕೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅರುಣ ಕುಮಾರ್, ಉಜಿರೆ ದಿಶಾ ಸಮೂಹ ಸಂಸ್ಥೆಗಳ ಮಾಲಕರು, ಭಾಗವಹಿಸಿ ತಮ್ಮ ಉದ್ಯಮದ ಬೆಳವಣಿಗೆಯ ಪಯಣವನ್ನು ವಿವರಿಸುತ್ತಾ, ಆಹಾರ ಉತ್ಪನ್ನ ಕ್ಷೇತ್ರದಲ್ಲಿ ಶುಚಿ ಮತ್ತು ರುಚಿಗೆ ಹೆಚ್ಚಿನ ಮಹತ್ವ ನೀಡಬೇಕು. ಗ್ರಾಹಕರ ವಿಶ್ವಾಸ ಗಳಿಸಲು ಗುಣಮಟ್ಟದ ಉತ್ಪನ್ನಗಳು ಅಗತ್ಯವಾಗಿದ್ದು, ಉದ್ಯಮದಲ್ಲಿ ಪರಿಶ್ರಮ, ಶಿಸ್ತಿನ ಜೊತೆಗೆ ಹೊಸತನವನ್ನು ನಿರಂತರವಾಗಿ ಅಳವಡಿಸಿಕೊಳ್ಳಬೇಕು ಎಂದು ಅವರು ತರಬೇತಿಗಾರರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು.

ರುಡ್‌ಸೆಟಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ವಿಜಯಕುಮಾರ್‌ಬಿ.ಪಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬ್ಯಾಂಕುಗಳ ಸಹಾಯವನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವ ಉದ್ಯೋಗದಲ್ಲಿ ಯಶಸ್ಸು ಸಾಧಿಸಬಹುದು ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕರಾದ ಅಜಯ್ ಸ್ವಾಗತಿಸಿ, ತರಬೇತಿ ಕಾರ್ಯಕ್ರಮದ ಉದ್ದೇಶ ವಿವರಿಸಿದರು.

ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್ ಪಿ.ವಿ. ಕಾರ್ಯಕ್ರಮವನ್ನು ನಿರ್ವಹಿಸಿದರು. ಹಿರಿಯ ಉಪನ್ಯಾಸಕ ಕೆ. ಕರುಣಾಕರ ಜೈನ್ ವಂದಿಸಿದರು. ತರಬೇತಿಗಾರರಾದ ಅಶ್ವಥ್, ಅಶ್ವಿನಿ ಮತ್ತು ಮಂಗಳಾದೇವಿ ತಮ್ಮ ತರಬೇತಿ ಅನುಭವಗಳನ್ನು ಹಂಚಿಕೊಂಡರು.

ಕನ್ನಡಪ್ರಭ
ಸಂಪಾದಕೀಯ

ಅಮೆರಿಕ-ಇರಾನ್ ಯುದ್ಧದಿಂದ ಜನರಿಗೆ ಈಗ ದರ ಏರಿಕೆಯ ಬಿಸಿ


ಮಧ್ಯಪ್ರಾಚ್ಯ ಬಿಕ್ಕಟ್ಟು ದಿನೇದಿನೇ ಜನಸಾಮಾನ್ಯರ ಬದುಕನ್ನು ಹೈರಾಣು ಮಾಡುತ್ತಿದೆ. ಯುದ್ಧ ಹಾಗೂ ಆನಂತರ ಸೃಷ್ಟಿಯಾಗಿರುವ ಪ್ರತಿಕೂಲ ಪರಿಸ್ಥಿತಿಯ ಪರಿಣಾಮ ಜಾಗತಿಕ ಮಟ್ಟದಲ್ಲಿ ಕಚ್ಚಾತೈಲದ ಬೆಲೆ ಬಹುತೇಕ ದ್ವಿಗುಣ ಎನ್ನುವ ಹಂತಕ್ಕೆ ಬಂದಿದೆ. ಕಚ್ಚಾತೈಲವು ಪೆಟ್ರೋಲ್, ಡೀಸೆಲ್, ಎಲ್‌ಪಿಜಿ, ಎಲ್‌ಎನ್‌ಜಿ, ಪಿಎನ್‌ಜಿ, ಸೀಮೆಎಣ್ಣೆ, ಪ್ಲಾಸ್ಟಿಕ್ ಹೀಗೆ ನೂರಾರು ಉತ್ಪನ್ನಗಳಿಗೆ ಮೂಲವಸ್ತು. ಹೀಗಾಗಿ ಕಚ್ಚಾತೈಲ ಬೆಲೆ ಏರಿಕೆ ಸಹಜವಾಗಿಯೇ ತೈಲೋತ್ಪನ್ನ ಸೇರಿ ಅದನ್ನು ಆಧರಿಸಿರುವ ಎಲ್ಲಾ ವಸ್ತುಗಳ ಬೆಲೆ ಏರಿಕೆಗೂ ಕಾರಣವಾಗಿದೆ.

ಆದರೆ ಇತರೆ ವಸ್ತುಗಳಿಗೆ ಹೋಲಿಸಿದರೆ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಮೊದಲಾದವುಗಳು ಜನರ ನಿತ್ಯ ಜೀವನದ ಮೇಲೆ ಹೆಚ್ಚಿನ ಪರಿಣಾಮ ಹೊಂದಿರುವ ಜೀವನಾವಶ್ಯಕ ವಸ್ತುಗಳು. ಸದ್ಯ ಜನ ಸಾಮಾನ್ಯರನ್ನು ಬೆಲೆ ಏರಿಕೆ ಹೊರೆಯಿಂದ ಮುಕ್ತ ಮಾಡುವ ನಿಟ್ಟಿನಲ್ಲಿ ಸರ್ಕಾರ, ಪೆಟ್ರೋಲ್, ಡೀಸೆಲ್ ಮತ್ತು ಗೃಹ ಬಳಕೆಯ ಎಲ್‌ಪಿಜಿ ದರ ಏರಿಕೆಗೆ ಬ್ರೇಕ್ ಹಾಕಿದೆ. ಆದರೆ ಸಗಟು ಡೀಸೆಲ್, ಚೋಟು ಎಲ್‌ಪಿಜಿ, ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯನ್ನು ಜಾಗತಿಕ ಮಾರುಕಟ್ಟೆಗೆ ದರಕ್ಕೆ ತಕ್ಕಂತೆ ಏರಿಕೆ ಮಾಡುತ್ತಲೇ ಇದೆ. ವಾಣಿಜ್ಯ ಸಿಲಿಂಡರ್ ಬೆಲೆ 2 ತಿಂಗಳಲ್ಲಿ ಅಂದಾಜು 1300 ರು.ನಷ್ಟು ಏರಿದೆ. ಇದು ಇವುಗಳನ್ನೇ ಅವಲಂಬಿಸಿದ ಹೋಟೆಲ್ ಉದ್ಯಮಕ್ಕೆ ಸಂಕಷ್ಟ ತಂದಿದೆ. ಹೋಟೆಲ್ ಮಾಲೀಕರು ಸಹಜವಾಗಿಯೇ ಈ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಿದ್ದಾರೆ. ಹೀಗೆ ಅಂತಿಮವಾಗಿ ಪ್ರತಿ ಪ್ರಜೆ ಕೂಡಾ ಬೆಲೆ ಏರಿಕೆಗೆ ಹೊಡೆತಕ್ಕೆ ಸಿಕ್ಕಂತಾಗಿದೆ. ಹಾಗೆಂದು ಸರ್ಕಾರ ಬೆಲೆ ಏರಿಸದೇ ಕೂರುವಂತೆಯೇ ಇಲ್ಲ. ಸುದೀರ್ಘ ಅವಧಿಗೆ ತಡೆದರೆ ಅದು ಆರ್ಥಿಕತೆಗೆ ಪೆಟ್ಟು ನೀಡುವುದು ಖಚಿತ.

> ವಾಣಿಜ್ಯ ಉದ್ದೇಶದ ಪೆಟ್ರೋಲಿಯಂ ಉತ್ಪನ್ನಗಳ ಬಳಿಕ ಇದೀಗ ಸರ್ಕಾರ ಪೆಟ್ರೋಲ್, ಡೀಸೆಲ್, ಗೃಹ ಎಲ್ಪಿಜಿ ದರ ಏರಿಕೆಗೆ ಚಿಂತಿಸಿರುವುದು ಜನ ಸಾಮಾನ್ಯರ ಪಾಲಿಗೆ ಹೊಸ ಹೊರೆ

ಇನ್ನೊಂದೆಡೆ ಯುದ್ಧ ಸದ್ಯ ನಿಲ್ಲುವ ಯಾವುದೇ ಸುಳಿವು ಕೂಡ ಸಿಗುತ್ತಿಲ್ಲ. ಹೀಗಾಗಿ ಯುದ್ಧ ಆರಂಭದ ವೇಳೆ ಬ್ಯಾರೆಲ್‌ಗೆ 70 ಡಾಲರ್ ಇದ್ದ ಕಚ್ಚಾತೈಲದ ಬೆಲೆ ಇದೀಗ 120 ಡಾಲರ್ ತಲುಪಿದೆ. ಹೀಗಾಗಿ ಇದೀಗ ಸರ್ಕಾರ ಪೆಟ್ರೋಲ್, ಡೀಸೆಲ್, ಗೃಹ ಬಳಕೆಯ ಎಲ್‌ಪಿಜಿ ದರ ಏರಿಕೆಯತ್ತ ಚಿಂತಿಸಿದೆ. ಹಾಗೇನಾದರೂ ಆದರೆ ಅದು ಮತ್ತೆ ಗ್ರಾಹಕರ ಜೇಬು ಸುಡಲಿದೆ. ಇದು ಭಾರತವೊಂದರ ಸಮಸ್ಯೆ ಮಾತ್ರವಲ್ಲ, ಕೊಲ್ಲಿ ದೇಶಗಳನ್ನು ತೈಲಕ್ಕಾಗಿ ಅವಲಂಬಿಸಿರುವ ಬಹುತೇಕ ದೇಶಗಳ ಕಥೆ. ಹೀಗಾಗಿ ಯುದ್ಧ ನಿಲ್ಲದ ಹೊರತೂ ಸಮಸ್ಯೆಗೆ ಪರಿಹಾರ ಸಿಗುವ ಯಾವುದೇ ಲಕ್ಷಣ ಕಾಣುತ್ತಿಲ್ಲ. ಜಗತ್ತಿನ ಆರ್ಥಿಕತೆಗೆ ಸತತ ಪೆಟ್ಟು ನೀಡುತ್ತಿರುವ ಈ ಸಮಸ್ಯೆ ನೀಗುವ ಹೊಣೆ ಇದೀಗ ಅಮೆರಿಕ ಮತ್ತು ಇರಾನ್ ಮೇಲಿದೆ.

ಗೂಫ — ಬಿಸಿ ಏರಿಕೆ




ನಿತ್ಯಫಲ

- **ಮೇಷ:** ಮನಸ್ಸಿಗೆ ಹೆಚ್ಚಿನ ಸಮಾಧಾನ ಸಿಗುವಂತಹ ಘಟನೆ ಈ ದಿನ ನಡೆಯಲಿದೆ.
- **ವೃಷಭ:** ಯಾರದ್ದೋ ಮಾತು ಕೇಳಿ ನಿಮ್ಮ ಆತ್ಮೀಯ ಸ್ನೇಹಿತರನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ.
- **ಮಿಥುನ:** ನಿಮ್ಮ ಮಾತೇ ಎಲ್ಲರೂ ಕೇಳಬೇಕು ಎಂಬ ಹಠವನ್ನು ಬಿಟ್ಟು ವಿಶಾಲವಾಗಿ ಚಿಂತಿಸಿ.
- **ಕಟಕ:** ಷೇರು ಪೇಟೆಯಲ್ಲಿ ಹಣ ಹಾಕಿದವರಿಗೆ ಆರಂಭದಲ್ಲಿ ಆಘಾತವಾದರೂ ಸುಖಾಂತ್ಯ.
- **ಸಿಂಹ:** ಅನವಶ್ಯಕ ಚಿಂತೆಯಿಂದ ನೀವು ಮಾನಸಿಕ ಕಿರಿಕಿರಿ ಅನುಭವಿಸುವಿರಿ.ಎಚ್ಚರ.
- **ಕನ್ಯಾ:** ದೃಢ ಹೆಜ್ಜೆಯನ್ನಿಟ್ಟಿರುವ ನಿಮಗೆ ಹಲವು ಅಡೆತಡೆಗಳು ಸಹಜ. ಧೈರ್ಯ ನಡೆಯಿರಲಿ.
- **ತುಲಾ:** ದೂರದ ಬಂಧುಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ.
- **ವೃಶ್ಚಿಕ:** ಅತಿಯಾದ ಆಹಾರ ಸೇವನೆಯಿಂದ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಲಿದೆ.
- **ಧನುಸ್ಸು:** ಹೃದಯ ಸಂಬಂಧಿ ಖಾಯಿಲೆಯಿಂದ ಬಳಲುತ್ತಿರುವ ನೀವು ದೂರ ಪ್ರಯಾಣ ಮಾಡದಿರಿ.
- **ಮಕರ:** ಹಿಡಿದ ಕೆಲಸವನ್ನು ಯಶಸ್ವಿಯಾಗಿ ಮಾಡಿ ಮುಗಿಸಿದ ನಿಮಗೆ ಎಲ್ಲೆಡೆಯಿಂದ ಶ್ಲಾಘನೆ.
- **ಕುಂಭ:** ಹಲವು ದಿನಗಳಿಂದ ಮಾಡಬೇಕು ಎಂದುಕೊಂಡ ಕೆಲಸ ಯಶಸ್ವಿಯಾಗಲಿದೆ. ಶುಭದಿನ.
- **ಮೀನ:** ಪತಿಪತ್ನಿಯ ವಿರಸ ಬೀದಿಗೆ ಬರುವ ಸಾಧ್ಯತೆ. ಆರಂಭದಲ್ಲೇ ನಿಯಂತ್ರಣ ಸಾಧನೆ ಅಗತ್ಯ.

ಪಂಚಾಂಗ

ಸಂವತ್ಸರ: ಪರಾಭವ,ಉತ್ತರಾಯಣ, ಋತು: ವಸಂತ, ಮಾಸ: ವೈಶಾಖ
ಪಕ್ಷ: ಕೃಷ್ಣ, ತಿಥಿ: ತೃತೀಯ, ನಕ್ಷತ್ರ: ಅನುರಾಧ, ರಾಹುಕಾಲ 07:30-09:00
ಯಮಗಂಡಕಾಲ 10:30-12:00 **ಗುಳಿಕಕಾಲ** 01:30-03:00

ಪದಯಾತ್ರೆ 2548 • ಜಯಕೃಷ್ಣ



2547 ರ ಉತ್ತರ
ಎಡದಿಂದ ಬಲಕ್ಕೆ
1.ನಿಷ್ಪಕ್ಷಪಾತ, 3. ಆನಂದ, 4. ರಭಸ, 6. ಹಿಮನದಿ, 8. ಅತಿಕಾಯ, 9.ಕಸಿವಿಸಿ, 11. ಕನಸಿಗ, 14. ಕಮ್ಮಾರ, 15.ಗಾಯನ, 16. ದತ್ತುಸ್ವೀಕಾರ.
ಮೇಲಿನಿಂದ ಕೆಳಕ್ಕೆ
1.ನಿದರ್ಶನ, 2. ತರಗತಿ, 3. ಆರೋಹಿ, 5.ಸಮಯ, 7.ದಿನಸಿ, 8. ಅರ್ಚಕ, 9. ಕನಕ, 10. ವಿಶಾರದ, 12. ನಗೆಗಾರ, 13. ಗಮನ.

ಎಡದಿಂದ ಬಲಕ್ಕೆ
1. ಹಾಕಿದ ಕಡಿವಾಣ (3)
3. ವರ್ತಕನನ್ನು ಹೀಗೂ ಹೇಳುವರು (3)
5. ವಸ್ತುವನ್ನು ಕೊಂಡುಕೊಂಡವನು (5)
6. ದೇಹ ಹಳದಿಯಾಗುವ ಕಾಯಿಲೆ (3)
7. ಗಡಗಡ ನಡುಗುವಿಕೆ (3)
9. ಜಿಂಕೆಯಂತೆ ನೆಗೆತ (3)
11. ಬಾಕಿ ಸಾಲವನ್ನು ಹೀಗೂ ಹೇಳುವರು (3)
13. ಸಣ್ಣ ಪ್ರದೇಶದ ಆಡಳಿತಗಾರ (5)
15. ಸ್ಪರ್ಧೆಯಲ್ಲಿ ದೊರೆತ ಗೆಲುವು (3)
16. ಖಾಲಿ ಇರುವ ಸ್ಥಳ (3)

ಮೇಲಿನಿಂದ ಕೆಳಕ್ಕೆ
1. ಮರಕ್ಕೆ ಹಬ್ಬಿದ ಬಳ್ಳಿ (2)
2. ವಸ್ತುವಿಗೆ ತೋರಿಸಿರುವ ಬೆಲೆ (4)
3. ಗಳಿಕೆ, ಆದಾಯವೂ ಹೌದು (4)
4. ಹುಟ್ಟು, ಜನಿಸುವಿಕೆ (2)
6. ನೀರಿನ ಬುಗ್ಗೆ ಎಂದರೆ ಇದು (3)
8. ಕತ್ತರಿಸುವ ಸಾಧನ (3)
10. ಕಟ್ಟಡದ ಬುನಾದಿ (4)
11. ದಾನಿಯ ಧಾರಾಳ ಸ್ವಭಾವ (4)
12. ಕೂಪ ಎಂದರೆ ಇದು (2)
14. ದೇಹಕ್ಕೆ ಅಥವಾ ಮನಸ್ಸಿಗೆ ಆದ ವೇದನೆ (2)

ಕನ್ನಡಪ್ರಭ KANNADAPRABHA
ಪ್ರಧಾನ ಸಂಪಾದಕ: **ರವಿ ಹೆಗಡೆ** EDITOR IN CHIEF: **RAVI HEGDE**
ನಮ್ಮ ವಿಳಾಸ: ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು-560 001
PHONE: 080-68416300 FAX:080-68416354
email: editor@kannadaprabha.in epaper.kannadaprabha.in
facebook: SuvarnaNews twitter: @suvarnanewstv

ಎಇಇ ಶ್ರೀಧರ್‌ವಿನ್ನಾ ಹೇಳಿಕೆ ತಂದ ನಗು | ವಿಜಯ್ ನಿರಾಣಿ ಮಾತು ಕೇಳಿ ವೇದಿಕೆಯಲ್ಲಿಲ್ಲದ ನಾರಾಯಣಸ್ವಾಮಿಗಾಗಿ ಹುಡುಕಿದ ಸಭಿಕರು

ಕನ್ನಡ ಬರಲ್ಲವೆಂದು ಕನ್ನಡದಲ್ಲೇ ಸಭೆಗೆ ಉತ್ತರ!

ಕಂಡಿದ್ದು ಕಾಣದ್ದು — ರಿಪೋರ್ಟರ್ಸ್ ಡೈರಿ


> ಅಧಿಕಾರಿ ಒಬ್ಬರು ಕನ್ನಡ ಬರುವುದಿಲ್ಲ ಎಂದು ಕನ್ನಡ ಭಾಷೆಯಲ್ಲೇ ಪ್ರತಿಕ್ರಿಯಿಸುತ್ತಿದ್ದಂತೆ ಸಚಿವರು, ಶಾಸಕರು, ಅಧಿಕಾರಿ, ಸಿಬ್ಬಂದಿ ಗೊಳ್ಳೆಂದು ನಕ್ಕರು.

ಕನ್ನಡ ಬರಲ್ಲವೆಂದು ಕನ್ನಡದಲ್ಲೇ ಉತ್ತರಿಸಿದ ಅಧಿಕಾರಿ ಮಾತು ಕೇಳಿ ಇಡೀ ಸಭೆಯೇ ನಗೆಕಡಲಲ್ಲಿ ತೇಲಿತು.

ರಾಯಚೂರು ಜಿಲ್ಲಾಡಳಿತ ಸಭಾಂಗಣದಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಮತ್ತು ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಅವರು ಇತ್ತೀಚೆಗೆ ಸಭೆ ಕೈಗೊಂಡಿದ್ದರು. ಈ ವೇಳೆ ಸ್ಥಳೀಯ ಶಾಸಕ ಡಾ.ಶಿವರಾಜ ಪಾಟೀಲ್ ಅವರು ಜಲಧಾರಾ ಯೋಜನೆಗೆ ಸಂಬಂಧಿಸಿದ ಮಾಹಿತಿ ಹಾಗೂ ಜಲಧಾರೆ ಯೋಜನೆಯಡಿ ಕೈಗೊಂಡ ಪ್ರಗತಿ ಪರಿಶೀಲನೆ ಕುರಿತು ಎಇಇ ಶ್ರೀಧರ್‌ವಿನ್ನಾ ಕೂಟಾ ಅವರನ್ನು ವೇದಿಕೆ ಮುಂಭಾಗಕ್ಕೆ ಕರೆದು ಸಭೆಗೆ ಪ್ರಗತಿಯ ಮಾಹಿತಿ ನೀಡುವಂತೆ ಸೂಚಿಸಿದರು.

ಇದಕ್ಕೆ ಆ ಅಧಿಕಾರಿ ಯೋಜನೆ ಕುರಿತು ಹಿಂದಿಯಲ್ಲಿ ವಿವರಣೆ ನೀಡಲು ಆರಂಭಿಸಿದರು. ತಕ್ಷಣ ಶಾಸಕರು ನಿಮಗೆ ಕನ್ನಡ ಬರುವುದಿಲ್ಲವೇ ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರಿಸಿದ ಶ್ರೀಧರ ವಿನ್ನಾಕೋಟಾ ಅವರು ಕನ್ನಡ ಬರುವುದಿಲ್ಲ ಎಂದು ಕನ್ನಡ ಭಾಷೆಯಲ್ಲೇ ಪ್ರತಿಕ್ರಿಯಿಸುತ್ತಿದ್ದಂತೆ ಸಚಿವರು, ಶಾಸಕರು, ಅಧಿಕಾರಿ, ಸಿಬ್ಬಂದಿ ಗೊಳ್ಳೆಂದು ನಕ್ಕರು.

ಈ ಸನ್ನಿವೇಶದಿಂದ ಕಕ್ಕಾಬಿಕ್ಕಿಯಾದ ಅಧಿಕಾರಿ ನನಗೆ ಕನ್ನಡದಲ್ಲಿ ವಿವರಣೆ ನೀಡಲು ಬರುವುದಿಲ್ಲ ಎಂದು ಹೇಳುವಷ್ಟು ಮಾತ್ರ ಕನ್ನಡ ಬರುತ್ತದೆ ಎಂದು ಹೇಳಿ ಹಿಂದಿಯಲ್ಲೇ ಮಾತು ಮುಂದುವರೆಸಿದರು.



ನಾರಾಯಣಸ್ವಾಮಿ ಅಲ್ಲ, ಚಲುವರಾಯಸ್ವಾಮಿ!

ಯಾರೇ ಹೊಸಬರನ್ನು ಭೇಟಿಯಾದಾಗ ಅವರ ಹೆಸರನ್ನು ನೆನಪಿಟ್ಟುಕೊಂಡು ಹೇಳುವುದು ಎಂತಹವರಿಗೂ ಕಷ್ಟವೇ. ಆದರೆ, ಹಾಗೆ ಭೇಟಿಯಾಗುವ ವ್ಯಕ್ತಿ ಸಚಿವ ಸ್ಥಾನದಂತಹ ಉನ್ನತ ಹುದ್ದೆಯಲ್ಲಿದ್ದರೆ? ಅಂಥವರ ಹೆಸರನ್ನು ಯಾವುದೇ ಕಾರಣಕ್ಕೂ ಮರೆಯುವುದಿಲ್ಲ. ಆದರೆ ಮಾಜಿ ಸಚಿವರೊಬ್ಬರ ಪುತ್ರರೂ ಆಗಿರುವ ಉದ್ಯಮಿಯೊಬ್ಬರು ಕಾರ್ಯಕ್ರಮವೊಂದರಲ್ಲಿ ವೇದಿಕೆಯಲ್ಲಿದ್ದ ಏಕೈಕ ಸಚಿವರ ಹೆಸರನ್ನು ಬದಲಿಸಿ ವಿರೋಧ ಪಕ್ಷದವರ ಹೆಸರು ಹೇಳುವ ಮೂಲಕ ಕಾರ್ಯಕ್ರಮದ ಆಯೋಜಕರೂ ಸೇರಿ ಎಲ್ಲರನ್ನೂ ಒಂದು ಕ್ಷಣ ಅವಾಕ್ಕಾಗುವಂತೆ ಮಾಡಿದರು.

ವಿಷಯ ಏನೆಂದರೆ ರಾಜ್ಯದ ಪ್ರಮುಖ ಕೈಗಾರಿಕಾ ಸಂಸ್ಥೆಯಾದ ಎಫ್‌ಕೆಸಿಸಿಐನಿಂದ ಶುಕ್ರವಾರ ಅರಮನೆ ಮೈದಾನದಲ್ಲಿ ಗ್ಲೋಬಲ್ ಅಗ್ರಿಟೆಕ್ ಸಮ್ಮಿಟ್-2026 ಆಯೋಜಿಸಿತ್ತು. ಅದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆಯನ್ನೂ ನೀಡಿದರು. ಇನ್ನು ಕಾರ್ಯಕ್ರಮಕ್ಕೆ ಕೃಷಿ ಇಲಾಖೆ ಸಹಕಾರವನ್ನೂ ನೀಡಿತ್ತು. ಹೀಗಾಗಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರನ್ನು ಕಾರ್ಯಕ್ರಮದ ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಲಾಗಿತ್ತು. ಅವರ ಜತೆಗೆ ಮುಖ್ಯ ಭಾಷಣಕಾರರಾಗಿ ಮಾಜಿ ಸಚಿವ ಮುರುಗೇಶ್ ನಿರಾಣಿ ಅವರ ಪುತ್ರ ಉದ್ಯಮಿ ವಿಜಯ್ ನಿರಾಣಿ ಅವರನ್ನೂ ಕರೆಯಲಾಗಿತ್ತು.


ಕಾರ್ಯಕ್ರಮದ ಆರಂಭದಲ್ಲಿಯೇ ದೇಶ ಮತ್ತು ರಾಜ್ಯದ ಕೃಷಿ ಕ್ಷೇತ್ರ, ಅದರ ಅಭಿವೃದ್ಧಿ ಕುರಿತಂತೆ ಮಾತನಾಡಲು ವಿಜಯ್ ನಿರಾಣಿ ಮುಂದಾದರು. ತಮ್ಮ ಭಾಷಣ ಆರಂಭದ ವೇಳೆ ಎಲ್ಲರನ್ನೂ ಸ್ವಾಗತಿಸಲಾರಂಭಿಸಿದರು. ಎಲ್ಲರ ಹೆಸರನ್ನು ಸರಿಯಾಗಿ ಹೇಳಿದ ವಿಜಯ್ ನಿರಾಣಿ, ಎನ್.ಚಲುವರಾಯಸ್ವಾಮಿ ಹೆಸರು ಹೇಳುವ ಬದಲು ಕೃಷಿ ಸಚಿವ ಛಲವಾದಿ ನಾರಾಯಣಸ್ವಾಮಿ ಅವರೂ ಆಗಮಿಸಿದ್ದಾರೆ. ಅವರಿಗೆ ವಂದನೆಗಳು ಎಂದರು.

ವಿಜಯ್ ನಿರಾಣಿ ಹಾಗೆ ಹೇಳುತ್ತಿದ್ದಂತೆ ಚಲುವರಾಯಸ್ವಾಮಿ ಆದಿಯಾಗಿ ಎಲ್ಲರೂ ಛಲವಾದಿ ನಾರಾಯಣಸ್ವಾಮಿ ಎಲ್ಲಿ ಬಂದಿದ್ದಾರೆ ಎಂದು ಹುಡುಕಲಾರಂಭಿಸಿದರು. ಅಲ್ಲದೆ, ವೇದಿಕೆ ಎದುರಿಗಿದ್ದ ಸಭಿಕರು ವಿರೋಧ ಪಕ್ಷದವರನ್ನು ಸಚಿವರನ್ನಾಗಿ ಮಾಡಿದ್ದಾರೆ ಎಂದು ನಗಲಾರಂಭಿಸಿದರು.

• **ರಾಮಕೃಷ್ಣ ದಾಸರಿ • ಗಿರೀಶ್ ಗರಗ**

ಸಿಎಂ ಆಗುವ ಕನಸು ಹೊತ್ತು ರಾಜಕಾರಣ ಮಾಡಿದವರು ಅವರಲ್ಲ | ಜನರ ಸೇವೆಗಾಗಿ ಬದುಕನ್ನೇ ಸವೆಸಿದ ಧೀಮಂತ

ಬಿಎಸ್‌ವೈ ನಮಗೆ ತಂದೆಯಷ್ಟೇ ಅಲ್ಲ, ಆದರ್ಶ ಗುರು



ಬಿ.ವೈ. ರಾಘವೇಂದ್ರ
ಬಿಜೆಪಿ ಸಂಸದ

> ಹೆ ಕಾಯಕವೇ ಕೈಲಾಸ ಎಂದು ನಂಬಿದ ಯಡಿಯೂರಪ್ಪನವರ ಪಾಲಿಗೆ ಜನಸೇವೆಯೇ ಕಾಯಕ. 50 ವರ್ಷಗಳ ಕಾಲ ವಿಶ್ರಾಂತಿ ಎಂಬ ಪದವನ್ನೇ ಮರೆತು, ಜನರ ಸೇವೆಗಾಗಿ ಬದುಕನ್ನು ಸವೆಸಿದ್ದಾರೆ. ಅವರ ಮನದ ದೃಢತೆ ಎಂತಹದ್ದೆಂದರೆ, ಒಮ್ಮೆ ನಿಶ್ಚಯ ಮಾಡಿದರೆ ಅದು ಈಡೇರುವವರೆಗೂ ಅವರು ವಿರಮಿಸುತ್ತಲೇ ಇರಲಿಲ್ಲ.

ಬಿ.ಎಸ್. ಯಡಿಯೂರಪ್ಪನವರು ನಮಗೆ ತಂದೆಯಷ್ಟೇ ಅಲ್ಲ, ಅವರೊಬ್ಬ ಆದರ್ಶ ಗುರು, ಮಾರ್ಗದರ್ಶಕರು, ಎಲ್ಲವೂ ಆಗಿದ್ದಾರೆ. ಜೀವನದಲ್ಲಿ ಸಮಸ್ಯೆ, ಸಂಕಷ್ಟಗಳು ಎದುರಾದಾಗ ಧೃತಿಗೆಡಬಾರದು, ಕುಗ್ಗಬಾರದು, ಅಂಜಬಾರದು. ಎದುರಾಗುವ ಯಾವುದೇ ಪರಿಸ್ಥಿತಿಯನ್ನೂ ಸವಾಲಾಗಿ ಸ್ವೀಕರಿಸಿ ಮುನ್ನುಗ್ಗಬೇಕು. ಇದರ ಫಲಶೃತಿ ಒಳ್ಳೆಯದೇ ಆಗಿರುತ್ತದೆ ಎಂಬುದು ಅವರು ನಮಗೆ ಹೇಳಿಕೊಟ್ಟ ಜೀವನ ಪಾಠ. ಅವರು ನಡೆದು ಬಂದ ಹಾದಿ, ಎದುರಿಸಿದ ಕಷ್ಟಗಳನ್ನು ನಾವು ಕಣ್ಣಾರೆ ಕಂಡಿದ್ದೇವೆ.

ಜನರಿಗಾಗಿ ಜೀವನ ಅರ್ಪಣೆ

ಸಾರ್ವಜನಿಕ ಬದುಕಿನಲ್ಲಿರುವಾಗ ರಾಜಕೀಯ ದ್ವೇಷಕ್ಕಾಗಿ ಶಿಕಾರಿಪುರದಲ್ಲಿ ನಡೆದ ಮಾರಣಾಂತಿಕ ಹಲ್ಲೆ ಎಂತಹ ಹೋರಾಟಗಾರನನ್ನೂ ಧೃತಿಗೆಡಿಸಿಬಿಡುತ್ತಿತ್ತು. ಆದರೆ ನನ್ನ ತಂದೆ ಇದನ್ನು ದೇವರು ಕರುಣಿಸಿದ ಮರುಜನ್ಮ ಎಂದು ಪರಿಗಣಿಸಿ, 'ಜೀವನಪೂರ್ತಿ ಜನರಿಗಾಗಿ ನನ್ನನ್ನು ನಾನು ಸಮರ್ಪಿಸಿಕೊಳ್ಳುತ್ತೇನೆ. ಸಂಘದ ಧ್ಯೇಯ ಸಿದ್ಧಾಂತದನುಸಾರ ರಾಜಕೀಯ ಸಂಘಟನೆ ಮಾಡುತ್ತೇನೆ. ಅಣ್ಣ ಬಸವಣ್ಣ ಅವರ ಕಾಯಕ ಶ್ರೇಷ್ಠತೆಯನ್ನು ಸಾರುವ ನಿಟ್ಟಿನಲ್ಲಿ ರೈತರೂ ಸೇರಿದಂತೆ ಸರ್ವ ಸಮುದಾಯಗಳ ಏಳಿಗಾಗಿ ಹೋರಾಡುತ್ತೇನೆ' ಎಂಬ ಮಹಾಸಂಕಲ್ಪ ತೊಟ್ಟು ಇಲ್ಲಿಯವರೆಗೂ ನಡೆದು ಬಂದಿದ್ದಾರೆ. ಅವರು ನಡೆದು ಬಂದ ಈ 50 ವರ್ಷಗಳ ಸಾರ್ವಜನಿಕ ಬದುಕಿನ ಹಾದಿಯಲ್ಲಿ ಅವರು ಕುಟುಂಬ ಸೌಖ್ಯಕ್ಕೆ ಆದ್ಯತೆ ನೀಡಲಿಲ್ಲ. ಆದರೆ ನಮ್ಮ ತಾಯಿಯವರೂ ಸೇರಿದಂತೆ ಇಡೀ ಕುಟುಂಬ ಅವರ ರಾಜಕೀಯ ಬದುಕಿನ ಹೋರಾಟಗಳಿಗೆ ನೆರವಾಗುವುದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸಿ ಅವರ ನೆರಳು ಅನುಸರಿಸಿ ಸಾರ್ಥಕತೆಯನ್ನು ಪಡೆದುಕೊಂಡಿದ್ದೇವೆ.




ರೈತರು, ಬಡವರಿಗಾಗಿ ಮಿಡಿಯುವವರು

ಈ ಸಂದರ್ಭದಲ್ಲಿ ಘಟನೆಯೊಂದನ್ನು ಉಲ್ಲೇಖಿಸಬೇಕೆನಿಸುತ್ತದೆ. ನಾನಿನ್ನೂ ಆಗ ಚಿಕ್ಕ ಹುಡುಗ. ಒಮ್ಮೆ ತಂದೆಯವರು ನಮಗೆ ಜ್ಯೂಸ್ ಅಂಗಡಿಯಲ್ಲಿ ಹಣ್ಣಿನ ಜ್ಯೂಸ್ ಕೊಡಿಸಿದ್ದರು. ನಾನು ಅಭ್ಯಾಸದಂತೆ ಪೂರ್ತಿಯಾಗಿ ಕುಡಿಯದೆ ಸ್ವಲ್ಪ ಉಳಿಸಿ ಲೋಟ ವಾಪಸ್ ಇಟ್ಟೆ. ಅದನ್ನು ಗಮನಿಸಿದ ತಂದೆಯವರು, 'ಹಾಗೆ ಯಾವುದನ್ನೂ ವ್ಯರ್ಥ ಮಾಡಬೇಡ. ಪ್ರತಿಯೊಂದು ತಿನ್ನುವ ಪದಾರ್ಥದ ಹಿಂದೆ ರೈತನ ಬೆವರ ಪರಿಶ್ರಮವಿರುತ್ತದೆ. ಅದನ್ನು ಅವಮಾನಿಸಬಾರದು. ತಿನ್ನುವ ಪದಾರ್ಥಗಳಿಗೆ ಗೌರವ ಕೊಟ್ಟರೆ ರೈತನಿಗೆ ಗೌರವ ಕೊಟ್ಟಂತೆ. ಆ ಮೂಲಕ ಭೂಮಿತಾಯಿಗೆ ತೃಪ್ತ ಭಾವದಿಂದ ಕೃತಜ್ಞತೆ ಹೇಳಿದಂತೆ' ಎಂದು ಅವರು ತಿಳಿಸಿಕೊಟ್ಟರು.

ಬಡವರ ಸಮಸ್ಯೆಗಳನ್ನು ತಮ್ಮದೇ ಎನ್ನುವಂತೆ ಮನಸ್ಸಿಗೆ ಹಚ್ಚಿಕೊಂಡು ಹೆಗಲ ಮೇಲೆ ಹೊರುವ ಗುಣ ಅವರದು. ಶಿಕಾರಿಪುರದ ಬಸ್ ನಿಲ್ದಾಣದಲ್ಲಿ ನಡೆದ ಘಟನೆಯಿದು. ಬಸ್ಸಿನ ಮೇಲೆ ಲಗೇಜುಗಳನ್ನು ಇರಿಸುವ, ಕೆಳಗಿಳಿಸುವ ಹಮಾಲಿಗಳು ಹಳ್ಳಿಗಾಡಿನಿಂದ ಬಂದ ಬಡವರಿಂದ ಹೆಚ್ಚಿನ ಹಣ ಕೇಳಿ ತಗಾದೆ ಮಾಡುತ್ತಿದ್ದರು. ಈ ದೃಶ್ಯ ಕಂಡ ನಮ್ಮ ತಂದೆಯವರು ಮಧ್ಯಪ್ರವೇಶಿಸಿ, ಬಡವರಿಗೆ ಹೊರೆಯಾಗದಂತೆ ಅವರಿಗೆ ಸಹಾಯ ಮಾಡಿ ಎಂದು ವಿನಂತಿಸಿದರು. ಆದರೆ ಅವರು ಸಹಕಾರ ನೀಡಲಿಲ್ಲ. ಇದರಿಂದ ಸಿಟ್ಟಿಗೆದ್ದ ತಂದೆಯವರು ಸ್ವತಃ ಲಗೇಜ್ ಹೊತ್ತು, ಬಸ್ಸಿನ ಏಣಿಯ ಮೇಲೆ ಏರಲು ಶುರು ಮಾಡಿದರು. ಇದರಿಂದ ತಣ್ಣಗಾದ ಹಮಾಲಿಗಳು ತಂದೆಯವರನ್ನು ಕೆಳಗಿಳಿಯುವಂತೆ ವಿನಂತಿಸಿದರು. ಸಮಸ್ಯೆಗಳನ್ನು ತಲೆಯ ಮೇಲೆ ಹೊತ್ತುಕೊಂಡು ಅದಕ್ಕೊಂದು ಪರಿಹಾರ ಹುಡುಕುವುದು ಯಡಿಯೂರಪ್ಪನವರ ಹೋರಾಟದ ಗುರಿ ಮತ್ತು ಛಲ ಎಂಬುದಕ್ಕೆ ಈ ಘಟನೆಯನ್ನು ನಾನು ನೆನಪಿಸಬೇಕಾಯಿತು.

ಹೋರಾಟ,ಪಾದಯಾತ್ರೆಯ ಸಂದರ್ಭದಲ್ಲಿ ನನ್ನ ತಂದೆಯವರು, ಕಾರ್ಯಕರ್ತರು ಹಾಗೂ ಹಿತೈಷಿಗಳು ಆಹ್ವಾನಿಸಿದರೆ ಅವರ ಮನೆಗಳಿಗೆ ಹೋಗಿ ತಂಗುತ್ತಿದ್ದರು. ಈಗಿನಂತೆ ಆಗ ಗೀಸರ್, ಬಾಯ್ಲರ್‌ಗಳು ಇರುತ್ತಿರಲಿಲ್ಲ. ಬೆಳಿಗ್ಗೆ 5 ಗಂಟೆಗೆ ಎದ್ದು ಅವರೇ ನೀರುಕಾಯಿಸಿ, ಸ್ನಾನ ಇತ್ಯಾದಿಯನ್ನು ಮುಗಿಸಿ ಅತಿಥೇಯರಿಗೆ ಅನಗತ್ಯ ತೊಂದರೆಯಾಗಬಾರದೆಂದು ಕಾಳಜಿ ವಹಿಸುತ್ತಿದ್ದರು.



ರಾಜಕೀಯ ಎಂದರೆ ಜನಸೇವೆ

ಜನರ ಒತ್ತಾಯದಿಂದಾಗಿ ನಾನು ಮೊದಲ ಬಾರಿಗೆ ಚುನಾವಣೆಗೆ ನಿಲ್ಲಬೇಕಾಗಿ ಬಂದ ಸಂದರ್ಭದಲ್ಲಿ ನಮ್ಮ ತಂದೆ ಹೇಳಿದ್ದು ಇಷ್ಟೇ, 'ಜನಸೇವೆಯಲ್ಲಿ ಆಸಕ್ತಿಯಿದ್ದರೆ ಮಾತ್ರ ರಾಜಕೀಯಕ್ಕೆ ಬಾ. ರಾಜಕೀಯ ಮತ್ತು ಅಧಿಕಾರವು ಜನಸೇವೆ ಹಾಗೂ ನಾಡನ್ನು ಕಟ್ಟುವ ಮಹತ್ವದ ಉದ್ದೇಶಕ್ಕೆ ಮೀಸಲಾಗಿರಬೇಕು. ಒಂದೊಂದು ದಿನವೂ ರಾಜಕೀಯ ಕ್ಷೇತ್ರದಲ್ಲಿ ಅಮೂಲ್ಯವಾದದ್ದು. ಅದರಲ್ಲೂ ಜನಪ್ರತಿನಿಧಿ ಆಗಿ ಕೆಲಸ ಮಾಡುವಾಗ ಪ್ರತಿ ನಿಮಿಷವನ್ನೂ ನಾವು ಯೋಜಿತವಾಗಿ ಉಪಯೋಗಿಸಬೇಕು. ಬಹುಪಾಲು ಸಮಯವನ್ನು ಜನರಿಗಾಗಿ ಮತ್ತು ಕ್ಷೇತ್ರದ ಅಭಿವೃದ್ಧಿಗಾಗಿ ಮೀಸಲಿಡಬೇಕು. ಆಗ ಮಾತ್ರ ಪ್ರಜಾಪ್ರಭುತ್ವದ ಉದ್ದೇಶ, ಸಂವಿಧಾನದ ಆಶಯ, ಜನರ ನಿರೀಕ್ಷೆ-ಅಪೇಕ್ಷೆಗಳನ್ನು ತಲುಪಲು ಸಾಧ್ಯ' ಎಂಬ ಉಪದೇಶ ನೀಡಿದರು. ಅದನ್ನು ಜೀವನದ ವೇದವಾಕ್ಯ ಎಂದು ಪರಿಗಣಿಸಿರುವ ನಾನು ಹಾಗೂ ನನ್ನ ಸಹೋದರ ವಿಜಯೇಂದ್ರ ಇಂದಿಗೂ ಅವರ ನೆರಳನ್ನು ಅನುಸರಿಸಿ, ಅವರು ನಡೆದ ಹಾದಿಯಲ್ಲೇ ಸಾಗುತ್ತಿದ್ದೇವೆ.

ಇಡೀ ರಾಜ್ಯಕ್ಕೆ ಮಾದರಿ ಎನಿಸುವ ಸುಸಜ್ಜಿತ ವಿಮಾನ ನಿಲ್ದಾಣವೊಂದು ಶಿವಮೊಗ್ಗ ನಗರಕ್ಕೆ ಬರಬೇಕು ಎಂಬ ಜನರ ಅಪೇಕ್ಷೆಯನ್ನು ಈಡೇರಿಸಿದ ಸಂದರ್ಭ ಮತ್ತು ಪ್ರಧಾನಿ ನರೇಂದ್ರ ಮೋದಿಯವರಿಂದಲೇ ಅದನ್ನು ಲೋಕಾರ್ಪಣೆಗೊಳಿಸಬೇಕೆಂಬ ನನ್ನ ಸಂಕಲ್ಪಕ್ಕೆ ಪ್ರೇರಣೆಯಾಗಿ ನಿಂತವರು ನನ್ನ ತಂದೆ ಬಿಎಸ್‌ವೈ ಅವರು.

ಬಹುವರ್ಷಗಳಿಂದ ಶ್ರೀ ಕ್ಷೇತ್ರ ಸಿಗಂದೂರು ಚೌಡೇಶ್ವರಿ ದೇವಸ್ಥಾನದ ದರ್ಶನಕ್ಕೆ ಲಾಂಚ್‌ಅನ್ನು ಅವಲಂಬಿಸಿದ್ದ ಜನರ ಸೇತುವೆ ಹೊಂದುವ ಬಹುದಿನಗಳ ಬೇಡಿಕೆಯನ್ನು ಈಡೇರಿಸುವ ನಿಟ್ಟಿನಲ್ಲಿ ದೇಶದಲ್ಲೇ 2ನೇ ದೊಡ್ಡ ಸೇತುವೆ ಎಂಬ ಖ್ಯಾತಿ ಪಡೆದ 'ಸಿಗಂದೂರು ಸೇತುವೆ' ನಿರ್ಮಾಣದ ನನ್ನ ಭಗೀರಥ ಸಫಲ ಪ್ರಯತ್ನದ ಹಿಂದೆ ಪ್ರೇರಣೆಯಾಗಿದ್ದುದು ಕೂಡ ಅಪ್ಪಾಜಿಯವರ 'ಹಿಡಿದ ಕಾರ್ಯ ಸಾಧಿಸುವರೆಗೂ ಬಿಡದ ಛಲದ ಸಂಕಲ್ಪ.

ಬಿಎಸ್‌ವೈ ನಡೆದ ಹಾದಿ

ಆರ್‌ಎಸ್‌ಎಸ್ ಆದರ್ಶದ ನೆರಳಿನಲ್ಲಿ ಬೆಳೆದ ಯಡಿಯೂರಪ್ಪ ಅವರು ಜನಸಂಘ, ಆನಂತರದ ಭಾರತೀಯ ಜನತಾ ಪಾರ್ಟಿಯನ್ನು ಕರ್ನಾಟಕದಲ್ಲಿ ಕಟ್ಟಿ ಬೆಳೆಸಬೇಕೆಂಬ ಸಂಕಲ್ಪ ತೊಟ್ಟು ಮುನ್ನಡೆದವರು. ಖಾತೆಯೇ ತೆರೆಯಲಾಗದ ಸ್ಥಿತಿಯಲ್ಲಿದ್ದ ಪಕ್ಷವೊಂದು ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುತ್ತದೆಂಬ ನಿರೀಕ್ಷೆಯಾಗಲೀ, ತಾನು ಮುಖ್ಯಮಂತ್ರಿಯಾಗುತ್ತೇನೆಂಬ ಕನಸು ಹೊತ್ತಾಗಲೀ ಅವರು ರಾಜಕಾರಣ ಮಾಡಲಿಲ್ಲ. ಅವರ ಮನಸಲ್ಲಿದ್ದುದು ಭಾರತೀಯ ಜನತಾ ಪಾರ್ಟಿಯನ್ನು(ಬಿಜೆಪಿ) ರಾಜ್ಯದಲ್ಲಿ ವಿಸ್ತರಿಸಬೇಕು. ಮುಗಿಲೆತ್ತರಕ್ಕೆ ಬೆಳೆಸಬೇಕು ಎಂಬುದು.

ಅವರ ಸಿದ್ಧಾಂತ ತತ್ವಗಳು ರಾಷ್ಟ್ರೀಯ ಕಾರ್ಯಕ್ರಮಗಳ ಜತೆಜತೆಗೇ ಕರುನಾಡಿನ ಸರ್ವತೋಮುಖ ಬೆಳವಣಿಗೆ ಹಾಗೂ ರೈತರು, ಮಹಿಳೆಯರು, ಶ್ರಮಜೀವಿಗಳ ಅಭಿವೃದ್ಧಿಯ ಕಡೆಗೆ ಎಂಬುದನ್ನು ನಿರೂಪಿಸುವ ನಿಟ್ಟಿನಲ್ಲಿ ಅವರ ಇಡೀ ಜೀವನವನ್ನು ಸಂಘಟನೆ ಹಾಗೂ ಹೋರಾಟಕ್ಕಾಗಿ ಸಮರ್ಪಿಸಿಕೊಂಡರು.

ವಿಶ್ರಾಂತಿ ಮರೆತು ಜನಸೇವೆ

ಕಾಯಕವೇ ಕೈಲಾಸ ಎಂದು ನಂಬಿದ ಯಡಿಯೂರಪ್ಪನವರ ಪಾಲಿಗೆ ಜನಸೇವೆಯೇ ಕಾಯಕ. 50 ವರ್ಷಗಳ ಕಾಲ ವಿಶ್ರಾಂತಿ ಎಂಬ ಪದವನ್ನೇ ಮರೆತು, ಜನರ ಸೇವೆಗಾಗಿ ಬದುಕನ್ನು ಸವೆಸಿದ್ದಾರೆ. ಅವರ ಮನದ ಧೃಡತೆ ಎಂತಹದ್ದೆಂದರೆ, ಒಮ್ಮೆ ನಿಶ್ಚಯ ಮಾಡಿದರೆ ಅದು ಈಡೇರುವವರೆಗೂ ಅವರು ವಿರಮಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ರಾಜ್ಯದಲ್ಲಿ 4 ಬಾರಿ ಮುಖ್ಯಮಂತ್ರಿ ಆಗಿ ಪ್ರಮಾಣವಚನ ಸ್ವೀಕರಿಸಿದರೂ ಅವರ ಕನಸು, ಸಂಕಲ್ಪ ಹಾಗೂ ಜನಪರ ಯೋಜನೆಗಳನ್ನು ಪರಿಪೂರ್ಣಗೊಳಿಸಲು ಪರಿಪೂರ್ಣ ಅವಧಿ ಲಭಿಸಲಿಲ್ಲ ಎನ್ನುವುದು ಅವರ ಆಡಳಿತವನ್ನು ಹತ್ತಿರದಿಂದ ನೋಡಿದ ಅನೇಕ ಜನರ ಕೊರಗಾಯಿತು.

ಜನಪರ ಹೋರಾಟದ ವಿವಿ

ಯಡಿಯೂರಪ್ಪನವರು ಧರಿಸಿದ 'ಹಸಿರು ಶಾಲು' ಕೇವಲ ಬಟ್ಟೆಯಲ್ಲ. ಅದು ನಾಡಿನ ಅನ್ನದಾತರ ಭರವಸೆಯ ಸಂಕೇತ ಎಂದು ದೇಶಕ್ಕೆ ಸಾರುವ ನಿಟ್ಟಿನಲ್ಲಿ ಅವರು ಮಂಡಿಸಿದ 'ಕೃಷಿ ಬಜೆಟ್' ಹಸಿರು ಕ್ರಾಂತಿಯ ಇತಿಹಾಸದ ಮೈಲುಗಲ್ಲಾಗಿದೆ. ರೈತನ ಶ್ರೇಷ್ಠತೆಯನ್ನು ಸಾರುವ ಈ ರೈತಗೀತೆಗೆ ಸರ್ಕಾರದ ಮಾನ್ಯತೆ ದೊರಕಿಸಿಕೊಟ್ಟು ಪ್ರತಿ ಕಾರ್ಯಕ್ರಮದಲ್ಲೂ ಅದು ರೈತಗೀತೆಯಾಗಿ ಹಾಡಬೇಕು ಎಂಬ ಆದೇಶ ಹೊರಡಿಸಿ, ಕುವೆಂಪು ಅವರ ಕಲ್ಪನೆಯ 'ನೇಗಿಲ ಯೋಗಿ'ಗೆ ಬಹುದೊಡ್ಡ ಗೌರವ ತಂದುಕೊಟ್ಟವರು ಅವರು.

ಭಾಗ್ಯಲಕ್ಷ್ಮೀ ಯೋಜನೆ, ಸಂಧ್ಯಾಸುರಕ್ಷಾ ಯೋಜನೆ ಎಲ್ಲವೂ ಯಡಿಯೂರಪ್ಪನವರ ಲಿಂಗಸಮಾನತೆ, ಕಾಳಜಿಯನ್ನು ಸಾರುವುದರ ಜೊತೆಗೆ ಮಾತೃ ಮಮತೆಯನ್ನು ಸಾಕ್ಷೀಕರಿಸುತ್ತದೆ. ದೀನ-ದಲಿತರ ಧ್ವನಿಯಾಗಿ, ಶೋಷಿತರ ಆಶಾಕಿರಣವಾಗಿ, ರೈತರ ರಕ್ಷಕನಾಗಿ, ಹೆಣ್ಣುಮಕ್ಕಳ ಹಿತೈಷಿಯಾಗಿ, ಜನರ ಪಾಲಿನ ನೆಚ್ಚಿನ ಜನನಾಯಕನಾಗಿ 50 ವರ್ಷಗಳ ಕಾಲ ಯಡಿಯೂರಪ್ಪನವರು ನಡೆದು ಬಂದ ಹೋರಾಟದ ಹಾದಿ, ಜನಪರ ಹೋರಾಟದ ಒಂದು ವಿಶ್ವವಿದ್ಯಾಲಯ ಎಂದು ಬಣ್ಣಿಸಿದರೆ ಉತ್ಪ್ರೇಕ್ಷೆಯಾಗಲಾರದು.

ದಕ್ಷಿಣದಲ್ಲಿ ಬಿಜೆಪಿಗೆ ಹೆಬ್ಬಾಗಿಲು ತೆರೆದುಕೊಡುವಲ್ಲಿ ತಮ್ಮ ಜೊತೆಗಿದ್ದ ದಿ. ಅನಂತ ಕುಮಾರ್ ಸೇರಿದಂತೆ ಅನೇಕ ಹಿರಿಯರನ್ನು ಕಟ್ಟಿಕೊಂಡು ಅವರು ಪಕ್ಷ ಸಂಘಟಿಸುವಲ್ಲಿ ತೋರಿದ ಧೀಮಂತಿಕೆ ತಪಸ್ವೀ ಸಂಘಟನಾಕಾರ ಎಂಬುದನ್ನು ಸಾಬೀತುಪಡಿಸಿದೆ. ಯಡಿಯೂರಪ್ಪನವರು ಈ ಕ್ಷಣಕ್ಕೂ, ಮುಂದೆಯೂ ಕಾರ್ಯಕರ್ತರಿಗೆ, ಸಂಘಟನೆಗೆ ರಾಜ್ಯದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಮಿಡಿಯುವ ಒಂದು ಪ್ರೇರಣಾ ಶಕ್ತಿಯಾಗಿ ನಮ್ಮ ಮುಂದೆ ಇರುತ್ತಾರೆ. ಹೋರಾಟ ಅವರ ಉಸಿರಿರುವವರೆಗೂ ಜೊತೆಯಲ್ಲಿಯೇ ಸಾಗಿ ಮುನ್ನಡೆಯಬೇಕೆಂಬುದು ಅವರ ಅಚಲ ಸಂಕಲ್ಪವಾಗಿದೆ. ಅದು ಜನರ ನಿರೀಕ್ಷೆಯೂ ಹೌದು. ಅವರು ನಮ್ಮ ಪೂಜ್ಯ ತಂದೆ ಎನ್ನುವುದಕ್ಕಿಂತ ಅವರು ಜನರ ಮಡಿಲಿನ ಪ್ರೀತಿಯಲ್ಲಿ ತೋಯ್ದ 'ಜನನಾಯಕ' ಎಂಬುದು ಮಕ್ಕಳಾದ ನಮಗೆ ಅತ್ಯಂತ ಹೆಮ್ಮೆ. ನಮ್ಮ ಸಾರ್ಥಕ ಬದುಕಿನ ಆದರ್ಶದ ಬೆಳಕಾಗಿ ಸದಾ ಅವರು ಪ್ರಜ್ವಲಿಸಲಿ ಎಂಬುದೇ ನಮ್ಮ ಹಾರೈಕೆ ಹಾಗೂ ದೇವರಲ್ಲಿ ಪ್ರಾರ್ಥನೆಯಾಗಿದೆ.

ರಾಜೇಗೌಡಗಿಂತ ಜೀವರಾಜ್‌ಗೆ 52 ಮತಗಳ ಲೀಡ್!

ಮೊದಲ ಪುಟದಿಂದ

ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡರಿಗೆ 569 ಮತಗಳು ಲಭಿಸಿದ್ದವು ಎಂದರು.

ಅಂದರೆ, ರಾಜೇಗೌಡರಿಗಿಂತ ಜೀವರಾಜ್ ಅವರು123ಮತಗಳಿಂದಮುನ್ನಡೆಯಲ್ಲಿದ್ದರು. ಆದರೆ ರಾಜೇಗೌಡರು ಇವಿಎಂನಲ್ಲಿ 324 ಮತಗಳ ಮುನ್ನಡೆ ಗಳಿಸಿದ್ದರು. ಇವಿಎಂ-ಅಂಚೆಮತ ಎರಡನ್ನೂ ಪರಿಗಣಿಸಿದಾಗ 201 ಮತಗಳೊಂದಿಗೆ ಗೆಲುವು ಸಾಧಿಸಿದ್ದರು.

ಆದರೆ, ಶನಿವಾರ ನಡೆದ ಪರಿಶೀಲನೆ ಮತ್ತು ಮರು ಎಣಿಕೆ ಬಳಿಕ ಜೀವರಾಜ್ ಅವರ ಅಂಚೆ ಮತಗಳು 690 (2 ಇಳಿಕೆ) ಆಗಿದ್ದರೆ, ರಾಜೇಗೌಡ ಅವರ ಮತಗಳು 314ಕ್ಕೆ ಇಳಿದಿವೆ. ರಾಜೇಗೌಡ ಅವರಿಗೆ 255 ಮತಗಳು ಕಡಿಮೆಯಾಗಿವೆ. ಅಂದರೆ, ಇವಿಎಂ- ಅಂಚೆಮತ ಎರಡನ್ನೂ ಗಣನೆಗೆ ತೆಗೆದುಕೊಂಡರೆ ಜೀವರಾಜ್ ಅವರಿಗೆ 52 ಮತಗಳ ಮುನ್ನಡೆ ಸಿಕ್ಕಿದೆ.

> **ಹೈಕೋರ್ಟ್ ಸೂಚನೆಯಂತೆ ಅಂಚೆ ಮತ ಪತ್ರ ಮರು ಎಣಿಕೆ ಮಾಡಲಾಗಿದೆ. ಇವಿಎಂ ಮತ್ತು ಅಂಚೆ ಮತ ಎರಡನ್ನೂ ಕೂಡಿಸಿ ಫಲಿತಾಂಶ ಪ್ರಕಟಿಸಬೇಕಿದೆ. ಹೀಗಾಗಿ, ಫಲಿತಾಂಶ ಪ್ರಕಟಿಸಲು ಅವಕಾಶವಿಲ್ಲ.**
> • **ಗೌರವ್ ಕುಮಾರ್‌ಶೆಟ್ಟಿ** ಚುನಾವಣಾಧಿಕಾರಿ

> **ತಿರಸ್ಕೃತ ಮತ ಪರಿಶೀಲನೆ ಹಾಗೂ ಮರು ಎಣಿಕೆಯಲ್ಲಿ ಬಹುಮತ ಸಿಕ್ಕಿದೆ. ಚುನಾವಣಾಧಿಕಾರಿ ಫಲಿತಾಂಶ ಘೋಷಣೆ ಮಾಡಿ ಪ್ರಮಾಣ ಪತ್ರ ನೀಡುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆ. ಆದರೆ ನೀಡಿಲ್ಲ. ನನ್ನ ಹೋರಾಟಕ್ಕೆ ಗೆಲುವು ಸಿಕ್ಕಿದೆ.**
> • **ಜೀವರಾಜ್** ಬಿಜೆಪಿ ಅಭ್ಯರ್ಥಿ

> **ಜೀವರಾಜ್ ವಿರುದ್ಧ ಮತಗಳ ಟ್ಯಾಂಪರಿಂಗ್ ದೂರು ದಾಖಲಿಸುತ್ತೇನೆ. 2023ರ ಮತ ಎಣಿಕೆ ವೇಳೆ ಎಲ್ಲ ಪಕ್ಷಗಳ ಏಜೆಂಟ್‌ಗಳ ಸಮ್ಮುಖದಲ್ಲಿ ಈ ಮತಪತ್ರಗಳನ್ನು ಸಿಂಧು ಎಂದು ಪರಿಗಣಿಸಲಾಗಿತ್ತು. ಈಗ ಅದೇ ಮತ ಅಸಿಂಧುಗೊಳಿಸಲಾಗಿದೆ.**
> • **ಟಿ.ಡಿ.ರಾಜೇಗೌಡ** ಹಾಲಿ ಶಾಸಕ

16 ತಾಸು ಮತ ಎಣಿಕೆ: 2023ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ.ಡಿ.ರಾಜೇಗೌಡ ಅವರು ಬಿಜೆಪಿಯ ಡಿ.ಎನ್.ಜೀವರಾಜ್ ವಿರುದ್ಧ ಕೇವಲ 201 ಮತಗಳ ಅಲ್ಪ ಅಂತರದಿಂದ ಜಯಗಳಿಸಿದ್ದರು.ಇದನ್ನು ಪ್ರಶ್ನಿಸಿ ಜೀವರಾಜ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಹೈಕೋರ್ಟ್, ಏ.6 ರಂದು ಅಂಚೆ ಮತಗಳ ಮರು ಎಣಿಕೆಗೆ ಆದೇಶಿಸಿತ್ತು.

ಹೈಕೋರ್ಟ್ ಆದೇಶದಂತೆ ಕ್ಷೇತ್ರದ 1,822 ಅಂಚೆ ಮತ ಪತ್ರಗಳ ಪರಿಶೀಲನೆ ಮತ್ತು ಮರು ಎಣಿಕೆ ನಡೆಸಲಾಯಿತು. ಶನಿವಾರ ಬೆಳಗ್ಗೆ 7.30ಕ್ಕೆ ಸ್ಟ್ರಾಂಗ್ ರೂಂ ಓಪನ್ ಮಾಡಿ, 8.30ರ ಸುಮಾರಿಗೆ ಎಣಿಕಾ ಕೇಂದ್ರಕ್ಕೆ ಮತ ಪತ್ರ ತಂದು, 9 ಗಂಟೆಗೆ ಮತ ಎಣಿಕೆ ಆರಂಭಿಸಲಾಯಿತು. ಎಣಿಕೆ ಕಾರ್ಯ, ಶುರುವಿನಿಂದ ಅಂತ್ಯದವರೆಗೂ ಹಲವು ಗೊಂದಲ, ಹೈಡ್ರಾಮಾಕ್ಕೆ ಸಾಕ್ಷಿಯಾಯಿತು. ಶನಿವಾರ ತಡರಾತ್ರಿ 1.30ರ ಸುಮಾರಿಗೆ ಎಣಿಕಾ ಕಾರ್ಯ ಮುಕ್ತಾಯವಾಗಿ, ರಾತ್ರಿ 2 ಗಂಟೆ ಸುಮಾರಿಗೆ ಅಂಚೆ ಮತಪತ್ರಗಳನ್ನು ಸ್ಟ್ರಾಂಗ್ ರೂಂಗೆ ಸೇರಿಸಲಾಯಿತು.

279 ತಿರಸ್ಕೃತ ಅಂಚೆ ಮತ ಪೈಕಿ 12 ನಾಪತ್ತೆ: ತಿರಸ್ಕೃತ ಮತಗಳ ಪುನರ್ ಪರಿಶೀಲನೆ ಮಾಡಿ, ಮಾನ್ಯಗೊಂಡ ಮತಗಳ ಮರು ಎಣಿಕೆ ಮಾಡಿ ಎಂದು ಕೋರ್ಟ್ ಸೂಚಿಸಿತ್ತು. ಆದರೆ, ತಿರಸ್ಕೃತಗೊಂಡ 279 ಮತಗಳಲ್ಲಿ 12 ಮತಗಳು ಲಭ್ಯವಾಗಿಲ್ಲ. ಸಿಬ್ಬಂದಿ ಸಾಕಷ್ಟು ಹುಡುಕಾಟ ನಡೆಸಿದರೂ ಸಿಕ್ಕಿಲ್ಲ. ಆ 12 ಮತಪತ್ರಗಳು ಎಲ್ಲಿ ಹೋಗಿವೆ ಎಂಬುದು ಅಧಿಕಾರಿಗಳಿಗೆ ಯಕ್ಷ ಪ್ರಶ್ನೆಯಾಗಿದೆ. ಕೇವಲ 267 ತಿರಸ್ಕೃತ ಮತಪತ್ರಗಳು ಸಿಕ್ಕಿವೆ. ಉಳಿದಂತೆ 1,543 ಮತ ಪತ್ರಗಳ ಮರು ಎಣಿಕೆ ಮಾಡಲಾಗಿದೆ ಎಂದು ಗೌರವ್ ಕುಮಾರ್‌ಶೆಟ್ಟಿ ಮಾಹಿತಿ ನೀಡಿದ್ದಾರೆ.

Editor: RAVI HEGDE, Printed and Published by **B.V. MALLIKARJUNAIAH** on behalf of Kannada Prabha Publications Ltd., No. 4-6-548/3, Pramod Towers, 1st floor, Karangalapady, Mangalore-575 003, Printed at Manipal Media Network Ltd., Udayavani Building, Press Corner, Manipal-576 104. **Registered No. KA/BGGPO/2559/10-12**

Mangalore
Vol.26, No. 123
RNI Reg.No.KARKAN/2001/4073

ಸುದ್ದಿ ಸಿಂಚನ

6 ವರ್ಷದೊಳಗಿನವರಿಗಷ್ಟೆ ಹೊಸ ಆಧಾರ್: ಇಂದು ಸುಪ್ರೀಂನಲ್ಲಿ ವಿಚಾರಣೆ

ನವದೆಹಲಿ: 6 ವರ್ಷದವರೆಗಿನ ಮಕ್ಕಳಿಗಷ್ಟೇ ಹೊಸದಾಗಿ ಆಧಾರ್ ಕಾರ್ಡ್ ನೀಡಬೇಕು, ಒಳನುಸುಳುಕೋರರು ಭಾರತೀಯ ಪ್ರಜೆಗಳಾಗಿ ಬಿಂಬಿಸಿಕೊಳ್ಳುವುದನ್ನು ತಡೆಯಲು ಹದಿಹರೆಯದವರು ಮತ್ತು ವಯಸ್ಕರಿಗೆ ಆಧಾರ್ ಕಾರ್ಡ್ ವಿತರಣೆ ವೇಳೆ ಕಠಿಣ ನಿಯಮಾವಳಿಗಳನ್ನು ರೂಪಿಸಬೇಕು ಎಂದು ಕೋರಿ ಸಲ್ಲಿಕೆಯಾಗಿರುವ ಮಹತ್ವದ ಅರ್ಜಿ ಸೋಮವಾರ ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆಗೆ ಬರಲಿದೆ. ವಕೀಲ ಅಶ್ವಿನಿ ಉಪಾಧ್ಯಾಯ ಅರ್ಜಿ ಸಲ್ಲಿಸಿದ್ದಾರೆ.

ಪಾಕಿಸ್ತಾನಿ ನಾಗರಿಕ ಸೇವೆಗೆ ಇಬ್ಬರು ಹಿಂದೂಗಳ ನೇಮಕ: ಬಲು ಅಪರೂಪ

ಇಸ್ಲಾಮಾಬಾದ್: ಪಾಕಿಸ್ತಾನದ ಅಲ್ಪಸಂಖ್ಯಾತ ಹಿಂದೂ ಸಮುದಾಯದ ಯುವಕರಿಬ್ಬರು ಪಾಕ್‌ನ ಕೇಂದ್ರ ನಾಗರಿಕ ಸೇವಾ ಆಯೋಗದ (ಎಫ್‌ಪಿಎಸ್‌ಸಿ) ಹುದ್ದೆಗಳಿಗೆ ಆಯ್ಕೆಯಾಗಿದ್ದಾರೆ. ಸಿಂಧ್ ಪ್ರಾಂತ್ಯದ ಜೀವನ್ ರೆಬಾರಿ ಮತ್ತು ಖೇಮ್ ಚಂದ್ ಜಂದೋರಾ ಇತ್ತೀಚೆಗೆ ಸೆಂಟ್ರಲ್ ಸುಪೀರಿಯರ್ ಸರ್ವೀಸಸ್‌ಗೆ (ಸಿಎಸ್‌ಎಸ್) ಆಯ್ಕೆಯಾದವರು. ಇಬ್ಬರೂ ಬಡ ಹಿನ್ನೆಲೆಯಲ್ಲಿ ಬಂದವರಾಗಿದ್ದು, ಕಷ್ಟಪಟ್ಟು ಓದಿ ಈ ಸಾಧನೆ ಮಾಡಿದ್ದಾರೆ. ಭಾರತದ ಐಎಎಸ್ ಹುದ್ದೆಗಳ ಮಾದರಿಯ ಪಾಕ್ ನಾಗರಿಕ ಸೇವೆಯಲ್ಲಿ ಅಲ್ಪಸಂಖ್ಯಾತರ ಪ್ರಾತಿನಿಧ್ಯ ತೀರಾ ಕಡಿಮೆ. ಇದರ ನಡುವೆಯೂ ಬಡ ಹಿನ್ನೆಲೆಯಲ್ಲಿ ಬಂದ ಈ ಯುವಕರ ಸಾಧನೆ ಎಲ್ಲರಿಗೂ ಸ್ಫೂರ್ತಿಯಾಗಿದೆ. ಪಾಕಿಸ್ತಾನದಲ್ಲಿ ಈಗ ಕೇವಲ 38.8 ಲಕ್ಷ ಹಿಂದೂಗಳಷ್ಟೇ ಉಳಿದಿದ್ದಾರೆ.

ಸದ್ಭಾವ ಯಾತ್ರೆಗೆ ನಿತೀಶ್ ಪುತ್ರ ನಿಶಾಂತ್ ಚಾಲನೆ

ಪಟನಾ: ಬಿಹಾರದ ನಿರ್ಗಮಿತ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಉತ್ತರಾಧಿಕಾರಿ ಎಂದೇ ಬಿಂಬಿತರಾಗಿರುವ ಅವರ ಪುತ್ರ ನಿಶಾಂತ್ ಕುಮಾರ್ ಅವರು ಪಶ್ಚಿಮ ಚಂಪಾರಣ್ಯ ಜಿಲ್ಲೆಯ ವಾಲ್ಮೀಕಿ ನಗರದಿಂದ ಭಾನುವಾರ ಸದ್ಭಾವ ಯಾತ್ರೆ ಆರಂಭಿಸಿದ್ದಾರೆ. ನಿಶಾಂತ್‌ಗೆ ಮುಂದೆ ಡಿಸಿಎಂ ಪಟ್ಟ ಸಿಗಬಹುದು ಎಂಬ ಗುಸುಗುಸು ನಡುವೆಯೇ ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕರನ್ನು ತಲುಪುವ ಭಾಗವಾಗಿ ಅವರು ಈ ಯಾತ್ರೆಗೆ ಚಾಲನೆ ನೀಡಿದ್ದಾರೆ.



ಹಜ್ ವಿಮಾನ ಪ್ರಯಾಣ ದರ 10,000 ರು. ಏರಿಕೆ: ಕೈ ಕಿಡಿ, ಕೇಂದ್ರ ಸಮರ್ಥನೆ

ನವದೆಹಲಿ: ಹಜ್ ಯಾತ್ರೆಯ ವಿಮಾನ ದರವನ್ನು 10 ಸಾವಿರ ರು.ನಷ್ಟು ಹೆಚ್ಚಿಸಿ ಭಾರತೀಯ ಹಜ್ ಕಮಿಟಿ ಹೊರಡಿಸಿದ ಸುತ್ತೋಲೆಗೆ ಕಾಂಗ್ರೆಸ್ ಕಿಡಿಕಾರಿದ್ದು, ಕೂಡಲೇ ಹಿಂಪಡೆಯುವಂತೆ ಒತ್ತಾಯಿಸಿದೆ. ಮೋದಿ ಸರ್ಕಾರವು ಹಜ್ ಧಾರ್ಮಿಕ ಪ್ರವಾಸದ ವೆಚ್ಚವನ್ನು ಜನಸಾಮಾನ್ಯ ಮುಸ್ಲಿಂ ಕುಟುಂಬಗಳ ಕೈಗೆಟುಕದ ರೀತಿ ಹೆಚ್ಚಿಸಿದೆ ಎಂದು ಆರೋಪಿಸಿದೆ. ವೈಮಾನಿಕ ಇಂಧನ ದರ ಭಾರೀ ಏರಿಕೆಯಿಂದಾಗಿ ಭಾರತೀಯ ಹಜ್ ಕಮಿಟಿಯು ಹಜ್ ವಿಮಾನ ಪ್ರಯಾಣ ದರವನ್ನು 10 ಸಾವಿರ ರು.ನಷ್ಟು ಹೆಚ್ಚಿಸಿದೆ. ಸಾಕಷ್ಟು ಸಮಾಲೋಚನೆ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹಜ್ ಕಮಿಟಿ ಸ್ಪಷ್ಟನೆ ನೀಡಿದೆ. ಈ ನಡುವೆ, ಕೇಂದ್ರ ಸಚಿವ ಕಿರಣ್ ರಿಜಿಜು ಸ್ಪಷ್ಟನೆ ನೀಡಿ, 'ಏರ್‌ಲೈನ್ಸ್ 40 ಸಾವಿರ ರು. ಹೆಚ್ಚಿಸಲು ಕೋರಿದ್ದವು. ಆದರೆ ಸರ್ಕಾರ ಚೌಕಾಶಿ ಮಾಡಿ 10 ಸಾವಿರ ರು.ಗೆ ತಂದಿತು. ಈ ಮೂಲಕ ಯಾತ್ರಿಕರಿಗೆ ಆಗುವ ಹೊರೆ ತಪ್ಪಿಸಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

ಪ್ಯಾಡ್‌ಮ್ಯಾನ್ ಖ್ಯಾತಿಯ ಅರುಣಾಚಲಂ ನೊಬೆಲ್ ಶಾಂತಿಗೆ ನಾಮಾಂಕಿತ?

ಚೆನ್ನೈ: 'ಪ್ಯಾಡ್‌ಮ್ಯಾನ್' ಎಂದೇ ಪ್ರಸಿದ್ಧರಾಗಿರುವ ಹಾಗೂ ಅಕ್ಷಯ ಕುಮಾರ್ ಅವರ 'ಪ್ಯಾಡ್‌ಮ್ಯಾನ್' ಚಿತ್ರಕ್ಕೆ ಸ್ಫೂರ್ತಿ ಆಗಿರುವ ಸಾಮಾಜ ಸೇವಕ ಅರುಣಾಚಲಂ ಮುರುಗನಾಥಂ, ತಾನು 2026ರ ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದೇನೆ ಎಂದಿದ್ದಾರೆ. ಮುರುಗನಾಥಂ ಕಡಿಮೆ ಬೆಲೆಯಲ್ಲಿ ಸ್ಯಾನಿಟರಿ ಪ್ಯಾಡ್ ವಿತರಿಸಿ ಪ್ರಸಿದ್ಧಿ ಪಡೆದಿದ್ದರು. 2026ರ ನೊಬೆಲ್ ಶಾಂತಿ ಪ್ರಶಸ್ತಿಗೆ 287 ಜನ ನಾಮನಿರ್ದೇಶನಗೊಂಡಿದ್ದಾರೆ. ಅದರಲ್ಲಿ 208 ವ್ಯಕ್ತಿ, 79 ಸಂಸ್ಥೆಗಳಿವೆ ಎಂದು ನೊಬೆಲ್ ವೆಬ್‌ಸೈಟ್ ತಿಳಿಸಿದೆ.



ಪಂಚರಾಜ್ಯ ಎಲೆಕ್ಷನ್‌ಗೆ ₹243 ಕೋಟಿ ಬೆಟ್ಟಿಂಗ್!

ತ.ನಾಡಲ್ಲಿ ಅತಿ ಹೆಚ್ಚು ₹189 ಕೋಟಿ ಬೆಟ್ | ಬಂಗಾಳ ₹47 ಕೋಟಿ, ಕೇರಳದಲ್ಲಿ ₹4 ಕೋಟಿ, ಅಸ್ಸಾಂನಲ್ಲಿ ₹1.8 ಕೋಟಿ ಬಾಜಿ

ನವದೆಹಲಿ: ಪಂಚರಾಜ್ಯ ಚುನಾವಣೆಯ ಫಲಿತಾಂಶ ಘೋಷಣೆಯಾಗುವ ದಿನ ಸಮೀಪಿಸುತ್ತಿದ್ದಂತೆ, ವಿಶ್ವದ ಅತಿ ದೊಡ್ಡ ವಿಕೇಂದ್ರೀಕೃತ ಊಹೆ ಮಾರುಕಟ್ಟೆ ವೇದಿಕೆಯಾಗಿರುವ ಪಾಲಿಮಾರ್ಕೆಟ್‌ನಲ್ಲಿ ಬೆಟ್ಟಿಂಗ್ ಹೆಚ್ಚಿದ್ದು, ಹಣದ ಹೊಳೆಯೇ ಹರಿಯುತೊಡಗಿದೆ. ಈಗಾಗಲೇ 242.8 ಕೋಟಿ ರು.ನಷ್ಟು ವ್ಯವಹಾರ ನಡೆದಿದೆ; ಅರ್ಥಾತ್ ಅಷ್ಟೊಂದು ಪ್ರಮಾಣದಲ್ಲಿ ಬೆಟ್ ಕಟ್ಟಲಾಗಿದೆ.

ಭಾರತದಲ್ಲಿ ಪಾಲಿಮಾರ್ಕೆಟ್ ಕಾರ್ಯಾಚರಣೆಯ ಮೇಲೆ ನಿರ್ಬಂಧವಿದ್ದರೂ ಕ್ರಿಪ್ಟೋ ಮೂಲಕ ಈ ವ್ಯವಹಾರ ಮುಂದುವರಿದಿದೆ. ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಿದ್ದ ತಮಿಳುನಾಡಿನಲ್ಲಿ ಅತಿ ಹೆಚ್ಚು ಬೆಟ್ಟಿಂಗ್ ಚಟುವಟಿಕೆ ನಡೆಯುತ್ತಿದ್ದು, 189 ಕೋಟಿ ರು.ನಷ್ಟು ವ್ಯವಹಾರ ಆಗಿದೆ. ಡಿಎಂಕೆ ಗೆಲ್ಲುವ ಶೇ.87ರಷ್ಟು ಸಾಧ್ಯತೆಯಿದೆಯೆಂದು ಜನ ನಂಬಿ ಇಷ್ಟೊಂದು ಬೆಟ್ ಕಟ್ಟುತ್ತಿದ್ದಾರೆ.

ಉಳಿದಂತೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲ್ಲುವ ಬಗ್ಗೆ ಶೇ.51ರಷ್ಟು ನಿರೀಕ್ಷೆಯಿದ್ದು, 47ಕೋಟಿರು.ವ್ಯವಹಾರವಾಗಿದೆ. ಕೇರಳದಲ್ಲಿ ಕಾಂಗ್ರೆಸ್ ಅಧಿಕಾರಕ್ಕೇರುವ ಶೇ.64ರಷ್ಟು ಸಾಧ್ಯತೆಯಿದೆ ಎಂದುಕೊಂಡು 3.8 ಕೋಟಿ ರು. ಬೆಟ್ ಕಟ್ಟಲಾಗಿದೆ, ಅಸ್ಸಾಂನಲ್ಲಿ ಬಿಜೆಪಿ ಮೇಲೆ ಶೇ.98ರಷ್ಟು ನಿರೀಕ್ಷೆಯಿದ್ದು 1.78 ಕೋಟಿ ರು. ಹಾಗೂ ಪುದುಚೇರಿಯಲ್ಲಿ 18 ಲಕ್ಷ ರು. ಬಾಜಿ ವ್ಯವಹಾರ ನಡೆದಿದೆ.



ಕೋಲ್ಕತಾ ಮತ ಎಣಿಕೆ ಕೇಂದ್ರಕ್ಕೆ ಭಾನುವಾರ ಟಿಎಂಸಿ ನಾಯಕರ ಕಾವಲು.

ಪಂಚ ರಾಜ್ಯ ಸಮರ

ಬಿಜೆಪಿ ತುಂಬಾ ಕಡಿಮೆ ಅಂತರದಲ್ಲಿ ಗೆದ್ದರೆ ಮರು ಮತ ಎಣಿಕೆಗೆ ಪಟ್ಟು: ದೀದಿ

ಕೋಲ್ಕತಾ: 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಯಾವುದಾದರೂ ಕ್ಷೇತ್ರದಲ್ಲಿ 500 ರಿಂದ 700 ಮತಗಳ ಅಂತರದಿಂದ ಜಯಿಸುವ ಸಾಧ್ಯತೆ ಇದ್ದರೆ ತಕ್ಷಣವೇ ಮರು ಮತ ಎಣಿಕೆಗೆ ಪಟ್ಟು ಹಿಡಿದು ಮನವಿ ಸಲ್ಲಿಸಬೇಕು' ಎಂದುತಮ್ಮ ಅಭ್ಯರ್ಥಿಗಳು ಹಾಗೂ ಮತ ಎಣಿಕೆ ಏಜೆಂಟರಿಗೆ ಮುಖ್ಯಮಂತ್ರಿ ಹಾಗೂ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಸೂಚಿಸಿದ್ದಾರೆ. ಬಂಗಾಳದಲ್ಲಿ ಬಿಜೆಪಿ ಗೆಲ್ಲಬಹುದು ಎಂದು ಕೆಲವು ಮತಗಟ್ಟೆ ಸಮೀಕ್ಷೆಗಳು ಹೇಳಿರುವ ಬೆನ್ನಲ್ಲೇ ಅವರು ಎಣಿಕೆ ಮೇಲೆ ತೀವ್ರ ನಿಗಾ ಇಡಬೇಕು ಎಂದು ಪಕ್ಷದ ಅಭ್ಯರ್ಥಿಗಳಿಗೆ ತಾಕೀತು ಮಾಡಿದ್ದಾರೆ.




ಪಿಣರಾಯಿ ಬಯೋದಿಂದ 'ಸಿಎಂ' ಪದ ದಿಢೀರ್ ಕಾಣೆ

ನವದೆಹಲಿ: ಮತ ಎಣಿಕೆಯ ಮುನ್ನಾ ದಿನ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ತಮ್ಮೆಲ್ಲಾ ಸಾಮಾಜಿಕ ಮಾಧ್ಯಮ ಖಾತೆಗಳ ಬಯೋದಿಂದ 'ಸಿಎಂ' ಎಂಬುದನ್ನು ತೆಗೆದು, 'ಪಾಲಿಟ್ ಬ್ಯೂರೋ ಸದಸ್ಯ, ಭಾರತೀಯ ಕಮ್ಯುನಿಸ್ಟ್ ಪಕ್ಷ(ಎಂ)' ಎಂಬುದನ್ನಷ್ಟೇ ಉಳಿಸಿಕೊಂಡಿದ್ದಾರೆ. ಇದು ಸತತ 2 ಬಾರಿ ಕೇರಳದಲ್ಲಿ ಸರ್ಕಾರ ರಚಿಸಿದ್ದ ವಿಜಯನ್ ಈ ಬಾರಿ ಪರಾಭವವನ್ನು ಒಪ್ಪಿಕೊಂಡುಬಿಟ್ಟರೇ ಎಂಬ ವಿಶ್ಲೇಷಣೆಗಳಿಗೆ ಮುನ್ನುಡಿ ಬರೆದಿದೆ. ಸಮೀಕ್ಷೆಗಳು ಕೂಡ ಕೇರಳದಲ್ಲಿ ಕಾಂಗ್ರೆಸ್‌ನೇತೃತ್ವದಯುಡಿಎಫ್‌ಕೂಟಅಧಿಕಾರಕ್ಕೇರಬಹುದು ಎಂದು ಅಂದಾಜಿಸಿದ್ದವು. ವಿಜಯನ್ ಅವರು 2016ರಲ್ಲಿ ಧರ್ಮದೊಂ ಕ್ಷೇತ್ರದಿಂದ ಗೆದ್ದು ಸಿಎಂ ಪಟ್ಟಕ್ಕೇರಿದ್ದರು.



ನನಗೇ ಜಯ: ₹1 ಕೋಟಿ ಬೆಟ್ ಕಟ್ಟಿದ ಬಿಜೆಪಿಗ!

ಕೊಟ್ಟಾಯಂ (ಕೇರಳ): ಕೇರಳದ ಪೂಂಜಾರ್ ಕ್ಷೇತ್ರದಿಂದ ನನ್ನ ಗೆಲುವು ಖಚಿತ. ಈ ವಿಚಾರವಾಗಿ 1 ಕೋಟಿ ರು. ಬೆಟ್ ಕಟ್ಟಲು ಸಿದ್ಧ ಎಂದು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ. ಜಾರ್ಜ್ ಸವಾಲು ಹಾಕಿದ್ದಾರೆ.



ಜತೆಗೆ, ರಾಜ್ಯದಲ್ಲಿ ಈ ಬಾರಿ ಅತಂತ್ರ ಸ್ಥಿತಿ ನಿರ್ಮಾಣವಾಗಲಿದೆ ಎಂದಿರುವ ಅವರು, ಎನ್‌ಡಿಎ 11 ಸ್ಥಾನಗಳನ್ನು ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಟೀವಿ ವಾಹಿನಿ ಜತೆ ಮಾತನಾಡಿದ ಅವರು, 'ಪೂಂಜಾರ್ ಕ್ಷೇತ್ರದಿಂದ ನಾನು ಭಾರೀ ಮತಗಳ ಅಂತರದಿಂದ ಗೆಲ್ಲಲಿದ್ದೇನೆ. ಯಾರಿಗಾದರೂ ಈ ಬಗ್ಗೆ ಅನುಮಾನ ಇದ್ದರೆ ಅವರು 1 ಕೋಟಿ ರು. ಬಾಜಿ ಕಟ್ಟಲು ಮುಂದೆ ಬರಲಿ. ನೆರೆಯ ಪಾಲಾ ಕ್ಷೇತ್ರದಿಂದ ತಮ್ಮ ಪುತ್ರ ಶೋನೆ ಜಾರ್ಜ್ ಕೂಡ ಗೆಲುವು ಸಾಧಿಸಲಿದ್ದಾರೆ. ತಂದೆ-ಮಗ ಇಬ್ಬರೂ ಶಾಸಕರಾಗಲಿದ್ದೇವೆ' ಎಂದರು.

'ಪಕ್ಷದ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಬಿಜೆಪಿಯು ಕೇರಳದಲ್ಲಿ ಈ ಬಾರಿ ಉತ್ತಮ ಪ್ರದರ್ಶನ ತೋರಲಿದೆ. 11 ಸ್ಥಾನದಲ್ಲಿ ಗೆಲ್ಲಲಿದ್ದೇವೆ. ಆದರೆ ಈ ಬಾರಿ ರಾಜ್ಯದಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಲಿದೆ. ಯಾವ ಪಕ್ಷಕ್ಕೂ ಬಹುಮತ ಸಿಗುವುದಿಲ್ಲ. ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಲಿದೆ. ಹಾಗಂತ, ಸಿಪಿಎಂ ನೇತೃತ್ವದ ಎಲ್‌ಡಿಎಫ್ ಕೂಡ ಅಷ್ಟೇನೂ ಕಳಪೆ ಪ್ರದರ್ಶನ ನೀಡುವುದಿಲ್ಲ' ಎಂದರು.

ಗೆಲುವಿಗೆ ಮೊದಲೇ ಕಾಂಗ್ರೆಸ್‌ನಿಂದ ಬಿರಿಯಾನಿ, ಲಡ್ಡುಗಳ ತಯಾರಿ!

ಫಲಿತಾಂಶ ಪ್ರಕಟಣೆಗೂ ಮುನ್ನವೇ ಸಂಭ್ರಮಾಚರಣೆ ಸಿದ್ಧತೆ

ತಿರುವನಂತಪುರಂ: ಕೇರಳ ಚುನಾವಣಾ ಫಲಿತಾಂಶಕ್ಕೆ ಕ್ಷಣಗಣಗೆ ಆರಂಭವಾಗಿರುವ ನಡುವೆಯೇ, ಗೆಲುವಿನ ನಿರೀಕ್ಷೆಯಲ್ಲಿರುವ ರಾಜಕೀಯ ಪಕ್ಷಗಳು ಸಂಭ್ರಮಾಚರಣೆಗೆ ಸಕಲ ಸಿದ್ಧತೆ ನಡೆಸಿವೆ.

ಈ ಬಾರಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರ ಹಿಡಿಯಲಿದೆ ಎಂದು ಬಹುತೇಕ ಸಮೀಕ್ಷೆಗಳು ಭವಿಷ್ಯ ನುಡಿದಿವೆ. ಹೀಗಾಗಿ ಭಾರೀ ಉತ್ಸಾಹದಲ್ಲಿರುವ ಕಾಂಗ್ರೆಸ್ ಕಾರ್ಯಕರ್ತರು ಮಲಪ್ಪುರಂ ಜಿಲ್ಲೆಯ ಪಂಡಿಕ್ಕಾಡ್‌ನಲ್ಲಿ 5,000 ಜನರಿಗೆ ಸಾಕಾಗುವಷ್ಟು ಬಿರಿಯಾನಿ ಹಾಗೂ ಲಡ್ಡು ತಯಾರಿಸಲು ಮುಂದಾಗಿದ್ದಾರೆ. ಬಿರಿಯಾನಿ ಬೇಯಿಸಲು 16 ದೊಡ್ಡ ಪಾತ್ರೆಗಳು ಮತ್ತು ತಲಾ 40 ಕೆಜಿ ಅಕ್ಕಿಯ ವ್ಯವಸ್ಥೆ ಮಾಡಲಾಗಿದೆ. ಇದನ್ನು ವಿತರಿಸಲು ಬೃಹತ್ ಟೆಂಟ್ ಅನ್ನು ಸಹ ನಿರ್ಮಿಸಲಾಗಿದೆ.

ಬಿಜೆಪಿಯಿಂದಲೂ ಲಡ್ಡು ಆರ್ಡರ್, ಪ್ಲಕಾರ್ಡ್ ರೆಡಿ

ಬಿಜೆಪಿ ಕೂಡ ಕೊಚ್ಚಿಯಲ್ಲಿ ಸಂಭ್ರಮಾಚರಣೆಗೆ ಸಿದ್ಧತೆ ನಡೆಸುತ್ತಿದ್ದು, ಈಗಾಗಲೇ ಬೃಹತ್ ಸಂಖ್ಯೆಯ ಲಡ್ಡುಗಳನ್ನು ಆರ್ಡರ್‌ಮಾಡಿದೆ. ಗೆಲ್ಲುವ ನಿರೀಕ್ಷೆಯಿರುವ ಅಭ್ಯರ್ಥಿಗಳನ್ನು ಒಳಗೊಂಡ ಫಲಕಗಳನ್ನು ಸಿದ್ಧಪಡಿಸಲಾಗಿದೆ.

ಮತ್ತೆ ಯುದ್ಧ: ಇರಾನ್‌ಗೆ ಟ್ರಂಪ್ ಎಚ್ಚರಿಕೆ

ಇರಾನ್ ಹೊಸ ಸಂಧಾನ ಪ್ರಸ್ತಾವ ಇಟ್ಟಿದೆ | ಅನುಚಿತವಾಗಿ ವರ್ತಿಸಿದರೆ ಸಮರ: ಅಮೆರಿಕ ಅಧ್ಯಕ್ಷ

ವಾಷಿಂಗ್ಟನ್: ಮಧ್ಯಪ್ರಾಚ್ಯ ಸಂಘರ್ಷ ನಿವಾರಣೆಗೆ ಸಂಬಂಧಿಸಿ ಇರಾನ್ ಆಡಳಿತ ಸಲ್ಲಿಸಿರುವ 14 ಅಂಶಗಳ ಹೊಸ ಸಂಧಾನ ಪ್ರಸ್ತಾಪವನ್ನು ಪರಿಶೀಲಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಆದರೆ, 'ಒಂದು ವೇಳೆ ಇರಾನ್ ಆಡಳಿತ ಕೆಟ್ಟದಾಗಿ ಅಥವಾ ಅನುಚಿತವಾಗಿ ವರ್ತಿಸಿದರೆ ಅವರ ವಿರುದ್ಧ ಮತ್ತೆ ಮಿಲಿಟರಿ ಕಾರ್ಯಾಚರಣೆ ಆರಂಭಿಸುತ್ತೇವೆ' ಎಂದು ಎಚ್ಚರಿಸಿದ್ದಾರೆ.



ಪಾಮ್ ಬೀಚ್‌ನ ಮಿಯಾಮಿಗೆ ತೆರಳುವ ಮುನ್ನ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಯುದ್ಧವನ್ನು ಕೊನೆಗೊಳಿಸಲು ಇರಾನ್ ಹೊಸ ಪ್ರಸ್ತಾವ ಸಲ್ಲಿಸಿದೆ. ಮಿಯಾಮಿಗೆ ತೆರಳುವಾಗ ಮಾರ್ಗ ಮಧ್ಯೆ ಅದನ್ನು ಪರಿಶೀಲಿಸುತ್ತೇನೆ. ಆ ಬಳಿಕ ಮುಂದಿನ ವಿಚಾರ ತಿಳಿಸುತ್ತೇನೆ' ಎಂದರು.

ಇದೇ ವೇಳೆ, 'ಒಂದು ವೇಳೆ ಅವರು ಅನುಚಿತವಾಗಿ ವರ್ತಿಸಿದರೆ ಅಥವಾ ಕೆಟ್ಟ ಕೆಲಸ ಮಾಡಿದರೆ ಅಮೆರಿಕದ ದಾಳಿ ಮತ್ತೆ ಆರಂಭವಾಗಲಿದೆ' ಎಂದು ಅವರು ಗುಡುಗಿದರು.

ಇದಕ್ಕೂ ಮುನ್ನ ತಮ್ಮ ಸಾಮಾಜಿಕ ಜಾಲತಾಣ ಟ್ರುತ್ ಸೋಷಿಯಲ್‌ನಲ್ಲಿ ಪೋಸ್ಟ್ ಹಾಕಿದ್ದ ಅವರು, 'ಇರಾನ್ ಸಲ್ಲಿಸಿದ ಹೊಸ ಪ್ರಸ್ತಾವದ ಕುರಿತು ಶೀಘ್ರದಲ್ಲೇ ಪರಿಶೀಲನೆ ನಡೆಸುತ್ತೇನೆ. ಆದರೆ ನನಗೆ ಇದು ಸ್ವೀಕಾರಾರ್ಹವಾಗಲಿದೆ ಎಂದು ಅನಿಸುತ್ತಿಲ್ಲ. ಏಕೆಂದರೆ ಕಳೆದ 47 ವರ್ಷಗಳಲ್ಲಿ ಮಾನವತೆ ಮತ್ತು ವಿಶ್ವದ ಜತೆಗೆ ಅವರು ಏನೇನು ಮಾಡಿದ್ದಾರೋ ಅದಕ್ಕಾಗಿ ಅವರು ಸೂಕ್ತ ಬೆಲೆ ತೆತ್ತಿಲ್ಲ' ಎಂದು ತಿಳಿಸಿದ್ದರು.

ಇರಾನ್ ನೀಡಿದ ಪ್ರಸ್ತಾವದಲ್ಲೇನಿದೆ?: ಮೂಲಗಳ ಪ್ರಕಾರ ಇರಾನ್ ತನ್ನ ಹೊಸ ಪ್ರಸ್ತಾವದಲ್ಲಿ ಅಮೆರಿಕಕ್ಕೆ 1 ತಿಂಗಳ ಕಾಲಾವಕಾಶ ನೀಡಿದೆ. ಆ ಅವಧಿಯಲ್ಲಿ ಹೋರ್ಮುಜ್ ಜಲಸಂಧಿ ನಿರ್ಬಂಧ ತೆರವುಗೊಳಿಸುವುದು ಹಾಗೂ ತನ್ನ ಮತ್ತು ಲೆಬನಾನ್ ವಿರುದ್ಧದ ಸಂಘರ್ಷಕ್ಕೆ ಶಾಶ್ವತ ಅಂತ್ಯ ಹಾಡುವುದು ಸೇರಿ ಹಲವು ಷರತ್ತುಗಳನ್ನು ಮುಂದಿರಿಸಿದೆ.

ಹೋರ್ಮುಜ್ ಬಳಿ ಮತ್ತೆ ದಾಳಿ

ದುಬೈ: ಹೋರ್ಮುಜ್ ಜಲಸಂಧಿ ಬಳಿ ಬೃಹತ್ ವಿಮಾನ ವಾಹಕ ನೌಕೆಯೊಂದರ ಮೇಲೆ ಹಲವಾರು ಸಣ್ಣ ಹಡಗುಗಳು ದಾಳಿ ಮಾಡಿವೆ. ಆದರೆ ಎಲ್ಲಾ ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ಬ್ರಿಟಿಷ್ ಸೇನೆಯ ಕಡಲ ವ್ಯಾಪಾರ ಕಾರ್ಯಾಚರಣೆ ಕೇಂದ್ರ ತಿಳಿಸಿದೆ. ಇರಾನ್‌ನ ಸಿರಿಕ್ ಎಂಬಲ್ಲಿ ದಾಳಿ ನಡೆದಿದ್ದು, ಹಡಗುಗಳು ಎಚ್ಚರಿಕೆಯಿಂದ ಸಾಗುವಂತೆ ಅದು ಸೂಚಿಸಿದೆ.


ಜಾಮ್ ಮಾಡಲು ಅಸಾಧ್ಯವಾದ ಡ್ರೋನ್ ಹಿಜ್ಬುಲ್ಲಾದಿಂದ ಬಳಕೆ!

ಕೇಬಲ್ ಡ್ರೋನ್ ಬಳಸಿ ಇಸ್ರೇಲ್ ಮೇಲೆ ದಾಳಿ

ಟೆಲ್ ಅವಿವ್/ಬೈರೂತ್: ಆಧುನಿಕ ಯುದ್ಧಕಲೆಯ ಪರಿಣತ, ತಂತ್ರಜ್ಞಾನ ಚತುರ ಎನಿಸಿಕೊಂಡಿರುವ ಇಸ್ರೇಲ್‌ನ ವಾಯುರಕ್ಷಣಾ ವ್ಯವಸ್ಥೆಗಳಿಗೇ ಚಳ್ಳೆ ಹಣ್ಣು ತಿನ್ನಿಸಿ ಒಳನುಗ್ಗಿ ಹಾನಿಯುಂಟು ಮಾಡುವ ಕೇಬಲ್ ಡ್ರೋನ್‌ಗಳ ಬಳಕೆಯನ್ನು ಲೆಬನಾನ್‌ನ ಹಿಜ್ಬುಲ್ಲಾ ಉಗ್ರರು ಆರಂಭಿಸಿದ್ದಾರೆ.

ಭಾನುವಾರ ಇವುಗಳನ್ನು ಬಳಸಿ ಓರ್ವ ಇಸ್ರೇಲಿ ಸೈನಿಕನನ್ನು ಬಲಿ ಪಡೆಯಲಾಗಿದ್ದು, ಬಳಿಕ ರಕ್ಷಣೆಗೆಂದು ಬಂದ ಹೆಲಿಕಾಪ್ಟರ್‌ಗಳ ಮೇಲೆಯೂ ಹಲವು ಡ್ರೋನ್‌ಗಳನ್ನು ಹಾರಿಸಲಾಯಿತು. ಇದರ ವಿಡಿಯೋವನ್ನು ಹಿಜ್ಬುಲ್ಲಾ ಹಂಚಿಕೊಂಡಿದೆ. ಸಾಂಪ್ರದಾಯಿಕ ಡ್ರೋನ್‌ಗಳಂತೆ ಈ ಡ್ರೋನ್ ಅನ್ನು ಜಾಮ್ ಮಾಡುವುದು ಅಸಾಧ್ಯ. ಹೀಗಾಗಿಯೇ ಇದು ಇಸ್ರೇಲ್‌ಗೆ ಸವಾಲಾಗಿದೆ.

ಯಾಕೆ ಜಾಮ್ ಮಾಡಲಾಗದು?: ಸಾಮಾನ್ಯವಾಗಿ ರೇಡಿಯೋ ಸಿಗ್ನಲ್‌ಗಳ ಸಹಾಯದಿಂದ ಡ್ರೋನ್‌ಗಳನ್ನು ನಿಯಂತ್ರಿಸಲಾಗುತ್ತದೆ. ಸಿಗ್ನಲ್‌ಗಳನ್ನು ಜಾಮ್ ಮಾಡುವ ಮೂಲಕ ಅವುಗಳ ದಾರಿ ತಪ್ಪಿಸುವುದು ಸಾಧ್ಯ. ಆದರೆ ಹಿಜ್ಬುಲ್ಲಾ ಬಳಸುತ್ತಿರುವ ಡ್ರೋನ್‌ಗಳು ರೇಡಿಯೋ ಸಿಗ್ನಲ್ ಅನ್ನು ಅವಲಂಬಿಸಿಲ್ಲ. ಜತೆಗೆ, ಎಲೆಕ್ಟ್ರಾನಿಕ್ ಸಂಕೇತಗಳನ್ನೂ ಹೊರಸೂಸುವುದಿಲ್ಲ. ಬದಲಿಗೆ ಇವುಗಳು 15 ಕಿ.ಮೀ.ನಷ್ಟು ಉದ್ದದ ಕೇಬಲ್ ವೈರ್‌ಗಳಿಂದ ನಿಯಂತ್ರಕರ ಸಂಪರ್ಕದಲ್ಲಿರುತ್ತವೆ. ಜತೆಗೆ ಈ ವೈರ್‌ಗಳು ಬರಿಗಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುತ್ತವೆ. ಆದ್ದರಿಂದ ಈ ಡ್ರೋನ್‌ಗಳು ಬರುತ್ತಿರುವುದು ಎಲ್ಲಿಂದ ಎಂದು ತಿಳಿದು, ಜಾಮ್ ಮಾಡುವುದು ಅಸಾಧ್ಯ. ಆದ್ದರಿಂದಲೇ ಇವುಗಳ ಮುಂದೆ ಇಸ್ರೇಲ್‌ನ ವಾಯುರಕ್ಷಣಾ ವ್ಯವಸ್ಥೆ ನಿರುಪಯುಕ್ತವಾಗಿದೆ.



ಈ ಹಿಂದೆ ಇಂತಹ ಡ್ರೋನ್‌ಗಳನ್ನು ಉಕ್ರೇನ್ ವಿರುದ್ಧ ರಷ್ಯಾ ಬಳಸಿತ್ತು.

ವಿಮಾನದ ತುರ್ತು ದ್ವಾರ ತೆರೆದು ಹೊರಜಿಗಿದ ವ್ಯಕ್ತಿ!

ಚೆನ್ನೈ ಏರ್ಪೋರ್ಟ್‌ನಲ್ಲಿ ಆತಂಕಕಾರಿ ಘಟನೆ

ಚೆನ್ನೈ: ವಿಮಾನವು ಲ್ಯಾಂಡ್ ಆದ ಬಳಿಕ ಇನ್ನೂ ನಿಧಾನ ಚಲನೆಯಲ್ಲಿದ್ದಾಗಲೇ ಪ್ರಯಾಣಿಕನೊಬ್ಬ ತುರ್ತು ನಿರ್ಗಮನ ದ್ವಾರವನ್ನು ತೆರೆದು ಹೊರಜಿಗಿದ ಆತಂಕಕಾರಿ ಘಟನೆ ಚೆನ್ನೈ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ನಸುಕಿನಲ್ಲಿ ನಡೆದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಅಥವಾ ವಿಮಾನಕ್ಕೆ ಹಾನಿ ಸಂಭವಿಸಿಲ್ಲ.

ಭಾರೀ ಭದ್ರತಾ ಲೋಪವೆಸಗಿದ ವ್ಯಕ್ತಿಯನ್ನು ಪುದುಕ್ಕೊಟ್ಟೈನ 34 ವರ್ಷದ ವ್ಯಕ್ತಿ ಎಂದು ಗುರುತಿಸಲಾಗಿದೆ. 'ಆತ ವಿಮಾನದಲ್ಲಿ 2 ಬಾರಿ ವಾಂತಿ ಮಾಡಿದ್ದ. 3ನೇ ಬಾರಿಯೂ ವಾಂತಿ ಬಂದಾಗ ಹೀಗೆ ಮಾಡಿರಬಹುದು' ಎಂಬಶಂಕೆಇದೆ.ಆದಾಗ್ಯೂ ಆತನನ್ನು ಬಂಧಿಸಿ, ಹೆಚ್ಚಿನ ತನಿಖೆ ನಡೆಸಲಾಗುತ್ತಿದೆ.

ಈ ಘಟನೆಯಿಂದಾಗಿ ವಿಮಾನ ನಿಲ್ದಾಣದ ಕಾರ್ಯಾಚರಣೆಗೆ ಸ್ವಲ್ಪ ಸಮಯ ಅಡ್ಡಿಯಾಯಿತು. ಮುನ್ನೆಚ್ಚರಿಕೆ ಕ್ರಮವಾಗಿ ಮುಖ್ಯ ರನ್‌ವೇಯನ್ನು ಬೆಳಿಗ್ಗೆ 03:23ರಿಂದ ಬೆಳಿಗ್ಗೆ 04:23ರವರೆಗೆ ಮುಚ್ಚಲಾಯಿತು. ಆ ಅವಧಿಯಲ್ಲಿ ವಿಮಾನಗಳನ್ನು 2ನೇ ರನ್‌ವೇಗೆ ತಿರುಗಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಗಿದ್ದೇನು?: 231 ಪ್ರಯಾಣಿಕರನ್ನು ಹೊತ್ತ ಏರ್ ಅರೇಬಿಯಾ ವಿಮಾನವು ಶರ್ಜಾದಿಂದ ಭಾನುವಾರ ಬೆಳಗ್ಗೆ ಚೆನ್ನೈಗೆ ಬಂದಿಳಿದಿತ್ತು. ರನ್‌ವೇಗೆ ಸಂಪರ್ಕಿಸುವ ಟ್ಯಾಕ್ಸಿವೇಯಲ್ಲಿ ನಿಧಾನವಾಗಿ ಚಲಿಸುತ್ತಿದ್ದ ವೇಳೆ, ವ್ಯಕ್ತಿ ತುರ್ತು ದ್ವಾರವನ್ನು ತೆರೆದು ಹೊರಜಿಗಿದಿದ್ದಾನೆ. ಪೈಲಟ್ ತಕ್ಷಣ ವಿಮಾನವನ್ನು ನಿಲ್ಲಿಸಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಆಗ ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್), ಬಾಂಬ್ ನಿಷ್ಕ್ರಿಯ ದಳ ಮತ್ತು ಸಶಸ್ತ್ರ ಅಧಿಕಾರಿಗಳು ವಿಮಾನ ನಿಂತಿದ್ದ ಸ್ಥಳಕ್ಕೆ ಧಾವಿಸಿದ್ದಾರೆ. ಘಟನೆಯ ಬಗ್ಗೆ ಪೈಲಟ್ ಅಧಿಕಾರಿಗಳಿಗೆ ಔಪಚಾರಿಕ ದೂರು ಸಲ್ಲಿಸಿದ್ದಾರೆ. ಬಳಿಕ ಭದ್ರತಾ ಸಿಬ್ಬಂದಿ ವಿಮಾನವನ್ನು ಹತ್ತಿ, ಪ್ರಯಾಣಿಕನನ್ನು ಬಂಧಿಸಿ ವಶಕ್ಕೆ ಪಡೆದಿದ್ದಾರೆ.



- ಹೊರಜಿಗಿದ ಪ್ರಯಾಣಿಕನ ಬಂಧನ, ತೀವ್ರ ತನಿಖೆ
- ಆತನಿಗೆ ವಾಂತಿ ಬರುತ್ತಿದ್ದ ಕಾರಣ ಈ ಕೃತ್ಯದ ಶಂಕೆ

ಲಿಪುಲೇಖ್ ಮೂಲಕ ಕೈಲಾಸ ಯಾತ್ರೆಗೆ ನೇಪಾಳ ವಿರೋಧ

ಉತ್ತರಾಖಂಡ ಗಡಿಯ ಲಿಪುಲೇಖ್ ತನ್ನ ಅವಿಭಾಜ್ಯ ಅಂಗ ಎಂದ ನೇಪಾಳ | ಯಾತ್ರೆಗೆ ಕ್ಯಾತೆ

ಕಾಠ್ಮಂಡು: ಲಿಪುಲೇಖ್ ಮೂಲಕ ಭಾರತದ ಕೈಲಾಸ ಮಾನಸ ಸರೋವರ ಯಾತ್ರೆಗೆ ಅವಕಾಶ ನೀಡಲು ಭಾರತ ಹಾಗೂ ಚೀನಾ ನಿರ್ಧರಿಸಿರುವುದಕ್ಕೆ ನೇಪಾಳ ಕಳವಳ ವ್ಯಕ್ತಪಡಿಸಿದೆ. ಇದು ನೇಪಾಳ-ಭಾರತ ನಡುವೆ ಹೊಸ ರಾಜತಾಂತ್ರಿಕ ಬಿಕ್ಕಟ್ಟಿಗೆ ನಾಂದಿ ಹಾಡುವ ಸಾಧ್ಯತೆ ಇದೆ.

'ಮಹಾಕಾಳಿ ನದಿಯ ಪೂರ್ವದಲ್ಲಿರುವ ಲಿಂಪಿಯಾಧುರ, ಲಿಪುಲೇಖ್ ಮತ್ತು ಕಾಲಾಪಾನಿ 1816ರ ಸುಗೌಲಿ ಒಪ್ಪಂದದ ನಂತರ ನೇಪಾಳದ ಭೂಪ್ರದೇಶದ ಅವಿಭಾಜ್ಯ ಅಂಗಗಳಾಗಿವೆ. ಹೀಗಾಗಿ ಈ ಮಾರ್ಗದಲ್ಲಿ ತಾನು ಯಾತ್ರೆಗೆ ಅವಕಾಶ ನೀಡುವುದಿಲ್ಲ. ಈ ಬಗ್ಗೆ ರಾಜತಾಂತ್ರಿಕ ಮಾರ್ಗದ ಮೂಲಕ ನಮ್ಮ ನಿಲುವನ್ನು ಎರಡೂ ದೇಶಗಳಿಗೆ ತಿಳಿಸಿದ್ದೇವೆ' ಎಂದು ಹೇಳಿದೆ.



ಲಿಪುಲೇಖ್ ಪಾಸ್ ಉತ್ತರಾಖಂಡ ಹಾಗೂ ನೇಪಾಳ ಗಡಿಯಲ್ಲಿದೆ. ಇದು ಸೇರಿ ಹಲವು ಪ್ರದೇಶಗಳು 1816ರ ಆಂಗ್ಲೋ-ನೇಪಾಳ ಕದನದ ನಂತರ ಭಾರತ ಹಾಗೂ ನೇಪಾಳ ನಡುವಿನ ವಿವಾದಿತ ಪ್ರದೇಶಗಳಾಗಿವೆ.

ಕೇಳದೇ ಯಾತ್ರೆ ಘೋಷಣೆಗೆ ಕಿಡಿ

ಭಾರತದ ವಿದೇಶಾಂಗ ಸಚಿವಾಲಯ ಇತ್ತೀಚೆಗೆ 2026 ರ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಬೀಜಿಂಗ್‌ನ ಸಹಯೋಗದೊಂದಿಗೆ ಜೂನ್ ಮತ್ತು ಆಗಸ್ಟ್ ನಡುವೆ ನಡೆಸಲಾಗುವುದು ಎಂದು ಘೋಷಿಸಿತ್ತು. 50 ಜನರ ಬ್ಯಾಚ್‌ಗಳಲ್ಲಿ ಪ್ರಯಾಣಿಸುವ ಒಟ್ಟು 1,000 ಯಾತ್ರಿಕರು 2 ಮಾರ್ಗಗಳನ್ನು ಬಳಸುತ್ತಾರೆ. ಒಂದಿಷ್ಟು ತಂಡಗಳು ಸಿಕ್ಕಿಂನ ನಾಥು ಲಾ ಪಾಸ್ ಮೂಲಕ ಸಾಗಿದರೆ ಮತ್ತು ಇನ್ನಷ್ಟು ತಂಡಗಳು ಉತ್ತರಾಖಂಡದ ಲಿಪುಲೇಖ್ ಪಾಸ್ ಮೂಲಕ ಸಾಗುತ್ತವೆ. ಆನ್‌ಲೈನ್ ನೋಂದಣಿಗಳು ಈಗಾಗಲೇ ಪ್ರಾರಂಭವಾಗಿದ್ದು, ಮೇ 19ರ ಗಡುವು ನೀಡಲಾಗಿದೆ. ಆದರೆ ತನ್ನನ್ನು ಕೇಳದೇ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂಬುದು ನೇಪಾಳದ ಆಕ್ಷೇಪ.

ಖಲಿಸ್ತಾನಿ ಧ್ವಜ ಬೀಸಿದ್ದಕ್ಕೆ ಗೀತೆ ನಿಲ್ಲಿಸಿ ಗಾಯಕ ದಿಲ್ಜೀತ್ ಕಿಡಿ

'ಉಪಟಳ ನಿಲ್ಲಿಸಿ, ಹೊರನಡೆಯಿರಿ' ಎಂದು ಗರಂ ಕೆನಡಾದಲ್ಲಿನ ಸಂಗೀತ ಕಾರ್ಯಕ್ರಮದಲ್ಲಿ ಘಟನೆ

ಕ್ಯಾಲ್ಗರಿ (ಕೆನಡಾ): ಖ್ಯಾತ ಪಂಜಾಬಿ ಗಾಯಕ ದಿಲ್ಜಿತ್ ದೋಸಾಂಜ್ ಅವರು ಕೆನಡಾದ ಕ್ಯಾಲ್ಗರಿಯಲ್ಲಿ ತಮ್ಮ ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಖಲಿಸ್ತಾನಿ ಧ್ವಜ ಪ್ರದರ್ಶಿಸುತ್ತಿದ್ದವರ ಮೇಲೆ ಗರಂ ಆಗಿದ್ದು, ಸ್ಥಳದಿಂದ ಹೊರನಡೆಯುವಂತೆ ನೇರವಾಗಿ ಎಚ್ಚರಿಸಿದ ಘಟನೆ ನಡೆದಿದೆ. ಇದರ ವಿಡಿಯೋ ವೈರಲ್ ಆಗಿದ್ದು, ಗಾಯಕನ ನಡೆಗೆ ಮೆಚ್ಚುಗೆ ವ್ಯಕ್ತವಾಗಿದೆ.



ದಿಲ್ಜೀತ್ ಸಾವಿರಾರು ಜನರ ಎದುರು ಕಾರ್ಯಕ್ರಮ ನೀಡುತ್ತಿದ್ದರು. ಈ ವೇಳೆ ಕೆಲವರು ಭಾರತದಲ್ಲಿ ನಿಷೇಧಿತ ಉಗ್ರ ಸಂಘಟನೆಯನ್ನುಪ್ರತಿನಿಧಿಸುವಧ್ವಜಗಳನ್ನು ಹಾರಿಸುತ್ತಿರುವುದನ್ನು ಗಮನಿಸಿದರು. ಕೂಡಲೇ ಹಾಡು ನಿಲ್ಲಿಸಿ, 'ನಿಮ್ಮ ಉಪದ್ರವವನ್ನು ಇಲ್ಲಿ ನಿಲ್ಲಿಸಿ, ಬೇರೆಲ್ಲಾದರೂ ಮಾಡಿ. ನನಗೇನೂ ಸಾವಿನ ಭಯವಿಲ್ಲ' ಎಂದು ಖಡಕ್ ಎಚ್ಚರಿಕೆ ನೀಡಿದ್ದಾರೆ.

ಒಂದು ದಿನದ ಹಿಂದಷ್ಟೇ, ಕೆನಡಾದ ಗುಪ್ತಚರ ಇಲಾಖೆಯು ಖಲಿಸ್ತಾನಿ ಪ್ರತ್ಯೇಕತಾವಾದಿಗಳಿಂದ ತಮ್ಮ ದೇಶಕ್ಕೆ ಬೆದರಿಕೆಯಿದೆ ಎಂದು ವರದಿ ನೀಡಿತ್ತು. ಅದರ ಬೆನ್ನಲ್ಲೇ ದಿಲ್ಜಿತ್ ಅವರ ನಡೆ ಗಮನ ಸೆಳೆದಿದೆ.

ಭೀಕರ ಭಾನುವಾರ ನಸುಕಲ್ಲಿ ಎಸಿ ಬ್ಲಾಸ್ಟ್ ಶಂಕೆ | ನೆಮ್ಮದಿ ನಿದ್ರೆ ಹೊತ್ತಿನಲ್ಲಿ 3 ಕುಟುಂಬ ಚಿರನಿದ್ರೆಗೆ | 10-15 ಮಂದಿ ರಕ್ಷಣೆ, ಇಬ್ಬರಿಗೆ ಸಣ್ಣಪುಟ್ಟ ಗಾಯ

ದಿಲ್ಲಿ ಕಟ್ಟಡಕ್ಕೆ ಬೆಂಕಿ: ಮಗು ಸೇರಿ 9 ಮಂದಿ ಸಜೀವ ದಹನ

ನವದೆಹಲಿ: 4 ಮಹಡಿಯ ವಸತಿ ಸಮುಚ್ಚಯವೊಂದಕ್ಕೆ ಬೆಂಕಿ ಬಿದ್ದ ಪರಿಣಾಮ, 1 ಮಗು ಸೇರಿದಂತೆ 9 ಮಂದಿ ಸಜೀವ ದಹನವಾದ ಹೃದಯ ವಿದ್ರಾವಕ ಘಟನೆ ಪೂರ್ವ ದೆಹಲಿಯ ವಿವೇಕ ವಿಹಾರದ ಹಂತ-1ರಲ್ಲಿ ಭಾನುವಾರ ನಸುಕಿನ 3.30-4 ಗಂಟೆ ಸುಮಾರಿಗೆ ನಡೆದಿದೆ.

ಕಟ್ಟಡದ 2, 3 ಮತ್ತು 4ನೇ ಮಹಡಿಗಳು ಬೆಂಕಿಗಾಹುತಿಯಾಗಿವೆ. ಮೂರೂ ಮಹಡಿಗಳಲ್ಲಿ ವಾಸವಿದ್ದ 3 ಕುಟುಂಬಗಳು ನೆಮ್ಮದಿಯ ನಿದ್ರೆ ಮಾಡುವ ಹೊತ್ತಿನಲ್ಲಿ ಚಿರನಿದ್ರೆಗೆ ಜಾರಿವೆ. 10-15 ಜನರನ್ನು ಬೆಂಕಿಯ ಕೆನ್ನಾಲಗೆಯಿಂದ ಪಾರು ಮಾಡಲಾಗಿದ್ದು, ಸಣ್ಣಪುಟ್ಟ ಗಾಯಗಳಾದ ಇಬ್ಬರನ್ನು ಗುರು ತೇಗಬಹದ್ದೂರ್ ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆ ನೀಡಲಾಗುತ್ತಿದೆ.



ದೆಹಲಿಯ ವಸತಿ ಕಟ್ಟಡದಲ್ಲಿ ಬೆಂಕಿಗೆ ತುತ್ತಾಗಿ ಕರಕಲಾಗಿರುವ ಗೋಡೆ, ಇತರ ವಸ್ತುಗಳು.

ಘಟನೆಗೆ ಎ.ಸಿ. ಸ್ಫೋಟವೇ ಕಾರಣ ಎಂದು ಈ ಕಟ್ಟಡದ ಪಕ್ಕದವರು ಶಂಕಿಸಿದ್ದಾರೆ. ಆದರೆ ಅಧಿಕೃತವಾಗಿ ಇದು ದೃಢಪಟ್ಟಿಲ್ಲ.

ಆಗಿದ್ದೇನು?: ಭಾನುವಾರ ನಸುಕಿನ 3.48ರ ಸುಮಾರಿಗೆ ವಸತಿ ಸಮುಚ್ಚಯಕ್ಕೆ ಬೆಂಕಿ ಹೊತ್ತಿಕೊಂಡಿದೆ. ಕೆಲವೇ ಕ್ಷಣದಲ್ಲಿ ಮೂರೂ ಮಹಡಿಗಳಿಗೆ ಜ್ವಾಲೆ ಆವರಿಸಿದೆ. ದಟ್ಟವಾದ ಹೊಗೆ ಸುತ್ತಲೂ ವ್ಯಾಪಿಸಿ, ಗೋಚರತೆಯೇ ಇಲ್ಲದಂತೆ ಮಾಡಿದೆ. ಘಟನೆ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಆಗಮಿಸುವಷ್ಟರಲ್ಲಿ, ಬೆಂಕಿಗೆ ಸಿಲುಕಿದ್ದ ಜನ ಜೀವ ಉಳಿಸುವಂತೆ ಚೀರಿಕೊಳ್ಳುವುದು ಕೇಳಿಸುತ್ತಿತ್ತು. ಹರಸಾಹಸ ಪಟ್ಟು 10-15 ಜನರನ್ನು ರಕ್ಷಿಸಿದರಾದರೂ, 9 ಮಂದಿ ಅದಾಗಲೇ ಅಸುನೀಗಿದ್ದರು. ಅವರ ಶವಗಳನ್ನು ಪೊಲೀಸರಿಗೆ ಹಸ್ತಾಂತರಿಸಲಾಗಿದೆ.

ಟೆರೇಸ್‌ಗೆ ಬೀಗ, ಒಂದೇ ಮೆಟ್ಟಿಲ ದಾರಿ: ಕಟ್ಟಡಕ್ಕೆ ತುರ್ತು ನಿರ್ಗಮನ ದ್ವಾರ ಇರಲಿಲ್ಲ. ಕೇವಲ ಒಂದು ಮೆಟ್ಟಿಲ ದಾರಿ ಮಾತ್ರ ಇತ್ತು. ಇಲ್ಲಿಂದಲೇ ಪ್ರವೇಶ ಮತ್ತು ನಿರ್ಗಮನ ಎರಡನ್ನೂ ಮಾಡಬೇಕಿತ್ತು. ಇಲ್ಲಿ ಬೆಂಕಿ ಆವರಿಸಿದ್ದರಿಂದ ಹೊರಬರಲು ಬೇರೆ ಮಾರ್ಗ ಇರಲಿಲ್ಲ. ಅಲ್ಲದೆ, ಟೆರೆಸ್‌ಗೆ ಹೋಗುವ ದಾರಿ ಕೂಡಾ ಲಾಕ್ ಆಗಿತ್ತು. ಕಿಟಕಿಗಳಿಗೆ ಕಬ್ಬಿಣದ ಗ್ರಿಲ್‌ಗಳನ್ನು ಹಾಕಲಾಗಿದ್ದರಿಂದ ಅಲ್ಲಿಂದಲೂ ಹೊರಜಿಗಿಯಲು ಸಾಧ್ಯವಾಗಲಿಲ್ಲ. ಇದರಿಂದಾಗಿ ರಕ್ಷಣಾ ಕಾರ್ಯಾಚರಣೆಗೂ ಬಹಳ ಅಡ್ಡಿಯಾಯಿತು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಬೆಂಕಿ ದುರಂತದಲ್ಲಿ ಮೃತಪಟ್ಟವರಿಗೆ ಪ್ರಧಾನಿ ನರೇಂದ್ರ ಮೋದಿ, ಲೆ. ಗವರ್ನರ್ ತರಣ್‌ಜೀತ್ ಸಿಂಗ್ ಸಂಧು ಮತ್ತು ಮುಖ್ಯಮಂತ್ರಿ ರೇಖಾ ಗುಪ್ತಾ ಸಂತಾಪ ಸೂಚಿಸಿದ್ದಾರೆ.

ಧಮ್ಕಿ ರೆಸ್ಟೋರೆಂಟ್ ಮಾಲೀಕಗೆ ಬೆದರಿಸಿದ ಗ್ಯಾಂಗ್

ಕಪಿಲ್ ಶರ್ಮಾ ಕೆಫೆ ಬಳಿ ಮತ್ತೆ 'ಬಿಷ್ಣೋಯಿ ಗ್ಯಾಂಗ್' ದಾಳಿ

ಒಟ್ಟಾವಾ: ಹಾಸ್ಯ ಕಲಾವಿದ ಕಪಿಲ್ ಶರ್ಮಾ ಅವರ ಕೆನಡಾದ ಸರ್ರೆಯಲ್ಲಿರುವ ಕ್ಯಾಪ್ಸ್ ಕೆಫೆ ಬಳಿ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನಿಂದ ಮತ್ತೊಮ್ಮೆ ದಾಳಿಯಾಗಿದೆ ಎಂದು ವರದಿಯಾಗಿದೆ.

ಕಪಿಲ್ ಶರ್ಮಾ ಕೆಫೆಯ ಪಕ್ಕದಲ್ಲಿರುವ ರೆಸ್ಟೋರೆಂಟ್‌ನಲ್ಲಿ ಗುಂಡು ಹಾರಿಸಲಾಗಿದೆ. ಶರ್ಮಾ ಮತ್ತು ರೆಸ್ಟೋರೆಂಟ್ ಮಾಲೀಕನಿಗೆ ಕೊಲೆ ಬೆದರಿಕೆ ಬಂದಿದೆ. 'ನಿಮ್ಮ ಸರದಿಗೆ ಬನ್ನಿ, ನಮ್ಮ ಸಮಯ ವ್ಯರ್ಥ ಮಾಡಬೇಡಿ. ಇಲ್ಲದಿದ್ದರೆ ನಿಮ್ಮ ಕೆಫೆಗೂ ಇದೇ ಪರಿಸ್ಥಿತಿ ಬರಬಹುದು' ಎಂದು ಗ್ಯಾಂಗ್‌ನಿಂದ ಬೆದರಿಕೆ ಸಂದೇಶ ಕಳಿಸಲಾಗಿದೆ ಎಂದು ಟೈಸನ್ ಬಿಷ್ಣೋಯ್ ಜೋರಾ ಸಿಧು ಎಂಬ ಫೇಸ್ಬುಕ್ ಖಾತೆಯ ವಿಡಿಯೋದಿಂದ ತಿಳಿದುಬಂದಿದೆ. 2025ರ ಜುಲೈನಲ್ಲಿ ಶರ್ಮಾರ ನೂತನ ಕೆಫೆ ಆರಂಭವಾದ ಕೆಲವೇ ದಿನಗಳಲ್ಲಿ ಗುಂಡಿನ ದಾಳಿ ನಡೆದಿತ್ತು. ಆಗಸ್ಟ್‌ನಲ್ಲಿ 2ನೇ ಬಾರಿ ಮತ್ತು ಅಕ್ಟೋಬರ್‌ನಲ್ಲಿ 3ನೇ ಬಾರಿ ಇದೇ ರೀತಿ ದಾಳಿಯಾಗಿತ್ತು.



- ಕಳೆದ ವರ್ಷದಿಂದ 4 ಬಾರಿ ಘಟನೆ
- ನಿರಂತರ ಜೀವಬೆದರಿಕೆ ಸಂದೇಶ

ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಪಂಜಾಬ್	08	06	01	01	+1.043	13
ಆರ್‌ಸಿಬಿ	09	06	03	00	+1.420	12
ಹೈದ್ರಾಬಾದ್	10	06	04	00	+0.644	12
ರಾಜಸ್ಥಾನ	10	06	04	00	+0.510	12
ಗುಜರಾತ್	09	05	04	00	-0.192	10
ಚೆನ್ನೈ	09	04	05	00	+0.005	08
ಡೆಲ್ಲಿ	09	04	05	00	-0.895	08
ಕೋಲ್ಕತಾ	09	03	05	01	-0.539	07
ಮುಂಬೈ	09	02	07	00	-0.803	04
ಲಖನೌ	08	02	06	00	-1.106	04

ಸುದ್ದಿ ಸಿಂಚನ

ಐಪಿಎಲ್‌ನ ಹತ್ತೊಂಬತ್ತು ಆವೃತ್ತಿಯಲ್ಲೂ ಆಡಿದ 3ನೇ ಕ್ರಿಕೆಟಿಗ ಮನೀಶ್ ಪಾಂಡೆ

ಹೈದರಾಬಾದ್: ಕರ್ನಾಟಕದ ಮನೀಶ್ ಪಾಂಡೆ ಐಪಿಎಲ್‌ನ ಎಲ್ಲಾ 19 ಆವೃತ್ತಿಗಳಲ್ಲೂ ಆಡಿದ 3ನೇ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಭಾನುವಾರ ಸನ್‌ರೈಸರ್ಸ್ ವಿರುದ್ಧ ಪಂದ್ಯದಲ್ಲಿ ಕೋಲ್ಕತಾ ಪರ ಕಣಕ್ಕಿಳಿಯುವ ಮೂಲಕ ಅವರು ಈ ಮೈಲುಗಲ್ಲು ಸಾಧಿಸಿದರು. ಕೆಕೆಆರ್‌ನ ಆರಂಭಿಕ 8 ಪಂದ್ಯಗಳಲ್ಲಿ ಮನೀಶ್‌ಗೆ ಆಡುವ ಅವಕಾಶ ಸಿಕ್ಕಿರಲಿಲ್ಲ. ಸನ್‌ರೈಸರ್ಸ್ ವಿರುದ್ಧ ಆಡಿ ದರೂ ಬ್ಯಾಟಿಂಗ್‌ಗೆ ಅವಕಾಶ ಸಿಗಲಿಲ್ಲ. ಮನೀಶ್‌ಗೂ ಮುನ್ನ ವಿರಾಟ್ ಕೊಹ್ಲಿ, ರೋಹಿತ್ ಎಲ್ಲಾ 19 ಆವೃತ್ತಿಗಳಲ್ಲಿ ಆಡಿದ ಸಾಧನೆ ಮಾಡಿದ್ದಾರೆ. ಉಳಿದಂತೆ ಎಂ.ಎಸ್.ಧೋನಿ ಈ ಹಿಂದಿನ 18 ಆವೃತ್ತಿಗಳಲ್ಲೂ ಆಡಿದ್ದಾರೆ. ಈ ಬಾರಿ ಸಿಎಸ್‌ಕೆ ತಂಡದಲ್ಲಿದ್ದರೂ ಗಾಯದಿಂದಾಗಿ ಒಂದೂ ಪಂದ್ಯ ಆಡಿಲ್ಲ.



ಐಪಿಎಲ್‌ನಿಂದ ಸಿಎಸ್‌ಕೆ ವೇಗಿ ರಾಮಕೃಷ್ಣ ಹೊರಕ್ಕೆ

ನವದೆಹಲಿ: ಐಪಿಎಲ್‌ಗೆ ಪಾದಾರ್ಪಣೆ ಮಾಡಿದ ಕೇವಲ ಒಂದೇ ದಿನದಲ್ಲಿ ಸಿಎಸ್‌ಕೆ ವೇಗಿ ರಾಮಕೃಷ್ಣ ಘೋಷ್ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಅವರು ಶನಿವಾರ ಮುಂಬೈ ವಿರುದ್ಧ ಪಂದ್ಯದಲ್ಲಿ ಆಡಿದ್ದರು. ಆದರೆ ಪಂದ್ಯದಲ್ಲಿ ಬಲಗಾಲಿಗೆ ಗಾಯವಾಗಿದ್ದು, ಇನ್ನುಳಿದ ಪಂದ್ಯ ಆಡುವುದಿಲ್ಲ ಎಂದು ಫ್ರಾಂಚೈಸಿ ತಿಳಿಸಿದೆ.



ಇಂದಿನಿಂದ ತುಮಕೂರು ಓಪನ್ ಪ್ರಧಾನ ಸುತ್ತು



ತುಮಕೂರು: ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ ಡಬ್ಲ್ಯು35 ಟೂರ್ನಿಯ ಪ್ರಧಾನ ಸುತ್ತಿನ ಪಂದ್ಯಗಳು ಸೋಮವಾರ ಆರಂಭಗೊಳ್ಳಲಿದ್ದು, ಮೇ 10ರಂದು ಕೊನೆಗೊಳ್ಳಲಿದೆ. ಭಾರತ ಮಾತ್ರವಲ್ಲದೇ ವಿಶ್ವದ ಹಲವು ಟೆನಿಸಿಗರು ಟೂರ್ನಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಶನಿವಾರ ಅರ್ಹತಾ ಸುತ್ತು ನಡೆಯಿತು. ಶ್ರೀನಿತಿ ಚೌಧರಿ, ಸ್ನಿಗ್ಧಾ ಕಾಂತಾ ಸೇರಿ ಪ್ರಮುಖರು ಗೆದ್ದಿದ್ದಾರೆ. ಸೋಮವಾರವೂ ಅರ್ಹತಾ ಸುತ್ತು ನಡೆಯಲಿದ್ದು, 8 ಮಂದಿ ಪ್ರಧಾನ ಸುತ್ತಿಗೇರಲಿದ್ದಾರೆ.

ಸನ್ ಓಟಕ್ಕೆ ಕೆಕೆಆರ್ ಬ್ರೇಕ್

ಸತತ 5 ಪಂದ್ಯ ಗೆದ್ದಿದ್ದ ಸನ್‌ರೈಸರ್ಸ್‌ಗೆ ಕೆಕೆಆರ್ ವಿರುದ್ಧ ಸೋಲು | ಅಬ್ಬರಿಸಿ ಕುಸಿದ ಸನ್ 165/10 | 18.2 ಓವರ್‌ಗಳಲ್ಲಿ ಗೆದ್ದ ಕೆಕೆಆರ್

ಹೈದರಾಬಾದ್: ಆರಂಭಿಕ 4 ಪಂದ್ಯಗಳ ಪೈಕಿ 3ರಲ್ಲಿ ಸೋತರೂ ಬಳಿಕ ಸತತವಾಗಿ 5 ಪಂದ್ಯಗಳಲ್ಲಿ ಜಯಭೇರಿ ಮೊಳಗಿಸಿದ್ದ ಸನ್‌ರೈಸರ್ಸ್ ಹೈದರಾಬಾದ್‌ಗೆ ಭಾನುವಾರ ಕೋಲ್ಕತಾ ಆಘಾತ ನೀಡಿದೆ. ಬೌಲರ್‌ಗಳ ನಿಖರ ದಾಳಿ ನೆರವಿನಿಂದ ಕೆಕೆಆರ್7 ವಿಕೆಟ್ ಜಯಗಳಿಸಿದೆ. ಸನ್‌ರೈಸರ್ಸ್ 10ರಲ್ಲಿ 4ನೇ ಸೋಲು ಕಂಡರೆ, ಕೆಕೆಆರ್ 9ರಲ್ಲಿ 3ನೇ ಜಯ ದಾಖಲಿಸಿತು.

ಸನ್‌ರೈಸರ್ಸ್ ಮೊದಲು ಬ್ಯಾಟ್ ಮಾಡಿ 19 ಓವರ್‌ಗಳಲ್ಲಿ 165 ರನ್‌ಗೆ ಆಲೌಟಾಯಿತು. 9ನೇ ಓವರ್ ವೇಳೆ 1 ವಿಕೆಟ್ ನಷ್ಟದಲ್ಲಿ 100ರ ಗಡಿ ದಾಟಿದ್ದ ಸನ್ ಬಳಿಕ ದಿಢೀರ್ ಕುಸಿಯಿತು. ಟ್ರ್ಯಾವಿಸ್ ಹೆಡ್ 28 ಎಸೆತಕ್ಕೆ 61, ಇಶಾನ್ ಕಿಶನ್ 29 ಎಸೆತಕ್ಕೆ 42 ರನ್ ಗಳಿಸಿ ಔಟಾದ ಬಳಿಕ ಇತರರು ವಿಫಲರಾದರು.

ಸ್ಪರ್ಧಾತ್ಮಕ ಗುರಿಯನ್ನು ಕೆಕೆಆರ್18.2 ಓವರ್‌ಗಳಲ್ಲಿ ಬೆನ್ನತ್ತಿ ಗೆದ್ದಿತು. ನಾಯಕ ಅಜಿಂಕ್ಯ ರಹಾನೆ 43, ರಘುವಂಶಿ 59, ಫಿನ್ ಆ್ಯಲೆನ್ 13 ಎಸೆತಕ್ಕೆ 29, ರಿಂಕು ಸಿಂಗ್ ಔಟಾಗದೆ 22 ರನ್ ಗಳಿಸಿ ಕೆಕೆಆರ್‌ನ ಗೆಲ್ಲಿಸಿದರು.

ಸ್ಕೋರ್: ಸನ್‌ರೈಸರ್ಸ್ 19 ಓವರ್‌ನಲ್ಲಿ 165/10 (ಹೆಡ್ 61, ಇಶಾನ್ 41, ವರುಣ್ 3-36), ಕೆಕೆಆರ್18.2 ಓವರ್‌ನಲ್ಲಿ 169/3 (ರಘುವಂಶಿ 59, ರಹಾನೆ 43, ಸಾಕಿಬ್ 1-17)
ಪಂದ್ಯಶ್ರೇಷ್ಠ: ವರುಣ್ ಚಕ್ರವರ್ತಿ


ವರುಣ್ ಚಕ್ರವರ್ತಿ

21 ನೇ ಜಯ ಐಪಿಎಲ್‌ನಲ್ಲಿ ಸನ್‌ರೈಸರ್ಸ್ ವಿರುದ್ಧ ಕೆಕೆಆರ್ 21 ಪಂದ್ಯ ಗೆದ್ದಿದೆ. ಇದು ತಂಡದ ಜಂಟಿ ಗರಿಷ್ಠ. ಪಂಜಾಬ್ ವಿರುದ್ಧ ಕೆಕೆಆರ್ 21 ಪಂದ್ಯಗಳಲ್ಲಿ ಗೆದ್ದಿದೆ.

ಪ್ಲೇ-ಆಫ್‌ನಿಂದ ಮುಂಬೈ ಔಟ್?

ಚೆನ್ನೈ ವಿರುದ್ಧ 8 ವಿಕೆಟ್ ಸೋಲು | ಮುಂಬೈ 159/7, ಚೆನ್ನೈ 160/2 | 7ನೇ ಸೋಲು ಕಂಡ ಮುಂಬೈ | ಬಾಕಿ 5ರಲ್ಲಿ ಗೆದ್ದರೂ ಪ್ಲೇ-ಆಫ್ ಕಷ್ಟ

ಚೆನ್ನೈ: 5 ಬಾರಿ ಚಾಂಪಿಯನ್ ಮುಂಬೈ ಇಂಡಿಯನ್ಸ್, 2026ರ ಐಪಿಎಲ್‌ನ ಪ್ಲೇ-ಆಫ್ ರೇಸ್‌ನಿಂದ ಬಹುತೇಕ ಹೊರಬಿದ್ದಿದೆ. 5 ಬಾರಿ ಕಪ್ ಗೆದ್ದಿರುವ ಮತ್ತೊಂದು ತಂಡ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಶನಿವಾರ ಇಲ್ಲಿನ ಚೆಪಾಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ, ಮುಂಬೈಗೆ 8 ವಿಕೆಟ್‌ಗಳ ಹೀನಾಯ ಸೋಲು ಎದುರಾಯಿತು. 7ನೇ ಸೋಲಿನೊಂದಿಗೆ ಮುಂಬೈ 9ನೇ ಸ್ಥಾನದಲ್ಲೇ ಉಳಿದರೆ, 4ನೇ ಗೆಲುವು ಸಾಧಿಸಿದ ಚೆನ್ನೈ, ಅಂಕಪಟ್ಟಿಯಲ್ಲಿ 6ನೇ ಸ್ಥಾನಕ್ಕೇರಿದೆ.

ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಮುಂಬೈ 20 ಓವರಲ್ಲಿ 7 ವಿಕೆಟ್‌ಗೆ 159 ರನ್ ಗಳಿಸಿತು. ಮೊದಲ 11 ಓವರಲ್ಲಿ 3 ವಿಕೆಟ್‌ಗೆ 100 ರನ್ ಗಳಿಸಿದ್ದ ಮುಂಬೈ, ಕೊನೆ 9 ಓವರಲ್ಲಿ 4 ವಿಕೆಟ್ ಕಳೆದುಕೊಂಡು ಕೇವಲ 59 ರನ್ ಗಳಿಸಿತು. ನಾಯಕ ಹಾರ್ದಿಕ್ ಪಾಂಡ್ಯ 23 ಎಸೆತ ಎದುರಿಸಿ ಕೇವಲ 18 ರನ್ ಗಳಿಸಿದ್ದು ತಂಡಕ್ಕೆ ಹಿನ್ನಡೆ ಉಂಟು ಮಾಡಿತು. ಚೆನ್ನೈ ಪರ ಅನ್ಶುಲ್ ಕಾಂಬೋಜ್ ಹಾಗೂ ನೂರ್ ಅಹ್ಮದ್ ಅತ್ಯುತ್ತಮ ಬೌಲಿಂಗ್ ದಾಳಿ ಸಂಘಟಿಸಿ, ಮುಂಬೈ ಇಂಡಿಯನ್ಸ್ ಬ್ಯಾಟರ್‌ಗಳನ್ನು ಕಟ್ಟಿಹಾಕಿದರು.


ಸತತ 2ನೇ 50 ಬಾರಿಸಿದ ಋತುರಾಜ್

ಚೆನ್ನೈ ಎಚ್ಚರಿಕೆ ಆಟ: ಸುಲಭ ಗುರಿ ಬೆನ್ನತ್ತಿದ ಚೆನ್ನೈ, ಆರಂಭದಲ್ಲೇ ಸಂಜು ಸ್ಯಾಮ್ಸನ್ (11)ರ ವಿಕೆಟ್ ಕಳೆದುಕೊಂಡಿತು. ಆದರೆ ನಾಯಕ ಋತುರಾಜ್ ಗಾಯಕ್ವಾಡ್ ಲಯ ಕಾಯ್ದುಕೊಂಡು ಕೊನೆವರೆಗೂ ಕ್ರೀಸ್‌ನಲ್ಲಿ ನಿಂತರು. ಊರ್ವಿಲ್ ಪಟೇಲ್ 12 ಎಸೆತದಲ್ಲಿ 27 ರನ್ ಸಿಡಿಸಿ, ರನ್ ಗಳಿಕೆಗೆ ವೇಗ ತುಂಬಿದರೆ, ಇಂಪ್ಯಾಕ್ಟ್ ಆಟಗಾರನಾಗಿ ಕ್ರೀಸ್‌ಗಿಳಿದ ಕಾರ್ತಿಕ್ ಶರ್ಮಾ 40 ಎಸೆತದಲ್ಲಿ ಔಟಾಗದೆ 54 ರನ್‌ಗಳಿಸಿದರು. ಐಪಿಎಲ್‌ನಲ್ಲಿ ಕಾರ್ತಿಕ್‌ಗೆ ಇದು ಚೊಚ್ಚಲ ಅರ್ಧಶತಕ. ಋತುರಾಜ್ 48 ಎಸೆತದಲ್ಲಿ ಔಟಾಗದೆ 67 ರನ್ ಗಳಿಸಿ, ತಂಡವನ್ನು 18.1 ಓವರಲ್ಲಿ ಜಯದ ದಡ ಸೇರಿಸಿದರು.

ಸ್ಕೋರ್: ಮುಂಬೈ 20 ಓವರಲ್ಲಿ 159/7 (ನಮನ್ 57, ರಿಕೆಲ್ಟನ್ 37, ಅನ್ಶುಲ್ 3-32, ನೂರ್ 2-26), ಚೆನ್ನೈ 18.1 ಓವರಲ್ಲಿ 160/2 (ಋತುರಾಜ್ 67*, ಕಾರ್ತಿಕ್ 54*, ಬೂಮ್ರಾ 1-20)
ಪಂದ್ಯಶ್ರೇಷ್ಠ: ಋತುರಾಜ್ ಗಾಯಕ್ವಾಡ್

ಮುಂಬೈ vs ಲಖನೌ ಸೆಣಸು

ಮುಂಬೈ: ಐಪಿಎಲ್‌ನಲ್ಲಿ ಸೋಮವಾರ ಮುಂಬೈ ಇಂಡಿಯನ್ಸ್ ಹಾಗೂ ಲಖನೌ ಸೂಪರ್ ಜೈಂಟ್ಸ್ ನಡುವೆ ಮಾಡು ಇಲ್ಲವೇ ಮಡಿ ಪಂದ್ಯ ನಡೆಯಲಿದೆ. 5 ಬಾರಿ ಚಾಂಪಿಯನ್ ಮುಂಬೈ ತಂಡ ಈ ಐಪಿಎಲ್‌ನಲ್ಲಿ ಆಡಿರುವ 9 ಪಂದ್ಯಳ ಪೈಕಿ 7 ಪಂದ್ಯ ಸೋತಿದ್ದು, ಈ ಪಂದ್ಯದಲ್ಲೂ ಶರಣಾದರೆ ಪ್ಲೇ-ಆಫ್ ರೇಸ್‌ನಿಂದ ಹೊರಬೀಳಲಿದೆ. ಮತ್ತೊಂದೆಡೆ 8 ಪಂದ್ಯದಲ್ಲಿ 6ರಲ್ಲಿ ಸೋತಿರುವ ಲಖನೌ ಈ ಪಂದ್ಯದಲ್ಲಿ ಸೋತರೆ ಪ್ಲೇ-ಆಫ್ ಕನಸು ಬಹುತೇಕ ಭಗ್ನಗೊಳ್ಳಲಿದೆ.
ಪಂದ್ಯ ಆರಂಭ: ಸಂಜೆ 7.30ಕ್ಕೆ

ಥಾಮಸ್ ಕಪ್: ಸೆಮೀಸಲ್ಲಿ ಸೋತು ಭಾರತ ಕಂಚಿಗೆ ತೃಪ್ತಿ

ಫ್ರಾನ್ಸ್ ವಿರುದ್ಧ 0–3 ಅಂತರದಲ್ಲಿ ಪರಾಭವ

ಹಾರ್ಸೆನ್ಸ್(ಡೆನ್ಮಾರ್ಕ್): ಥಾಮಸ್ ಕಪ್ ಫೈನಲ್ಸ್ ಪುರುಷರ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಮಾಜಿ ಚಾಂಪಿಯನ್ ಭಾರತ ಕಂಚಿನ ಪದಕಕ್ಕೆ ತೃಪ್ತಿಪಟ್ಟುಕೊಂಡಿದೆ.

ಶನಿವಾರ ರಾತ್ರಿ ನಡೆದ ಸೆಮಿಫೈನಲ್‌ನಲ್ಲಿ ಭಾರತಕ್ಕೆ ಫ್ರಾನ್ಸ್ ಎದುರು 0-3 ಅಂತರದಲ್ಲಿ ಸೋಲು ಎದುರಾಯಿತು. ಲಕ್ಷ್ಯ ಸೇನ್ ಅಲಭ್ಯ ಭಾರತಕ್ಕೆ ಹಿನ್ನಡೆಯಾಯಿತು. ಮೊದಲ ಸಿಂಗಲ್ಸ್‌ನಲ್ಲಿ ಕನ್ನಡಿಗ ಆಯುಶ್ ಶೆಟ್ಟಿ, ವಿಶ್ವ ನಂ.4 ಕ್ರಿಸ್ಟೊ ಪೊಪೊವ್ ವಿರುದ್ಧ 11-21, 9-21 ಗೇಮ್‌ಗಳಲ್ಲಿ ಸೋತರೆ, 2ನೇ ಸಿಂಗಲ್ಸ್‌ನಲ್ಲಿ ಮಾಜಿ ವಿಶ್ವ ನಂ.1 ಕಿದಂಬಿ ಶ್ರೀಕಾಂತ್ ಅವರು ವಿಶ್ವ ನಂ.10 ಆಟಗಾರ ಅಲೆಕ್ಸ್ ಲೇನಿಯರ್ ವಿರುದ್ಧ 16-21, 18-21 ಗೇಮ್‌ನಲ್ಲಿ ಶರಣಾದರು. 3ನೇ ಸಿಂಗಲ್ಸ್‌ನಲ್ಲಿ ಪ್ರಣಯ್, ವಿಶ್ವನಂ.17 ಟೊಮಾ ಜೂನಿಯರ್ ಪೊಪೊವ್ ವಿರುದ್ಧ 19-21, 16-21 ಗೇಮ್‌ನಲ್ಲಿ ಸೋತಿತು. ಸೆಮೀಸ್‌ಗೇರಿದ್ದರಿಂದ ಭಾರತ ಕಂಚಿನ ಪದಕದೊಂದಿಗೆ ತವರಿಗೆ ಹಿಂದಿರುಗಿದೆ.

ಭಾರತದ 5 ರಿಲೇ ತಂಡಕ್ಕೂ ವಿಶ್ವ ಅಥ್ಲೆಟಿಕ್ಸ್ ಅರ್ಹತೆಯಿಲ್ಲ

ವಿಶ್ವ ರಿಲೇ: ಬರಿಗೈಲಿ ಹಿಂದಿರುಗಿದ ಭಾರತ

ಗ್ಯಾಬರೊನ್(ಬೋಟ್ಸ್ವಾನಾ): ವಿಶ್ವ ರಿಲೇ ಚಾಂಪಿಯನ್‌ಶಿಪ್‌ನ ಐದೂ ವಿಭಾಗಗಳಲ್ಲೂ ಭಾರತ ತಂಡ ಸಾಧಾರಣ ಪ್ರದರ್ಶನ ನೀಡಿದ್ದು, ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದುಕೊಳ್ಳಲು ವಿಫಲವಾಗಿದೆ.

ಶನಿವಾರ ಪುರುಷರ 4x100 ಮೀ., 4x400 ಮೀ., ಮಹಿಳೆಯರ 4x100 ಮೀ., ಮಿಶ್ರ 4x400 ಮೀ. ಹಾಗೂ 4x100 ತಂಡ ಫೈನಲ್ ಪ್ರವೇಶಿಸಲು ವಿಫಲವಾಗಿದ್ದವು. ಭಾನುವಾರ ವಿಶ್ವ ಅಥ್ಲೆಟಿಕ್ಸ್‌ಗೆ ಅರ್ಹತೆ ಪಡೆಯಲು ಸ್ಪರ್ಧಿಸಿದರೂ ಅದರಲ್ಲಿ ಯಶಸ್ಸು ಸಿಗಲಿಲ್ಲ. ಆದರೆ ರಗುಲ್ ಕುಮಾರ್, ನಿತ್ಯಾ, ಅನಿಮೇಶ್, ಸ್ನೇಹ ಎಸ್.ಎಸ್. ಅವರನ್ನೊಳಗೊಂಡ ಮಿಶ್ರ 4x100 ತಂಡ 41.35 ಸೆಕೆಂಡ್‌ನಲ್ಲಿ ಗುರಿ ತಲುಪಿ 6ನೇ ಸ್ಥಾನಿಯಾದರೂ, ರಾಷ್ಟ್ರೀಯ ದಾಖಲೆ ಬರೆಯಿತು.

ಬ್ರಿಜ್ ಕಿರುಕುಳ ನೀಡಿದ 6 ಜನರಲ್ಲಿ ನಾನೂ ಒಬ್ಬಳು

ಭಾರೀ ಸುದ್ದಿಯಾಗಿದ್ದ ರೆಸ್ಲರ್ಸ್ ಹೋರಾಟ ಈಗ ವಿನೇಶ್ ಫೋಗಟ್ ಬಹಿರಂಗ ಹೇಳಿಕೆ

ನವದೆಹಲಿ: ಭಾರತೀಯ ಕುಸ್ತಿ ಫೆಡರೇಶನ್(ಡಬ್ಲ್ಯುಎಫ್‌ಐ)ನ ಹಿಂದಿನ ಮುಖ್ಯಸ್ಥ, ಮಾಜಿ ಸಂಸದ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ದೇಶದ ಅಗ್ರ ಕುಸ್ತಿಪಟುಗಳು ಲೈಂಗಿಕ ಕಿರುಕುಳ, ಬೆದರಿಕೆ ಸೇರಿ ಹಲವು ಗಂಭೀರ ಆರೋಪ ಹೊರಿಸಿ ಭಾರೀ ಪ್ರತಿಭಟನೆ ನಡೆಸಿದ್ದರು. ಈ ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ. ಈಗ ಅಚ್ಚರಿಯ ಬೆಳವಣಿಗೆಯೊಂದರಲ್ಲಿ ತಾರಾ ಕುಸ್ತಿಪಟು ವಿನೇಶ್ ಫೋಗಟ್ ಅವರು, ತಾವು ಕೂಡಾ ಬ್ರಿಜ್‌ರಿಂದ ಕಿರುಕುಳಕ್ಕೊಳಗಾಗಿದ್ದೇನೆ ಎಂದಿದ್ದಾರೆ. ಅವರ ವಿರುದ್ಧ ದೂರು ಸಲ್ಲಿಸಿದ 6 ಜನರಲ್ಲಿ ನಾನೂ ಒಬ್ಬಳು ಎಂಬುದನ್ನು ಬಹಿರಂಗಪಡಿಸಿದ್ದಾರೆ.



ಉತ್ತರ ಪ್ರದೇಶದ ಗೊಂಡಾದಲ್ಲಿ ಮೇ 10ರಿಂದ ರಾಷ್ಟ್ರೀಯ ಮುಕ್ತ ರ್‍ಯಾಂಕಿಂಗ್ ಟೂರ್ನಿ ನಡೆಯಲಿದೆ. ಇದರಲ್ಲಿ ಪಾಲ್ಗೊಳ್ಳುವ ಮೂಲಕ 18 ತಿಂಗಳ ನಂತರ ಮತ್ತೆ ಕುಸ್ತಿಗೆ ಮರಳಲು ವಿನೇಶ್ ಸಜ್ಜಾಗಿದ್ದಾರೆ. ಇದಕ್ಕೂ ಮುನ್ನ ಅವರು ಭಾನುವಾರ ವೀಡಿಯೊ ಸಂದೇಶ ಬಿಡುಗಡೆ ಮಾಡಿದ್ದಾರೆ. ''ಬ್ರಿಜ್ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ದೂರು ಸಲ್ಲಿಸಿದ 6 ಮಹಿಳಾ ಕುಸ್ತಿಪಟುಗಳ ಪೈಕಿ ನಾನೂ ಒಬ್ಬಳು. ಪ್ರಕರಣ ಇನ್ನೂ ನ್ಯಾಯಾಲಯದಲ್ಲಿದೆ. ಬ್ರಿಜ್‌ಗೆ ಸಂಬಂಧಿಸಿದ ಸ್ಥಳದಲ್ಲಿ ಟೂರ್ನಿ ನಡೆಸುವುದರಿಂದ ಮಾನಸಿಕ ಒತ್ತಡ ಬೀರುತ್ತಿದೆ' ಎಂದು ಹೇಳಿದ್ದಾರೆ.

ಗೊಂಡಾದಲ್ಲಿ ತಮ್ಮ ಸುರಕ್ಷತೆ ಬಗ್ಗೆಯೂ ವಿನೇಶ್ ಆತಂಕ

ಬ್ರಿಜ್ ಸಂಸದರಾಗಿದ್ದ ಗೊಂಡಾ ಕ್ಷೇತ್ರದಲ್ಲೇ ಈ ಬಾರಿ ಟೂರ್ನಿ ನಡೆಯುತ್ತಿದೆ. ಹೀಗಾಗಿ ಅಲ್ಲಿ ತಮ್ಮ ಸುರಕ್ಷತೆ ಬಗ್ಗೆ ವಿನೇಶ್ ಆತಂಕ ವ್ಯಕ್ತಪಡಿಸಿದ್ದಾರೆ. 'ಸ್ಪರ್ಧೆ ಸಮಯದಲ್ಲಿ ನನಗೆ, ನನ್ನ ತಂಡಕ್ಕೆ, ಬೆಂಬಲಿಗರಿಗೆ ಯಾವುದೇ ಅಹಿತಕರ ಘಟನೆ ಸಂಭವಿಸಿದರೆ ಭಾರತ ಸರ್ಕಾರ ಹೊಣೆ. ಪಾರದರ್ಶಕತೆ ಖಚಿತಪಡಿಸಿಕೊಳ್ಳಲು ಮಾಧ್ಯಮಗಳು ಸ್ಥಳದಲ್ಲಿರಬೇಕು. ಅವರ(ಬ್ರಿಜ್ ಭೂಷಣ್ ಸಿಂಗ್) ಪ್ರಭಾವವಿರುವ ಸ್ಥಳದಲ್ಲಿ ಟೂರ್ನಿ ಆಯೋಜಿಸಲಾಗುತ್ತಿದೆ. ಯಾವ ಪಂದ್ಯ ಯಾರು ನಿರ್ವಹಿಸುತ್ತಾರೆ, ಎಷ್ಟು ಅಂಕ ನೀಡಲಾಗುತ್ತದೆ, ಯಾರು ಮ್ಯಾಟ್ ಅಧ್ಯಕ್ಷರಾಗಿ ಕುಳಿತುಕೊಳ್ಳುತ್ತಾರೆ, ಎಲ್ಲವನ್ನೂ ಅವರು ಮತ್ತು ಅವರ ಜನರು ನಿಯಂತ್ರಿಸಬಹುದು' ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಇದನ್ನು ಡಬ್ಲ್ಯುಎಫ್‌ಐ ನಿರಾಕರಿಸಿದ್ದು, ವಿನೇಶ್‌ರ ಸುರಕ್ಷತೆ ಹಾಗೂ ಪಾರದರ್ಶಕ ಟೂರ್ನಿಯ ಬಗ್ಗೆ ಖಚಿತಪಡಿಸಿದ್ದಾರೆ.

₹15,600 ಕೋಟಿಗೆ ರಾಯಲ್ಸ್ ಖರೀದಿಸಿದ ಮಿತ್ತಲ್ ಕುಟುಂಬ

ಟೀಂ ಖರೀದಿ ಒಪ್ಪಂದದಿಂದ ಕಲ್ ಸೊಮಾನಿ ಹಿಂದಕ್ಕೆ ಆದಾರ್ ಜತೆಗೂಡಿ ಫ್ರಾಂಚೈಸಿ ಪಾಲು ಪಡೆದ ಮಿತ್ತಲ್

ನವದೆಹಲಿ: ಐಪಿಎಲ್‌ನ ಚೊಚ್ಚಲ ಆವೃತ್ತಿಯ ಚಾಂಪಿಯನ್ ರಾಜಸ್ಥಾನ ರಾಯಲ್ಸ್ ತಂಡ ಬರೋಬ್ಬರಿ ₹15600 ಕೋಟಿಗೆ(1.65 ಬಿಲಿಯನ್ ಡಾಲರ್) ಮಾರಾಟವಾಗಿದ್ದು, ಇದರ ಬಹುತೇಕ ಪಾಲನ್ನು ಪ್ರಮುಖ ಕೈಗಾರಿಕೋದ್ಯಮಿ ಲಕ್ಷ್ಮಿ ಮಿತ್ತಲ್ ಹಾಗೂ ಅವರ ಮಗ ಆದಿತ್ಯ ಮಿತ್ತಲ್ ಖರೀದಿಸಿದ್ದಾರೆ. ಇದನ್ನು ಮಿತ್ತಲ್ ಕುಟುಂಬ ಖಚಿತಪಡಿಸಿದೆ. ಇದರೊಂದಿಗೆ ಅಮೆರಿಕದ ಉದ್ಯಮಿ ಕಲ್ ಸೊಮಾನಿ ನೇತೃತ್ವದ ಸಮೂಹವು ಫ್ರಾಂಚೈಸಿಯನ್ನು ಖರೀದಿಸುವ ವರದಿಗೆ ತೆರೆ ಬಿದ್ದಿದೆ.

ಇತ್ತೀಚೆಗೆ ಆದಿತ್ಯ ಬಿರ್ಲಾ ಸಮೂಹವು ಆರ್‌ಸಿಬಿಯನ್ನು ಖರೀದಿಸಿದ ಸಂದರ್ಭದಲ್ಲೇ ರಾಜಸ್ಥಾನ ರಾಯಲ್ಸ್‌ಅನ್ನು ಸೊಮಾನಿ ಸಮೂಹವು ಖರೀದಿಸಿದ ಬಗ್ಗೆ ವರದಿಯಾಗಿತ್ತು. ಆದರೆ ಅಚ್ಚರಿ ಎಂಬಂತೆ ಖರೀದಿ ಒಪ್ಪಂದಿಂದ ಸೊಮಾನಿ ತಂಡ ಹಿಂದಕ್ಕೆ ಸರಿದಿದೆ. ಹೀಗಾಗಿ ಮಿತ್ತಲ್ ಕುಟುಂಬವು ಸೀರಂ ಇನ್‌ಸ್ಟಿಟ್ಯೂಟ್ ಸಿಇಒ ಆದಾರ್ ಪೂನಾವಾಲ್ ಜೊತೆಗೂಡಿ ತಂಡವನ್ನು ಖರೀದಿಸಿದೆ. ಮಿತ್ತಲ್ ಕುಟುಂಬ ಶೇ.75ರಷ್ಟು ಪಾಲು ಖರೀದಿಸಿದ್ದು, ಪೂನಾವಾಲಾ ಶೇ.18 ಪಾಲು ಹೊಂದಿದ್ದಾರೆ. ಉಳಿದ ಶೇ.7ರಷ್ಟು ಪಾಲನ್ನು ಈಗಾಗಲೇ ಮಾಲಿಕತ್ವ ಹೊಂದಿದ್ದ ಮನೋಜ್ ಬಾದಲೆ ತಮ್ಮದಾಗಿಸಿಕೊಂಡಿದ್ದಾರೆ.

ರಾಜಸ್ಥಾನ ರಾಯಲ್ಸ್ ಐಪಿಎಲ್ ತಂಡದ ಜೊತೆಗೆ ದಕ್ಷಿಣ ಆಫ್ರಿಕಾದ ಪಾರ್ಲ್ ರಾಯಲ್ಸ್ ಹಾಗೂ ಕೆರಿಬಿಯನ್‌ನ ಬಾರ್ಬಡೊಸ್ ರಾಯಲ್ಸ್ ತಂಡವೂ ಮಿತ್ತಲ್, ಪೂನಾವಾಲಾ ಮಾಲಿಕತ್ವಕ್ಕೆ ಒಳಪಡಲಿದೆ.



ಹಿಂದಕ್ಕೆ ಸರಿದು ಸೊಮಾನಿ ಅಚ್ಚರಿ

ಮಾರ್ಚ್‌ನಲ್ಲಿ ತಂಡ ಖರೀದಿ ಪ್ರಕ್ರಿಯೆ ವೇಳೆ ಕಲ್ ಸೊಮಾನಿ ನೇತೃತ್ವದ ಸಮೂಹ ಹಲವು ಸುತ್ತಿನ ಬಿಡ್ಡಿಂಗ್ ಬಳಿಕ ರೇಸ್‌ನಲ್ಲಿ ಮುಂಚೂಣಿಯಲ್ಲಿತ್ತು. ಲ್ಯಾನ್ಸರ್ ಕ್ಯಾಪಿಟಲ್ ಮುಖ್ಯಸ್ಥ ಅವ್ರಾಮ್ ಗ್ಲೇಜರ್, ಕ್ಯಾಪ್ರಿ ಗ್ರೂಪ್, ಆದಿತ್ಯ ಬಿರ್ಲಾ ಗ್ರೂಪ್ ಮತ್ತು ಟೈಮ್ಸ್ ಗ್ರೂಪ್ ಸೇರಿದಂತೆ ಪ್ರತಿಸ್ಪರ್ಧಿಗಳನ್ನು ಅವರು ಹಿಂದಿಕ್ಕಿದ್ದರು. ಈಗ ಅಚ್ಚರಿ ಎಂಬಂತೆ ಒಪ್ಪಂದದಿಂದ ಕಲ್ ಸೊಮಾನಿ ಸಮೂಹ ಹಿಂದಕ್ಕೆ ಸರಿದಿದೆ. ಇದಕ್ಕೆ ಕಾರಣ ಏನು ಎಂಬುದು ಇನ್ನೂ ಖಚಿತವಾಗಿಲ್ಲ. ಖರೀದಿ ಪ್ರಕ್ರಿಯೆ ವೇಳೆ ಘೋಷಿಸಲಾಗಿದ್ದ ಮೊತ್ತ ತಮ್ಮಲ್ಲಿರುವುದಾಗಿ ಸಾಬೀತುಪಡಿಸಲು ಸಮೂಹ ವಿಫಲವಾದ ಕಾರಣ ಒಪ್ಪಂದ ಮುರಿದು ಬಿದ್ದಿದೆ ಎಂದು ಹೇಳಲಾಗುತ್ತಿದೆ.

ಫುಟ್ಬಾಲ್: ಇಂದು vs ಬಿಎಫ್‌ಸಿ ಒಡಿಶಾ

ಭುವನೇಶ್ವರ: ಇಂಡಿಯನ್ ಸೂಪರ್ ಲೀಗ್(ಐಎಸ್‌ಎಲ್) ಫುಟ್ಬಾಲ್ ಲೀಗ್‌ನಲ್ಲಿ ಸೋಮವಾರ ಮಾಜಿ ಚಾಂಪಿಯನ್ ಬೆಂಗಳೂರು ಎಫ್‌ಸಿ ತಂಡ ಒಡಿಶಾ ಎಫ್‌ಸಿ ವಿರುದ್ಧ ಆಡಲಿದೆ. ಬೆಂಗಳೂರು ತಂಡ ಈ ಆವೃತ್ತಿಯಲ್ಲಿ ಆಡಿರುವ 10 ಪಂದ್ಯಗಳ ಪೈಕಿ 4ರಲ್ಲಿ ಗೆದ್ದಿದ್ದು, 16 ಅಂಕಗಳೊಂದಿಗೆ ಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದೆ. ಮತ್ತೊಂದೆಡೆ ಒಡಿಶಾ 9 ಪಂದ್ಯಗಳಲ್ಲಿ ಕೇವಲ 1ರಲ್ಲಿ ಗೆದ್ದಿದೆ. ತಂಡ 6 ಅಂಕ ಗಳಿಸಿದೆ. **ಪಂದ್ಯ ಆರಂಭ: ಸಂಜೆ 7.30ಕ್ಕೆ**

ದೇಶ.ವಿದೇಶ

ಸಮುದ್ರದಲ್ಲಿ 22 ಮೀ. ಮಾನವ ಗೋಪುರ: ದಾಖಲೆ

ಎರಡು ದಿನಗಳಲ್ಲಿ 2 ಗಿನ್ನೆಸ್ ದಾಖಲೆ ನಿರ್ಮಾಣ | ಮೊನ್ನೆ ನೀರಿನಲ್ಲಿ ತ್ರಿವರ್ಣ ಧ್ವಜ ಅನಾವರಣ

ಶ್ರೀವಿಜಯಪುರಂ: ಅಂಡಮಾನ್ ಮತ್ತು ನಿಕೋಬಾರ್‌ನ ಸ್ವರಾಜ್ ದ್ವೀಪದ(ಹೆವಲಾಕ್ ದ್ವೀಪ) ಬಳಿ ಸಮುದ್ರದಲ್ಲಿ ಜಗತ್ತಿನ ಅತಿ ಎತ್ತರದ ಅಂತರ್ಜಲ ಮಾನವ ಗೋಪುರವನ್ನು ರಚಿಸುವ ಮೂಲಕ ಭಾನುವಾರ ಮತ್ತೊಂದು ಗಿನ್ನೆಸ್ ದಾಖಲೆ ಬರೆಯಲಾಗಿದೆ.

ಲೆಫ್ಟಿನೆಂಟ್ ಗವರ್ನರ್ ಡಿ.ಕೆ. ಜೋಶಿ ಸೇರಿದಂತೆ 14 ಮಂದಿ ಈ ಸಾಧನೆಯಲ್ಲಿ ಭಾಗವಹಿಸಿದ್ದು, 22.3 ಮೀ. ಉದ್ದದ ಮಾನವ ಗೋಪುರವನ್ನು ನಿರ್ಮಿಸಿ 3 ನಿಮಿಷಗಳ ಕಾಲ ನೀರಿನಡಿಯಲ್ಲೇ ಉಳಿದು ಈ ಸಾಧನೆ ಮಾಡಿದ್ದಾರೆ. ಈ ಮೂಲಕ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಕೇವಲ ಎರಡು ದಿನಗಳಲ್ಲಿ 2 ಗಿನ್ನೆಸ್ ದಾಖಲೆ ನಿರ್ಮಿಸಿದಂತಾಗಿದೆ.


ಪ್ರಾತಿನಿಧಿಕ ಚಿತ್ರ

ಇದಕ್ಕೂ ಮುನ್ನ ಶನಿವಾರದಂದು ಅದೇ ದ್ವೀಪದ ಸಮುದ್ರದ ನೀರಿನಲ್ಲಿ 60X40 ಮೀ. ಅಳತೆಯ ತ್ರಿವರ್ಣ ಧ್ವಜವನ್ನು ಅನಾವರಣ ಮಾಡುವ ಮೂಲಕ ಗಿನ್ನಿಸ್ ದಾಖಲೆ ಸೃಷ್ಟಿಸಲಾಗಿತ್ತು. ಲೆ. ಗ. ಡಿ.ಕೆ. ಜೋಶಿ ಅವರು ಈ ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.


ಈ ಸಾಧನೆಗಳು ಅಂಡಮಾನ್ ಅನ್ನು ವಿಶ್ವ ಮಟ್ಟದ ಸ್ಕೂಬಾ ಡೈವಿಂಗ್ ಮತ್ತು ಪರಿಸರ ಪ್ರವಾಸೋದ್ಯಮದ ಕೇಂದ್ರವಾಗಿ ಪರಿಚಯಿಸುವ ದೊಡ್ಡ ಯೋಜನೆಯ ಭಾಗವಾಗಿವೆ. ಇದಕ್ಕಾಗಿ ಹಲವು ಇಲಾಖೆಗಳು, ತರಬೇತಿ ಪಡೆದ ಡೈವರ್‌ಗಳು ಮತ್ತು ತಾಂತ್ರಿಕ ತಂಡಗಳು ಒಟ್ಟಾಗಿ ಕೆಲಸ ಮಾಡಿದ್ದವು.

ಕಾರ್ ಬಾನೆಟ್ ಮೇಲೆ 2 ಕಿ.ಮೀ. ದೂರ ವ್ಯಕ್ತಿ ಹೊತ್ತೊಯ್ದ ಚಾಲಕ

ಮುಂಚಿತವಾಗಿ ಯೂ-ಟರ್ನ್ ಸಿಗ್ನಲ್ ನೀಡಿದ್ದಕ್ಕೆ ಕೃತ್ಯ

ಹೈದರಾಬಾದ್: ಅರ್ಧ ಕಿ.ಮೀ. ಮುಂಚಿತವಾಗಿಯೇ ಯೂ-ಟರ್ನ್ ಸಿಗ್ನಲ್ ನೀಡಿದ್ದಕ್ಕೆ ಸಿಟ್ಟಿಗೆದ್ದ ಕಾರ್ ಚಾಲಕನೊಬ್ಬ, ಬೈಕ್‌ನಲ್ಲಿ ತೆರಳುತ್ತಿದ್ದ ವ್ಯಕ್ತಿ ಒಬ್ಬರನ್ನು 2 ಕಿ.ಮೀ. ದೂರ ಕಾರಿನ ಬಾನೆಟ್ ಮೇಲೆ ಹೊತ್ತೊಯ್ದ ಆತಂಕಕಾರಿ ಘಟನೆ ಹೈದರಾಬಾದ್‌ನ ಮೀರ್‌ಪೇಟದಲ್ಲಿ ನಡೆದಿದೆ.

ಮೇ 1ರ ರಾತ್ರಿ ವ್ಯಕ್ತಿಯೊಬ್ಬರು ತಮ್ಮ ಮಗನ ಜತೆ ಬೈಕ್‌ನಲ್ಲಿ ತೆರಳುತ್ತಿದ್ದರು. ಮಗ ಬೈಕ್ ಓಡಿಸುತ್ತಿದ್ದ. ಅದೇ ದಿಕ್ಕಿನಲ್ಲಿ ಕಾರ್ ಕೂಡ ಚಲಿಸುತ್ತಿತ್ತು. ಆಗ ಮಗ ಯೂ-ಟರ್ನ್ ಸಿಗ್ನಲ್ ನೀಡಿದ್ದಾನೆ. ಆದರೆ ಅದು 500 ಮೀ. ದೂರದಲ್ಲಿತ್ತು. ಇದರಿಂದ ಸಿಟ್ಟಿಗೆದ್ದ ಕಾರ್ ಚಾಲಕ ಜಗಳಕ್ಕಿಳಿದಿದ್ದಾನೆ.



ನಂತರ ಬೈಕ್ ಸವಾರನ ಕೂದಲನ್ನು ಹಿಡಿದುಕೊಂಡೇ ಕಾರ್ ಚಲಾಯಿಸಿ, ಒಮ್ಮೆಲೆ ಕೈಬಿಟ್ಟದ್ದರಿಂದ ಆತ ರಸ್ತೆ ಮೇಲೆ ಬಿದ್ದು ಗಾಯಗೊಂಡಿದ್ದಾನೆ. ಇದನ್ನು ಪ್ರತಿಭಟಿಸಲು ತಂದೆ ಕಾರ್‌ನ ಬಾನೆಟ್ ಹತ್ತಿದ್ದಾರೆ. ಆಗ ಅವರನ್ನು 2 ಕಿಮೀ ದೂರ ಹೊತ್ತೊಯ್ದಿದ್ದಾನೆ. ಕಾರ್ ಚಾಲಕನ ಮೇಲೆ ಕೇಸು ಬಿದ್ದಿದೆ.

ರೀಲ್ಸ್ ಮಾಡಲು ನೀರಿನ ಟ್ಯಾಂಕ್ ಏರಿದ್ದ ಬಾಲಕ ಬಲಿ, ಇಬ್ಬರಿಗೆ ಗಾಯ

ವಾಯುಪಡೆ ಹೆಲಿಕಾಪ್ಟರ್‌ನಿಂದ ರಕ್ಷಣೆ | ಇಬ್ಬರು ಸೇಫ್

ಲಖನೌ: ರೀಲ್ಸ್ ಮಾಡುವ ಸಲುವಾಗಿ ಹಳೆಯ ನೀರಿನ ಟ್ಯಾಂಕ್ ಏರಿದ 5 ಹುಡುಗರಲ್ಲಿ ಒಬ್ಬ ಸಾವನ್ನಪ್ಪಿ, ಇಬ್ಬರು ಗಾಯಗೊಂಡ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಸಿದ್ಧಾರ್ಥ ನಗರ ಜಿಲ್ಲೆಯಲ್ಲಿ ಭಾನುವಾರ ನಡೆದಿದೆ. ಟ್ಯಾಂಕ್‌ನ ಮೇಲೆ ಸಿಲುಕಿದ್ದ ಇನ್ನಿಬ್ಬರನ್ನು ವಾಯುಪಡೆಯ ಹೆಲಿಕಾಪ್ಟರ್ ರಕ್ಷಿಸಿದೆ.



ಮಕ್ಕಳು ಶನಿವಾರ ಮಧ್ಯಾಹ್ನ 1 ಗಂಟೆಗೆ ನೀರಿನ ಟ್ಯಾಂಕ್ ಏರಿದ್ದರು. ಇಳಿಯುವಾಗ ಟ್ಯಾಂಕ್‌ನ ಏಣಿ ಕುಸಿದು ಮೂವರು ಕೆಳಗೆ ಬಿದ್ದರು. ಇವರಲ್ಲಿ ಸಿದ್ದಾರ್ಥ್ (10) ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಗೋಲು (12), ಸನ್ನಿಗೆ (14) ಗಂಭೀರ ಗಾಯಗಳಾಗಿವೆ. ಟ್ಯಾಂಕ್ ಮೇಲೆ ಸಿಕ್ಕಿಕೊಂಡಿದ್ದ ಪವನ್ (14) ಹಾಗೂ ಶಬಾನ್‌ನನ್ನು (12) ರಕ್ಷಿಸಲಾಗಿದೆ.

ರಕ್ಷಣೆಗೆ ಹರಸಾಹಸ: ಟ್ಯಾಂಕ್ ಮೇಲೆ ಸಿಕ್ಕಿಹಾಕಿಕೊಂಡಿದ್ದ ಇಬ್ಬರನ್ನು ರಕ್ಷಿಸಲು ಎಷ್ಟೇ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಮರುದಿನ ಬೆಳಗ್ಗೆ 5.20ಕ್ಕೆ ಗೋರಖಪುರದಿಂದ ಬಂದ ಭಾರತೀಯ ವಾಯುಪಡೆಯ ಎಂಐ-17 ವಿ5 ಹೆಲಿಕಾಪ್ಟರ್ ಕೇವಲ 15 ನಿಮಿಷಗಳಲ್ಲಿ ಟ್ಯಾಂಕ್ ಮೇಲಿದ್ದ ಹುಡುಗರನ್ನು ರಕ್ಷಿಸಿ ಏರ್‌ಲಿಫ್ಟ್ ಮಾಡಿತು.

ವಾಣಿಜ್ಯ ಸಿಲಿಂಡರ್ ದುಬಾರಿ: ಮಂಗ್ಳೂರು ಹೊಟೇಲ್ ತಿನಿಸುಗಳ ದರ ಶೇ. 15 ಹೆಚ್ಚಳ!

ಈಗಾಗಲೇ ಹೊಟೇಲ್‌ಗಳಲ್ಲಿ ಚೈನೀಸ್, ಚಾಟ್ಸ್ ಬಂದ್ | ಇನ್ನು ದೋಸೆಗೂ ಆತಂಕ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಕರಾವಳಿಯಲ್ಲಿ ಈಗ ಬಿಸಿಲ ಶಾಖಕ್ಕಿಂತ ಗ್ಯಾಸ್ ಬೆಲೆ ಏರಿಕೆಯ ಬಿಸಿ ಜನರನ್ನು ಹೆಚ್ಚು ಕಂಗಾಲಾಗಿಸಿದೆ. ಹೊಟೇಲ್ ಉದ್ಯಮಿಗಳು ಹೊಟೇಲ್ ನಡೆಸುವುದಾದರೂ ಹೇಗೆ ಎಂದು ಹೈರಾಣಾಗಿದ್ದಾರೆ. ಈ ನಡುವೆ ಮಂಗಳೂರಿನಲ್ಲಿ ಶೇ.10ರಿಂದ ಶೇ. 15ರಷ್ಟು ದರ ಹೆಚ್ಚಳಕ್ಕೆ ಹೊಟೇಲ್ ಮಾಲೀಕರು ಮುಂದಾಗಿದ್ದಾರೆ.

ವಾಣಿಜ್ಯ ಅಡುಗೆ ಅನಿಲ-ಆಟೋ ಎಲ್‌ಪಿಜಿ ಕೊರತೆ ಹಾಗೂ ದರ ಹೆಚ್ಚಳ ಹೊಟೇಲ್, ಕೇಟರಿಂಗ್ ಉದ್ಯಮವನ್ನು ಸಂಕಷ್ಟಕ್ಕೀಡು ಮಾಡಿದೆ. ಈಗಾಗಲೇ ವಾಣಿಜ್ಯ ಸಿಲಿಂಡರ್‌ದರ 993 ರು.ಗೆ ಏರಿಕೆ ಕಂಡ ಹಿನ್ನೆಲೆಯಲ್ಲಿ, ಇಷ್ಟೊಂದು ದುಬಾರಿ ಹಣ ಪಾವತಿಸಿ ಹೊಟೇಲ್ ನಡೆಸುವುದು ಹೇಗೆ ಎಂಬ ಪ್ರಶ್ನೆ ಹೊಟೇಲ್ ಮಾಲೀಕರನ್ನು ಕಾಡತೊಡಗಿದೆ.

ಗ್ಯಾಸ್ ಬೆಲೆ ಏರಿದೆ ಎಂದು ತಿಂಡಿ ತಿನಸುಗಳ ದರ ಹೆಚ್ಚಳ ಮಾಡಿದರೆ ಗ್ರಾಹಕರಿಗೆ ಹೊರೆಯಾಗುತ್ತದೆ. ಸದ್ಯ ತೀವ್ರ ಸೆಖೆಯ ಕಾರಣದಿಂದಾಗಿ ಗ್ರಾಹಕರ ಸಂಖ್ಯೆ ಇಳಿಮುಖದಲ್ಲಿದೆ. ಈಗ ದರ ಏರಿಸಿದರೆ ಇರುವ ಗ್ರಾಹಕರನ್ನೂ ಕಳೆದುಕೊಳ್ಳಬೇಕಾದೀತು. ಹೆಚ್ಚು ಗ್ಯಾಸ್ ಬಳಕೆಯಾಗುವ ಚೈನೀಸ್, ಚಾಟ್ಸ್‌ಗಳನ್ನು ಬಂದ್ ಮಾಡಲಾಗಿದೆ. ಕಟ್ಟಿಗೆ ಮೊರೆ ಹೋಗಲು ತುಂಬ ಹೊಟೇಲ್‌ಗಳಿಗೆ ಜಾಗದ ಕೊರತೆ ಇದೆ. ಮೇಲಾಗಿ ಅಡುಗೆಯವರಿಗೆ ಸೌದೆ ಒಲೆಯಲ್ಲಿ ಅಡುಗೆ ಮಾಡಿ ಅನುಭವವಿಲ್ಲದ ಕಾರಣ ಪ್ರಯೋಗ ನಡೆಸುವುದು ಅಪಾಯಕಾರಿ. ಸಾಧ್ಯವಾದಷ್ಟು ನಡೆಸುತ್ತೇವೆ. ಇಲ್ಲ ಎಂದಾದರೆ ಬಂದ್ ಮಾಡುವುದೊಂದೇ ದಾರಿ ಎನ್ನುತ್ತಾರೆ ಹೊಟೇಲ್ ಮಾಲೀಕರು.

FILEPHOTO



ಕೇಟರಿಂಗ್‌ಗೆ ಹೊಡೆತ: ಗ್ಯಾಸ್ ದರ ಹೆಚ್ಚಳವಾಗಿರುವುದು ಕೇಟರಿಂಗ್ ಮಾಲೀಕರಿಗೆ ತೀವ್ರ ಹೊರೆಯಾಗಿದೆ. ಅನೇಕರು ಕೊನೇ ಹಂತದಲ್ಲಿ ವಹಿಸಿಕೊಂಡಿದ್ದ ಕಾರ್ಯಕ್ರಮದ ಆರ್ಡರ್‌ಗಳನ್ನು ರದ್ದುಗೊಳಿಸುವ ಹಂತಕ್ಕೂ ತಲುಪಿದ್ದಾರೆ. ಗ್ಯಾಸ್ ಮೂಲಕ ಅಡುಗೆ ಮಾಡುವವರು ದೊಡ್ಡ ಆರ್ಡರ್‌ಗಳನ್ನು ಪಡೆಯುತ್ತಿಲ್ಲ. ಸೌದೆ ಒಲೆ ಅವಲಂಬಿಸಿರುವವರಿಗೆ ಹೆಚ್ಚಿನ ಸಮಸ್ಯೆ ಇಲ್ಲ, ಆದರೂ ಗ್ಯಾಸ್ ಬೇಕೇ ಬೇಕು. ಆದರೆ ಗ್ಯಾಸ್‌ನಿಂದ ಸೌದೆ ಒಲೆಗೆ ವರ್ಗಾವಣೆಯಾದವರಿಗೆ ಬಾಣಸಿಗರ ಕೊರತೆ ಯಾಗುತ್ತಿದೆ. ಒಂದು ದಿನ ಕೆಲಸಕ್ಕೆ ಬಂದವರು ಎರಡು ದಿನ ರಜೆ ಹಾಕುತ್ತಿದ್ದು, ಕೊನೆಯ ಹಂತದಲ್ಲಿ ತೀವ್ರ ಒತ್ತಡಕ್ಕೆ ಕಾರಣವಾಗುತ್ತಿದೆ. ಕಾರ್ಯಕ್ರಮ ಆಯೋಜಕರೂ ಜನಸಂಖ್ಯೆಯನ್ನು ಸೀಮಿತಗೊಳಿಸುತ್ತಿದ್ದಾರೆ. ಒಂದೇ ಬಾರಿ ಹಲವು ಸಿಲಿಂಡರ್‌ಖರೀದಿಸುವ ಕಾರಣ ಪ್ರತೀ ಸಿಲಿಂಡರ್ 3,000 ರು.ಗಳಂತೆ ಸಿಕ್ಕಿದೆ ಎನ್ನುತ್ತಾರೆ ಕೇಟರಿಂಗ್ ಮಾಲೀಕರು.

> ವಾಣಿಜ್ಯ ಸಿಲಿಂಡರ್ ಬೆಲೆ 993 ರು.ಗೆ ಏರಿಕೆ ಕಂಡ ಕಾರಣ ಹೊಟೇಲ್‌ಗಳಲ್ಲಿ ತಿಂಡಿ, ತಿನಿಸುಗಳ ದರ ಏರಿಕೆ ಮಾಡುವುದು ಅನಿವಾರ್ಯವಾಗಿದೆ. ಶೇ. 10ರಿಂದ ಶೇ. 15ರಷ್ಟು ದರ ಏರಿಕೆ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಇದು ತಕ್ಷಣದಿಂದಲೇ ಜಾರಿಯಾದರೂ ಆದೀತು. ದೊಡ್ಡ ಹಾಲ್‌ಗಳಿಗೆ ಸಿಲಿಂಡರ್ 5 ಸಾವಿರ ರು. ವರೆಗೆ ಬಿಕರಿಯಾಗುತ್ತಿದೆ. ಗ್ಯಾಸ್ ವಿಪರೀತ ತುಟ್ಟಿಯಾದರೆ ದೋಸೆ ಮುಂತಾದ ತಿಂಡಿಯನ್ನೂ ಸ್ಥಗಿತಗೊಳಿಸುವ ಅನಿವಾರ್ಯತೆ ಬಂದರೂ ಅಚ್ಚರಿ ಇಲ್ಲ.
>
> • **ಕುಡ್ಪಿ ಜಗದೀಶ್ ಶೆಣೈ** ಅಧ್ಯಕ್ಷರು, ದ.ಕ. ಜಿಲ್ಲಾ ಹೊಟೇಲ್ ಮಾಲೀಕರ ಸಂಘ

ಎಲ್‌ಪಿಜಿ ಸಿಲಿಂಡರ್ ಕೊರತೆ: ಸರ್ಕಾರಿ ಸ್ವಾಮ್ಯದ ಎಚ್ ಪಿ, ಇಂಡಿಯನ್ ಆಯಿಲ್, ಭಾರತ್‌ನಲ್ಲಿ ಪ್ರತೀ ಲೀಟರ್‌ಗೆ 80ರಿಂದ 82 ರು. ಇದ್ದು, ಖಾಸಗಿ ಸ್ವಾಮ್ಯದ ಜೆಲ್ಲು, ಗೋ ಗ್ಯಾಸ್ ಇತ್ಯಾದಿಗಳ ದರ 100ರಿಂದ 120 ರು. ವರೆಗೆ ತಲುಪಿದೆ. ಕೆಲವು ರಿಕ್ಷಾ ಚಾಲಕರು ಬಾಡಿಗೆ ಹೋಗುವುದನ್ನೇ ನಿಲ್ಲಿಸಿದ್ದಾರೆ. ನಗರದ ಬಹುತೇಕ ಖಾಸಗಿ ಆಟೋ ಎಲ್‌ಪಿಜಿ ಬಂಕರ್‌ಗಳು ಕಾರ್ಯ ಸ್ಥಗಿತಗೊಳಿಸಿವೆ. ಈ ಮಧ್ಯೆ ಎಲ್‌ಪಿಜಿ ಕೊರತೆ ಇದ್ದರೂ ದರ ಏರಿಸುವುದು ಯಾವ ನ್ಯಾಯ ಎಂಬುದು ಹಲವು ಆಟೋ ರಿಕ್ಷಾ ಮಾಲೀಕರ ಪ್ರಶ್ನೆ.

ಸುದ್ದಿ ಸಿಂಚನ

ಅಂಬ್ಯುಲೆನ್ಸ್- ಆಟೋ ಭೀಕರ ಅಪಘಾತ: ಚಾಲಕ ಸ್ಥಳದಲ್ಲೇ ಸಾವು

ಮೂಡುಬಿದಿರೆ: ಕಾರ್ಕಳ-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಬನ್ನಡ್ಕ ಎಂಬಲ್ಲಿ ಅಂಬ್ಯುಲೆನ್ಸ್ ಮತ್ತು ಆಟೋ ರಿಕ್ಷಾ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಆಟೋ ಚಾಲಕ ಜಾನ್ ಕೊರೆಯಾ (75) ಸ್ಥಳದಲ್ಲೇ ಮೃತಪಟ್ಟ ಘಟನೆ ಭಾನುವಾರ ನಡೆದಿದೆ. ಬನ್ನಡ್ಕ ಮಠದಲ್ಲಿ ನಡೆಯುತ್ತಿದ್ದ ಸಮಾರಂಭವೊಂದಕ್ಕೆ ಪ್ರಯಾಣಿಕರನ್ನು ಬಿಟ್ಟು ಆಟೋ ರಿಕ್ಷಾವನ್ನು ಹಿಂದಕ್ಕೆ (ರಿವರ್ಸ್) ತೆಗೆಯುತ್ತಿದ್ದ ಸಂದರ್ಭದಲ್ಲಿ, ಮೂಡುಬಿದಿರೆ ಕಡೆಯಿಂದ ಕಾರ್ಕಳಕ್ಕೆ ಅತೀ



ವೇಗವಾಗಿ ತೆರಳುತ್ತಿದ್ದ ಅಂಬ್ಯುಲೆನ್ಸ್ ಡಿಕ್ಕಿಯಾಗಿದೆ. ಅಪಘಾತದ ತೀವ್ರತೆಗೆ ಆಟೋ ರಿಕ್ಷಾದ ಮೇಲ್ಭಾಗ ಸಂಪೂರ್ಣವಾಗಿ ನುಜ್ಜುಗುಜ್ಜಾಗಿದ್ದು, ಅಂಬ್ಯುಲೆನ್ಸ್‌ನ ಮುಂಭಾಗ ಕೂಡ ಜಖಂಗೊಂಡಿದೆ. ಜಾನ್ ಕೊರೆಯಾ ಇತ್ತೀಚೆಗೆ ಮಹಾವೀರ ಕಾಲೇಜು ಬಳಿ ಸಂಭವಿಸಿದ ಅಪಘಾತವೊಂದರಲ್ಲಿ ತಮ್ಮ ತಪ್ಪಿಲ್ಲದಿದ್ದರೂ ಒಂದು ಲಕ್ಷ ರೂಪಾಯಿಗೂ ಅಧಿಕ ಹಣ ಕಳೆದುಕೊಂಡಿದ್ದರು. ಈ ಕುರಿತು ಭಾನುವಾರ ಬೆಳಗ್ಗೆ ಅಲಂಗಾರಿನಲ್ಲಿರುವ ತಮ್ಮ ಆಪ್ತರ ಬಳಿ ನೋವು ತೋಡಿಕೊಂಡಿದ್ದರು. ಜೀವನವೇ ಬೇಸರವಾಗಿದೆ ಎಂಬರ್ಥದಲ್ಲಿ ಮಾತನಾಡಿದ್ದ ಅವರು, ಅದಾದ ಕೆಲವೇ ಗಂಟೆಗಳಲ್ಲಿ ಬನ್ನಡ್ಕದಲ್ಲಿ ನಡೆದ ಭೀಕರ ಅಪಘಾತದಲ್ಲಿ ಜೀವ ಕಳೆದುಕೊಂಡಿದ್ದಾರೆ. ತಮ್ಮ 18ನೇ ವಯಸ್ಸಿನಿಂದಲೇ ಆಟೋ ಚಾಲಕರಾಗಿ ವೃತ್ತಿ ಆರಂಭಿಸಿದ್ದ ಜಾನ್ ಕೊರೆಯಾ ಶ್ರಮಜೀವಿ ಹಾಗೂ ಸ್ನೇಹಜೀವಿಯಾಗಿದ್ದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಬಸ್ ಡಿಕ್ಕಿ: ಸ್ಕೂಟರ್ ಸವಾರ ಗಂಭೀರ

ಮೂಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಮೂಲ್ಕಿ ಬಸ್ ನಿಲ್ದಾಣದ ಪೆಟ್ರೋಲ್ ಬಂಕ್ ಬಳಿ ಸ್ಕೂಟರ್‌ಗೆ ಎಕ್ಸ್‌ಪ್ರೆಸ್ ಬಸ್ ಡಿಕ್ಕಿಯಾಗಿ ಸ್ಕೂಟರ್ ಸವಾರ ಅಂಗರಗುಡ್ಡೆ ನಿವಾಸಿ ವಿಜಯ ದೇವಾಡಿಗ (45) ಗಂಭೀರ ಗಾಯಗೊಂಡು, ಮಗು ಧನ್ವಿ (6) ಅಲ್ಪಸ್ವಲ್ಪ ಗಾಯಗೊಂಡಿದ್ದಾರೆ. ಸ್ಕೂಟರ್‌ಸವಾರ ವಿಜಯ್ ಮೂಲ್ಕಿ ಬಸ್ ನಿಲ್ದಾಣ ಬಳಿ ರಾಷ್ಟ್ರೀಯ ಹೆದ್ದಾರಿಯಿಂದ ಸರ್ವಿಸ್ ರಸ್ತೆಗೆ ಸ್ಕೂಟರ್ ತಿರುಗಿಸಿದಾಗ ಹಿಂದಿನಿಂದ ಬಂದ ಬಸ್ ಡಿಕ್ಕಿ ಹೊಡೆದಿದೆ. ಅಪಘಾತದ ರಭಸಕ್ಕೆ ಸ್ಕೂಟರ್‌ಸವಾರ ವಿಜಯ್ ನಿಯಂತ್ರಣ ತಪ್ಪಿ ರಸ್ತೆ ಮೇಲೆ ಬಿದ್ದು ಗಂಭೀರ ಗಾಯಗೊಂಡು ಮುಕ್ಕ ಆಸ್ಪತ್ರೆಗೆ ದಾಖಲಾಗಿದ್ದಾರೆ. ಮಗು ಸಣ್ಣ ಪುಟ್ಟ ಗಾಯಗಳೊಂದಿಗೆ ಪಾರಾಗಿದೆ.

ಕ್ಯೂ ಆರ್‌ಕೋಡ್ ಸ್ಕ್ಯಾನ್ ಮಾಡಿ ಸ್ವಚ್ಛ ಸರ್ವೇಕ್ಷಣೆ ಸಮೀಕ್ಷೆಯಲ್ಲಿ ಪಾಲ್ಗೊಳ್ಳಿ



ಮೂಡುಬಿದಿರೆ: ಸ್ವಚ್ಛ ಭಾರತ ಮಿಷನ್ (ನಗರ) 2.0 ಯೋಜನೆಯಡಿ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ನಡೆಸುವ ಸ್ವಚ್ಛ ಸರ್ವೇಕ್ಷಣೆ 2025-26 ರ ಸಮೀಕ್ಷೆಯಲ್ಲಿ ನಾಗರಿಕರು ತಮ್ಮ ಅಭಿಪ್ರಾಯ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ. ಮೂಡುಬಿದಿರೆ ಪುರಸಭೆ ವ್ಯಾಪ್ತಿಯ ಜನಸಾಮಾನ್ಯರು ಸ್ಮಾರ್ಟ್ ಮೊಬೈಲ್ ಮೂಲಕ ಕ್ಯೂ ಆರ್‌ಕೋಡ್ ಸ್ಕ್ಯಾನ್ ಮಾಡಿ ಅಥವಾ ಸಚಿವಾಲಯದ ಅಧಿಕೃತ ವೆಬ್ ಲಿಂಕ್ ಬಳಸಿ ನೈಜ ಅಭಿಪ್ರಾಯ ಹಂಚಿಕೊಳ್ಳುವಂತೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸರಳ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ನಗರವನ್ನು ಸ್ವಚ್ಛತೆಯ ಮಾನದಂಡದಲ್ಲಿ ಮುಂಚೂಣಿಗೆ ತರಲು ಸಹಕರಿಸಬೇಕು. ಸಾರ್ವಜನಿಕರು ಮನೆಯಲ್ಲಿಯೇ ಕಸವನ್ನು ಹಸಿ, ಒಣ ಹಾಗೂ ಅಪಾಯಕಾರಿ ತ್ಯಾಜ್ಯವಾಗಿ ವಿಂಗಡಿಸುವುದರ ಜೊತೆಗೆ ಮಾರುಕಟ್ಟೆ, ನಿಲ್ದಾಣ ಮತ್ತು ಧಾರ್ಮಿಕ ಕ್ಷೇತ್ರಗಳ ನೈರ್ಮಲ್ಯ ಕಾಪಾಡಬೇಕು. ಪ್ಲಾಸ್ಟಿಕ್ ಮುಕ್ತ ನಗರಕ್ಕಾಗಿ ಬಟ್ಟೆ ಚೀಲಗಳನ್ನು ಬಳಸುವ ಅಭ್ಯಾಸ ರೂಢಿಸಿಕೊಳ್ಳುವಂತೆ ಅವರು ತಿಳಿಸಿದರು.

ಮಕ್ಕಳಿಗೆ ಓದಿನ ಅಭಿರುಚಿ ಮೂಡಿಸಿ: ಜನಾರ್ದನ ಭಟ್



ಬಲೆ ತುಳು ಓದುಗ ಕಾರ್ಯಕ್ರಮ ನಡೆಯಿತು

ಮಂಗಳೂರು: ಇವತ್ತಿನ ಜೆನ್ ಜೀ ನಾಮಾಂಕಿತ ತಲೆಮಾರಿನ ಮಕ್ಕಳಿಗೆ ಪುಸ್ತಕ ಓದಿನ ಬಗ್ಗೆ ಅಭಿರುಚಿ ಮೂಡಿಸುವ ಕೆಲಸಗಳು ನಡೆಯಬೇಕು. ಹೊಸ ತಲೆಮಾರಿನ ಮಕ್ಕಳು ಮೊಬೈಲ್ ಗ್ಯಾಜೆಟ್ ಗೆ ಅತೀಯಾಗಿ ಅವಲಂಬಿತರಾಗುವುದನ್ನು ಬಿಡಿಸಿ ಅವರ ಜ್ಞಾನ ಭಂಡಾರ ವೃದ್ಧಿಸುವ ಓದಿನತ್ತ ಗಮನ ಕೇಂದ್ರೀಕರಿಸುವ ಕೆಲಸ ನಡೆಯಬೇಕಿದೆ ಎಂದು ಹಿರಿಯ ಸಾಹಿತಿ ಹಾಗೂ ನಿವೃತ್ತ ಪ್ರಾಂಶುಪಾಲ ಬಿ.ಜನರ್ದನ ಭಟ್ ಹೇಳಿದರು.

ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಹಮ್ಮಿಕೊಂಡಿರುವ ಬಲೆ ತುಳು ಓದುಗ ಅಭಿಯಾನದ 13ನೇ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ತುಳು ಅತ್ಯಂತ ಪ್ರಾಚೀನ ಹಾಗೂ ಶ್ರೀಮಂತ ಭಾಷೆ. ಕ್ರಿಸ್ತಪೂರ್ವ ಕಾಲದ ಅಶೋಕನ ಶಾಸನಗಳಲ್ಲಿ ತುಳುವಿನ ಬಗ್ಗೆ ಉಲ್ಲೇಖವಿದೆ. ಓದಿನ ಮೂಲಕ ವಿದ್ಯಾರ್ಥಿಗಳು ತುಳುವಿನ ಬಗ್ಗೆ ಹೆಚ್ಚಿನ ಅನುಭವ, ಜ್ಞಾನ ಪಡೆಯುವಂತಾಗಲಿ ಎಂದರು.

ಎಸ್.ಸಿ.ಎಸ್. ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಹಾರ್ದಿಕ್ ಚೌಹಾಣ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ವಿದ್ಯಾರ್ಥಿಗಳಿಗೆ ತುಳು ಅಕಾಡೆಮಿಗೆ ಭೇಟಿಯ ಈ ಕಾರ್ಯಕ್ರಮ ವಿಶಿಷ್ಟ ಅನುಭವ ಹಾಗೂ ಹೆಚ್ಚಿನ ಜ್ಞಾನ ನೀಡಲಿದೆ ಎಂದು ಹೇಳಿದರು.

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿ ಮಾತನಾಡಿ, ತುಳು ಸಾಹಿತ್ಯ ಲೋಕದ ಪರಿಚಯಿಸುವ ಸಲುವಾಗಿ ಅಕಾಡೆಮಿಯಲ್ಲಿ ಬಲೆ ತುಳು ಓದುಗ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು.

ಎಸ್.ಸಿ.ಎಸ್. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಸುಚಿತ್ರಾ ಪಿ. ಶೆಟ್ಟಿ, ತುಳು ಸಂಘದ ಸಂಚಾಲಕಿ ದೀಕ್ಷಿತಾ, ವಿದ್ಯಾರ್ಥಿ ಸಂಚಾಲಕ ಸುಹಾನ್ ಇದ್ದರು.

ಕುಸಿಯುವ ಭೀತಿಯಲ್ಲಿ ಜಿಲ್ಲಾ ಮಾಜಿ ಸೈನಿಕರ ಸಂಘದ ಕಟ್ಟಡ

ತಡೆಗೋಡೆ ನಿರ್ಮಾಣಕ್ಕೆ ದೇಣಿಗೆ ನೀಡಲು ಮಾಜಿ ಸೈನಿಕರ ಸಂಘ ಮನವಿ



ಶ್ರೀಕಾಂತ್ ಶೆಟ್ಟಿ ಬಾಳ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಂಗಳೂರಿನಲ್ಲಿರುವ ದಕ್ಷಿಣ ಕನ್ನಡ ಜಿಲ್ಲಾ ಮಾಜಿ ಸೈನಿಕರ ಸಂಘದ ಕಟ್ಟಡ ಕುಸಿಯುವ ಭೀತಿಯಲ್ಲಿದ್ದು, ಅದಕ್ಕಾಗಿ ತಡೆಗೋಡೆ ನಿರ್ಮಿಸಲು ದೇಣಿಗೆ ನೀಡುವಂತೆ ಸಂಘದ ವತಿಯಿಂದ ಮನವಿ ಮಾಡಲಾಗಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಶ್ರೀಕಾಂತ್ ಶೆಟ್ಟಿ ಬಾಳ, ದ.ಕ. ಜಿಲ್ಲಾ ಮಾಜಿ ಸೈನಿಕರ ಸಂಘದ (ಡಿಕೆಇಎಸ್‌ಎಂಎ) ಕಟ್ಟಡ ಮಂಗಳೂರಿನ ಲೈಟ್‌ಹೌಸ್ ಹಿಲ್‌ನ ಅಂಚಿನಲ್ಲಿದೆ. ಕಟ್ಟಡದ ಹಿಂಭಾಗ ಸೈಂಟ್ ಅಲೋಶಿಯಸ್ (ಪರಿಗಣಿತ) ವಿಶ್ವವಿದ್ಯಾಲಯದ ಕ್ರೀಡಾಂಗಣವನ್ನು ಹೊಂದಿದೆ. 2023ರಲ್ಲಿ ಸಂಘದ ಸದಸ್ಯರಿಂದ ಸಂಗ್ರಹಿಸಲಾದ ದೇಣಿಗೆಯ ಮೂಲಕ 24 ಲಕ್ಷ ರು. ವೆಚ್ಚದಲ್ಲಿ ಗುಡ್ಡದ ಭಾಗದಲ್ಲಿ ತಡೆಗೋಡೆ ನಿರ್ಮಿಸಲಾಗಿತ್ತು. ಈ ಕಟ್ಟಡ ಜಿಲ್ಲಾಡಳಿತದಿಂದ ನೀಡಲಾದ 5 ಸೆಂಟ್ಸ್ ಜಾಗದಲ್ಲಿದೆ. ತಡೆಗೋಡೆ ನಿರ್ಮಿಸಲಾದ ಒಂದು ಸೆಂಟ್ಸ್ ಸರ್ಕಾರಿ ಜಾಗವಾಗಿಯೇ ಉಳಿದಿದೆ. 2025ರ ಮೇ 28ರ ರಾತ್ರಿಯ ಬಾರೀ ಮಳೆಗೆ ಸಂಪೂರ್ಣ ತಡೆಗೋಡೆ ಹಾಗೂ ಗುಡ್ಡದ ಭಾಗ ಕುಸಿದು ಕ್ರೀಡಾಂಗಣಕ್ಕೆ ಬಿದ್ದಿದೆ. ಪರಿಣಾಮ ಸಂಘದ ಕಟ್ಟಡಕ್ಕೆ ಅಪಾಯ ಎದುರಾಗಿದೆ. ಈ ಬಗ್ಗೆ ಸ್ಥಳೀಯಾಡಳಿತಕ್ಕೆ ಮಾಹಿತಿ ನೀಡಿದ್ದು, ಮುಂದಿನ ಸೂಚನೆವರೆಗೆ ಕಟ್ಟಡ ಬಳಸದಂತೆ ನೋಟೀಸ್ ನೀಡಿದ್ದಾರೆ. ಸಂಘದ ವತಿಯಿಂದ ಎಂಜಿನಿಯರ್‌ಗಳಿಂದ ತಾಂತ್ರಿಕ ಪರಿಶೀಲನೆ ನಡೆಸಿದ ವೇಳೆ ಬಲಿಷ್ಠ ತಡೆಗೋಡೆ ನಿರ್ಮಿಸಬೇಕು, ಇದಕ್ಕೆ ಅಂದಾ ವೆಚ್ಚ 46 ಲಕ್ಷ ರು. ಆಗಬಹುದು ಎಂದಿದ್ದರು. ಈ ಬಗ್ಗೆ ಸ್ಥಳೀಯಾಡಳಿತದ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದಾಗ, ಈ ವೆಚ್ಚ ಸುಮಾರು 86 ಲಕ್ಷ ರು. ಆಗಬಹುದು ಎಂದು ಅಂದಾಜಿಸಿದ್ದಾರೆ. ಈ ಬಗ್ಗೆ ಶಾಸಕ ವೇದವ್ಯಾಸ ಕಾಮತ್ ಅವರನ್ನು ಸಂಪರ್ಕಿಸಿದ್ದೆವು. ಅಗತ್ಯ ಕ್ರಮ ಕೈಗೊಂಡು ಸಾರ್ವಜನಿಕ ನಿಧಿಯಿಂದ ತಡೆಗೋಡೆ ನಿರ್ಮಿಸಿ ಕೊಡುವ ಭರವಸೆ ನೀಡಿದ್ದರು. ಯೋಜನೆ ಆರಂಭಿಸಿಲು ಮನಪಾ ಅಧಿಕಾರಿಗಳಿಗೆ ಹಲವು ಬಾರಿ ಸೂಚನೆ ನೀಡಿದ್ದರೂ, ನಿಧಿಯ ಕೊರತೆ ಹಾಗೂ ಇದು ಸಾರ್ವಜನಿಕ ಹಿತಾಸಕ್ತಿಯ ವ್ಯಾಪ್ತಿಗೆ ಬರುವುದಿಲ್ಲ ಎಂಬ ಕಾರಣ ನೀಡಿದ್ದರು.

ಈಗ ಅಧಿಕಾರಿಗಳ ನಿರ್ಲಕ್ಷ್ಯದಿಂದ ಯೋಜನೆ ಆರಂಭವಾಗಿಲ್ಲ. ಮುಂದಿನ ಮಳೆಗಾಲದ ಮೊದಲು ತಡೆಗೋಡೆ ನಿರ್ಮಾಣವಾಗದೇ ಇದ್ದಲ್ಲಿ ಕಟ್ಟಡ ಕುಸಿಯುವ ಭೀತಿಯಲ್ಲಿದೆ. ಕುಸಿಯಲು ನಾವು ಅವಕಾಶ ನೀಡುವುದಿಲ್ಲ. ಡಿಕೆಇಎಸ್ ಎಂಎ ನೋಂದಾಯಿತ ಸಂಘವಾಗಿದ್ದು, ಸೀಮಿತ ಸಂಪನ್ಮೂಲಗಳನ್ನು ಹೊಂದಿದೆ. ತಡೆಗೋಡೆ ನಿರ್ಮಾಣಕ್ಕೆ ಅಗತ್ಯವಿರುವ ಹಣಕಾಸು ಒದಗಿಸಲು ಸಂಘ ಸದ್ಯದ ಪರಿಸ್ಥಿತಿಯಲ್ಲಿ ಅಸಮರ್ಥವಾಗಿದೆ. ಆದ್ದರಿಂದ ಮಾಜಿ ಸೈನಿಕರ ಕಲ್ಯಾಣವನ್ನು ಬೆಂಬಲಿಸುವವರು, ಹಿತೈಷಿಗಳು ಹಾಗೂ ಜವಾಬ್ದಾರಿಯುತ ನಾಗರಿಕರು ಉದಾರವಾಗಿ ದೇಣಿಗೆ ನೀಡಿ ತಡೆಗೋಡೆಯ ಪುನರ್ ನಿರ್ಮಾಣ ಕಾರ್ಯಕ್ಕೆ ಸಹಕರಿಸಬೇಕೆಂದು ಸಂಘ ವಿನಂತಿಸುತ್ತದೆ. ನಿಧಿಯ ಬಳಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗುವುದು, ಎಲ್ಲ ದಾನಿಗಳಿಗೆ ಕಾಲಕಾಲಕ್ಕೆ ಮಾಹಿತಿ ಹಂಚಿಕೊಳ್ಳಲಾಗುವುದು ಎಂದು ಅವರು ವಿನಂತಿಸಿದರು.

ಸಂಘದ ಉಪಾಧ್ಯಕ್ಷ ಜಯಚಂದ್ರನ್ ಎ.ಕೆ., ಕಾರ್ಯದರ್ಶಿ ವಿ.ದೀಪಕ್ ಅಡ್ಯಂತಾಯ, ಕೋಶಾಧಿಕಾರಿ ಸುಧೀರ್‌ಪೈ ಎಂ. ಇದ್ದರು.

ಮಹಿಳಾ ಮೀಸಲಿಗೆ ವಿರೋಧ ವಿರುದ್ಧ ಜೆಡಿಎಸ್ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಮಹಿಳಾ ಮೀಸಲಾತಿ ಮಸೂದೆಗೆ ಸಂಬಂಧಿಸಿದಂತೆ ರಾಜಕೀಯ ವಲಯದಲ್ಲಿ ಉಂಟಾಗಿರುವ ಬೆಳವಣಿಗೆಗಳ ವಿರುದ್ಧ ಮಂಗಳೂರಿನ ಮಿನಿ ವಿಧಾನಸೌಧದಲ್ಲಿ ಜಾತ್ಯತೀತ ಜನತಾದಳ ವತಿಯಿಂದ ಪ್ರತಿಭಟನಾ ಸಭೆ ನಡೆಯಿತು.

ವಿಧಾನಪರಿಷತ್ ಸದಸ್ಯ ಎಸ್.ಎಲ್.ಬೋಜೆಗೌಡ ಮಾತನಾಡಿ, ಇದು ಸಾಮಾನ್ಯ ರಾಜಕೀಯ ವಿಚಾರವಲ್ಲ. ದೇಶದ ಅರ್ಧ ಜನಸಂಖ್ಯೆಯ ಹಕ್ಕಿನ ಹೋರಾಟ. ಮಹಿಳಾ ಮೀಸಲಾತಿಯನ್ನು ರಾಜಕೀಯ ಲಾಭಕ್ಕಾಗಿ ತಡೆಹಿಡಿಯುವ ಪ್ರಯತ್ನಗಳು ಅಸಂಗತ ಮತ್ತು ಖಂಡನೀಯ. ಮಹಿಳಾ ಮೀಸಲಾತಿ ಜಾರಿಗಾಗಿ ನಮ್ಮ ಹೋರಾಟ ನಿರಂತರವಾಗಿರುತ್ತದೆ ಎಂದರು.

ಜೆಡಿಎಸ್ ಜಿಲ್ಲಾಧ್ಯಕ್ಷ ಜಾಕೆ ಮಾಧವ ಗೌಡ ಮತ್ತು ರಾಜ್ಯಾ ಉಪಾಧ್ಯಕ್ಷ ಎಂ.ಬಿ.ಸದಾಶಿವ ಅವರು ಮಾತನಾಡಿ, ಮಹಿಳಾ ಮೀಸಲಾತಿ ಮಸೂದೆಗೆ ತಮ್ಮ ಪಕ್ಷದ ಬಲವಾದ ಬೆಂಬಲವನ್ನು ಪುನರುಚ್ಚರಿಸಿ, ಮಸೂದೆಗೆ ಅಡ್ಡಿಪಡಿಸುವ ಎಲ್ಲ ಪ್ರಯತ್ನಗಳನ್ನು ತೀವ್ರವಾಗಿ ಖಂಡಿಸಿದರು.

ರಾಜ್ಯ ಪ್ರಧಾನಕಾರ್ಯದರ್ಶಿ ಮೊಹಮ್ಮದ್ ಕುಂಞ್, ಜಿಲ್ಲಾ ಕಾರ್ಯಾಧ್ಯಕ್ಷ ಶಶಿರಾಜ್ ಶೆಟ್ಟಿ ಕೊಳಂಬೆ, ಯುವ ಘಟಕ ಅಧ್ಯಕ್ಷ ಅಕ್ಷಿತ್ ಸುವರ್ಣ, ರಾಜ್ಯ ಮೀನುಗಾರ ಘಟಕ ಅಧ್ಯಕ್ಷ ರತ್ನಕರ್‌ಸುವರ್ಣ, ಜಿಲ್ಲಾ ಮುಖಂಡರಾದ ವಸಂತ್ ಪೂಜಾರಿ, ಇಕ್ಬಲ್ ಮುಲ್ಕಿ, ಜಿ.ಪಂ. ಮಾಜಿ ಸದಸ್ಯ ಅಜೀಜ್ ಮಲಾರ್, ಉಮೇಶ್ ವೈ.ಗೌಡ, ರಮೀಜಾ ನಾಸೀರ್, ರೀತೆಶ್, ಮುನೀರ್‌ಮುಕ್ಕಚೇರಿ, ಭಾರತಿ, ಪುಷ್ಪರಾಜನ್, ಪುತ್ತು ಮೋನು, ಇಬ್ರಾಹಿಂ ಜಪ್ಪು, ಅಕ್ಷ ಉಸ್ಮಾನ್, ರಘುನಾಥ್ ಶೇಟ್, ವಿನ್ಸಂಟ್, ಪ್ರಶಾಂತ್ ಭಟ್ ಕಡಬ, ಚೇತನ್ ವೈ ಶೆಟ್ಟಿ, ಚಂದ್ರಕಲಾ, ಜೋತಿ ಲಕ್ಷಿ, ಸರೋಜಿನಿ, ನಿರಂಜನ ಸುನಿಲ್, ಚಿತ್ತರಂಜನ್, ಸ್ಟ್ಯಾನಿ, ಜಲೀಲ್ ಮತ್ತಿತರರು ಇದ್ದರು. ಯೋಗಿಶ್ ಶೆಟ್ಟಿ ಜಪ್ಪು ವಂದಿಸಿದರು.



ಜೆಡಿಎಸ್ ವತಿಯಿಂದ ಪ್ರತಿಭಟನೆ ನಡೆಯಿತು.

ಕುಡಿದ ಅಮಲು: ಅಣ್ಣನಿಂದ ತಮ್ಮನ ಕೊಲೆ

ಕಾರ್ಕಳ: ಮದ್ಯದ ಅಮಲಿನಲ್ಲಿ ನಡೆದ ಗಲಾಟೆ ಕೊಲೆಯಾಗಿ ತಿರುಗಿ, ಅಣ್ಣನಿಂದ ತಮ್ಮನ ಹತ್ಯೆಯಾದ ಘಟನೆ ಶನಿವಾರ ತಡರಾತ್ರಿ ಇಲ್ಲಿನ ಶಿವತಿಕೆರೆ ವ್ಯಾಪ್ತಿಯ ಪರ್ಪಲೆ ಎಂಬಲ್ಲಿ ಈ ಘಟನೆ ಸಂಭವಿಸಿದೆ. ರಿಚರ್ಡ್ ಡಿಸೋಜಾ (65) ಮೃತರು.

ಮದ್ಯಪಾನ ಮಾಡಿದ ಸ್ಥಿತಿಯಲ್ಲಿ ಗಲಾಟೆ ನಡೆದ ವೇಳೆ ಸಿಟ್ಟಾದ ಅಣ್ಣ ಹೆರಾಲ್ಡ್ ಡಿಸೋಜಾ, ಮರದ ರೀಪಿನಿಂದ ಹಲ್ಲೆ ನಡೆಸಿದ್ದು, ಗಂಭೀರ ಗಾಯಗಳಿಂದ ರಿಚರ್ಡ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆಸ್ತಿ ವಿವಾದವೂ ಕಾರಣವಾಗಿರಬಹುದೆಂಬ ಶಂಕೆ ವ್ಯಕ್ತವಾಗಿದ್ದು, ಕಾರ್ಕಳ ನಗರ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ರೇಬಿಸ್ ರೋಗ ನಿರೋಧಕ ಲಸಿಕಾ ಕಾರ್ಯಕ್ರಮ

ಮಂಗಳೂರು: ವಿಶ್ವ ಪಶು ವೈದ್ಯಕೀಯ ದಿನಾಚರಣೆಯ ಅಂಗವಾಗಿ ಕರ್ನಾಟಕ ಪಶು ವೈದ್ಯಕೀಯ ಸಂಘ ದಕ್ಷಿಣ ಕನ್ನಡ ಘಟಕದ ವತಿಯಿಂದ ಫೀಡ್ ಅನಿಮಲ್ಸ್ ಸೇವ್ ಅನಿಮಲ್ಸ್ ಟ್ರಸ್ಟ್ ಮತ್ತು ಅಸ್ತ್ರಾ ಫೌಂಡೇಶನ್ ಸಹಭಾಗಿತ್ವದಲ್ಲಿ ಉಳ್ಳಾಲ ತಾಲೂಕಿನ ಮಂಡ್ಯರಿನಲ್ಲಿ ಸಾಕು ನಾಯಿ ಮತ್ತು ಬೆಕ್ಕುಗಳಿಗೆ ಹಾಗೂ ಬೀದಿನಾಯಿಗಳಿಗೆ ಉಚಿತ ರೇಬಿಸ್ ರೋಗನಿರೋಧಕ ಲಸಿಕಾ ಕಾರ್ಯಕ್ರಮ ನಡೆಯಿತು.

ದಕ್ಷಿಣ ಕನ್ನಡ ಲೋಕಸಭಾ ಸದಸ್ಯ ಕ್ಯಾ.ಬ್ರಿಜೇಶ್ ಚೌಟ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈ ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣ ಹಾಗೂ ಸಮಾಜಮುಖಿ ಕಾರ್ಯಕ್ರಮವಾಗಿದ್ದು ರೇಬಿಸ್ ರೋಗದ ನಿರ್ಮೂಲದ ಕಡೆಗೆ ಇನ್ನೂ ಹೆಚ್ಚಿನ ಕೆಲಸ ಕಾರ್ಯಗಳು ಆಗಬೇಕಿದೆ ಎಂದು ಕರೆ ನೀಡಿದರು.

ದಕ್ಷಿಣ ಕನ್ನಡ ಪಶು ವೈದ್ಯಕೀಯ ಸಂಘದ ಅಧ್ಯಕ್ಷ ಡಾ.ಅರುಣ್ ಕುಮಾರ್‌ಶೆಟ್ಟಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವ ಪಶು ವೈದ್ಯಕೀಯ ದಿನಾಚರಣೆಯ ಮತ್ತು ರೇಬಿಸ್ ರೋಗ ನಿರೋಧಕ ಲಸಿಕೆಯ ಮಹತ್ವವನ್ನು ತಿಳಿಸಿದರು. ಫೀಡ್ ಅನಿಮಲ್ಸ್ ಸೇವ್ ಅನಿಮಲ್ಸ್ ಟ್ರಸ್ಟ್‌ನ ರಜನಿ ಶೆಟ್ಟಿ, ಅಸ್ತ್ರ ಫೌಂಡೇಶನ್ ನ ಲಾಂಛುಲಾಲ್, ಕರ್ನಾಟಕ ಪಶು ವೈದ್ಯಕೀಯ ಸಂಘದ ಉಪಾಧ್ಯಕ್ಷ ಡಾ. ಚಂದ್ರಶೇಖರ್‌ಭಟ್, ಕಾರ್ಯದರ್ಶಿ ಡಾ.ನಿತಿನ್ ಪ್ರಭು, ಸ್ಥಳೀಯ ಮಹಾನಗರ ಪಾಲಿಕೆ ಸದಸ್ಯ ಹರೀಶ ರಾವ್, ಪಶು ವೈದ್ಯಕೀಯ ಸಂಘದ ಸದಸ್ಯರು ಮತ್ತು ಶ್ವಾನಪ್ರಿಯರು ಭಾಗವಹಿಸಿದ್ದರು.

ರಸಪ್ರಶ್ನೆ

ರೋಟರಾಕ್ಟ್ ಕ್ಲಬ್ ಮೈಸೂರನ್ನು ಪ್ರತಿನಿಧಿಸಿದ ಪ್ರಜ್ವಲ್ ದ್ವಿತೀಯ

ರೋಟರಿ ಜಿಲ್ಲಾ ರಸಪ್ರಶ್ನೆ: ಕಾವ್ಯ, ಶ್ರೀನಿಧಿ ತಂಡಕ್ಕೆ ಪ್ರಶಸ್ತಿ

• **ಕನ್ನಡಪ್ರಭ ವಾರ್ತೆ** ಮಂಗಳೂರು

ಜಿಲ್ಲಾ ರೋಟರಾಕ್ಟ್ ಸಂಸ್ಥೆಯ ಮತ್ತು ರೋಟರಾಕ್ಟ್ ಮಂಗಳೂರು ಸಿಟಿ ಸಂಸ್ಥೆಯ ಜಂಟಿ ಆಶ್ರಯಲದಲ್ಲಿ ರೋಟರಾಕ್ಟ್ ಮಾಹಿತಿ ಮತ್ತು ಜಾಗೃತಿ ಅಭಿಯಾನದ ಅಂಗವಾಗಿ ದಿ. ರೋ. ಶಾಂತರಾಮ್ ವಾಮಂಜೂರು ಸ್ಮಾರಕ 20ನೇ ವಾರ್ಷಿಕ ರಾಜ್ಯ ಮಟ್ಟದ ಅಂತರ್‌ಕ್ಲಬ್ ರೋಟರಾಕ್ಟ್ ರಸಪ್ರಶ್ನೆ ಸ್ಪರ್ಧಾಕೂಟ ಸಂಸ್ಥೆಯ ಸಭಾಪತಿ ರೋ. ಡಾ. ದೇವದಾಸ್ ರೈ ನೇತೃತ್ವದಲ್ಲಿ ಭಾನುವಾರ ನಗರದ ಈಡನ್ ಕ್ಲಬ್ ಸಭಾಂಗಣದಲ್ಲಿ ನಡೆಯಿತು.

ನಗರದ ರೋಟರಾಕ್ಟ್ ಕ್ಲಬ್ ಮಣೇಲ್ ಶ್ರೀನಿವಾಸ ನಾಯಕ್ ಉದ್ಯಮ ಆಡಳಿತ ಕಾಲೇಜನ್ನು ಪ್ರತಿನಿಧಿಸಿದ ಕಾವ್ಯ ಮತ್ತು ಶ್ರೀನಿಧಿ ತಂಡ ಪ್ರಥಮ ಸ್ಥಾನ ಗಳಿಸಿತು. ರೋಟರಾಕ್ಟ್ ಕ್ಲಬ್ ಮೈಸೂರನ್ನು ಪ್ರತಿನಿಧಿಸಿದ ಪ್ರಜ್ವಲ್ ದ್ವಿತೀಯ ಸ್ಥಾನ ಪಡೆದರು.

ಖ್ಯಾತ ತುಳು ಚಲನಚಿತ್ರ ನಟ ಬೋಜರಾಜ ವಾಮಂಜೂರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ತಮ್ಮ ದಿವಂಗತ ಸಹೋದರ ಶಾಂತರಾಮ್ ವಾಮಂಜೂರು ಸ್ಮರಣಾರ್ಥ ವರ್ಷಂಪ್ರತಿ ಈ ಸ್ಪರ್ಧಾಕೂಟವನ್ನು ಆಯೋಜಿಸುವ ರೋಟರಾಕ್ಟ್ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿ, ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ, ಪ್ರಶಸ್ತಿ ಪ್ರಮಾಣ ಪತ್ರ ಪ್ರಧಾನ ಮಾಡಿ ಅವರ ಸಾಧನೆಯನ್ನು ಅಭಿನಂದಿಸಿದರು.




ರಾಜ್ಯ ಮಟ್ಟದ ಅಂತರ್‌ಕ್ಲಬ್ ರೋಟರಾಕ್ಟ್ ರಸಪ್ರಶ್ನೆ ಸ್ಪರ್ಧಾಕೂಟ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು.

ರೋಟರಿ ಮಂಗಳೂರು ಸೆಂಟ್ರಲ್ ಸಂಸ್ಥೆಯ ಅಧ್ಯಕ್ಷ ರೋ. ಭಾಸ್ಕರ ರೈಯವರು, ರೋಟರಾಕ್ಟ್ ಸಂಸ್ಥೆಯ ಯುವ ಸದಸ್ಯರು ಸಂಸ್ಥೆಯ ಧ್ಯೇಯ, ನೀತಿ, ಮಾಹಿತಿ, ಉದ್ದೇಶಗಳ ಜ್ಞಾನವನ್ನು ವೃದ್ಧಿಸಬೇಕು ಮತ್ತು ಸಂಸ್ಥೆಯ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದು ಸಲಹೆ ನೀಡಿ ಸ್ಪರ್ಧಾ ವಿಜೇತರನ್ನು ಅಭಿನಂದಿಸಿದರು.

ರೋಟರಾಕ್ಟ್ ದಕ್ಷಿಣ ಏಶ್ಯ ಸಂಸ್ಥೆಯ ಅಧ್ಯಕ್ಷ ಸ್ಟೀವನ್ ಡೇರಿಲ್ ಡಿ'ಸೋಜಾ ಇದ್ದರು.

ರೋಟರಾಕ್ಟ್ ಮಂಗಳೂರು ಸಿಟಿ ಸಂಸ್ಥೆಯ ಅಧ್ಯಕ್ಷ ಅಕ್ಷಯ್ ರೈ ಸ್ವಾಗತಿಸಿದರು. ವಲಯ ಪ್ರತಿನಿಧಿ ಚಮನ್ ವಂದಿಸಿದರು.

ಜಿಲ್ಲಾ ಮಟ್ಟದ 7 ತಂಡಗಳು ಅಂತಿಮ ಮತ್ತು ನಿರ್ಣಾಯಕ ಸುತ್ತಿಗೆ ಪಡೆದಿದ್ದವು.



ಟೂರಿಸ್ಟ್ ಫ್ಯಾಮಿಲಿ ಚಿತ್ರದ ಅಭಿಷನ್ ಜೀವಿಂದ್ ತಂದೆ ಪಾತ್ರದಲ್ಲಿ ಶಿವಣ್ಣ

ಮತ್ತೊಂದು ತಮಿಳು ಸಿನಿಮಾ ಒಪ್ಪಿಕೊಂಡಿರುವ ಸೆಂಚುರಿ ಸ್ಟಾರ್

• **ಕನ್ನಡಪ್ರಭ** ಸಿನಿವಾರ್ತೆ

ಶಿವರಾಜ್‌ಕುಮಾರ್ ಮತ್ತೊಂದು ತಮಿಳು ಸಿನಿಮಾ ಒಪ್ಪಿಕೊಂಡಿದ್ದಾರೆ. 'ಟೂರಿಸ್ಟ್ ಫ್ಯಾಮಿಲಿ' ಸಿನಿಮಾ ಮೂಲಕ ಗಮನ ಸೆಳೆದ ನಟ ಹಾಗೂ ನಿರ್ದೇಶಕ ಅಭಿಷನ್ ಜೀವಿಂದ್ ಅವರಿಗೆ ತಂದೆ ಪಾತ್ರದಲ್ಲಿ ಶಿವಣ್ಣ ನಟಿಸಲಿದ್ದಾರೆ ಎನ್ನಲಾಗಿದೆ. ಈ ಚಿತ್ರವನ್ನು ಹೊಸ ನಿರ್ದೇಶಕರೊಬ್ಬರು ನಿರ್ದೇಶನ ಮಾಡಲಿದ್ದು, ಸದ್ಯದಲ್ಲೇ ಈ ಬಗ್ಗೆ ಅಧಿಕೃತ ಮಾಹಿತಿ ಹೊರ ಬರಲಿದೆ.



ಅಭಿಷನ್ ಜೀವಿಂದ್

ರಾಮಾಯಣ ಸಿನಿಮಾ ನಂತರ ಬ್ರೇಕ್ ತಗೊಳ್ತೀನಿ ಯಶ್



ಸದ್ಯ ಮುಂಬೈನಲ್ಲಿ ರಾಮಾಯಣ ಶೂಟಿಂಗ್‌ನಲ್ಲಿ ಭಾಗಿ

• **ಕನ್ನಡಪ್ರಭ** ಸಿನಿವಾರ್ತೆ

'ರಾಮಾಯಣ' ಸಿನಿಮಾದ ಬಳಿಕ ಒಂದಿಷ್ಟು ಕಾಲ ಬ್ರೇಕ್ ತೆಗೆದುಕೊಳ್ಳುವುದಾಗಿ ಯಶ್ ಹೇಳಿದ್ದಾರೆ. ಸದ್ಯ ಮುಂಬೈಯಲ್ಲಿ 'ರಾಮಾಯಣ' ಚಿತ್ರದಲ್ಲಿ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿರುವ ಅವರು, 'ಏಕಕಾಲಕ್ಕೆ ಎರಡೆರಡು ದೈತ್ಯ ಸಿನಿಮಾಗಳನ್ನು ನಿರ್ವಹಿಸಿ ಬಳಲಿದ್ದೇನೆ. ಹೀಗಾಗಿ ಈ ಚಿತ್ರಗಳ ಬಳಿಕ ಸ್ವಲ್ಪ ದಿನಗಳ ಕಾಲ ವಿರಾಮ ಪಡೆದು ನಂತರ ಹೊಸ ಸಿನಿಮಾಗಳ ಬಗ್ಗೆ ಚಿಂತಿಸುವೆ' ಎಂದಿದ್ದಾರೆ.

'2022ರಲ್ಲಿ ಬಿಡುಗಡೆಯಾದ ಕೆಜಿಎಫ್ 2 ಸಿನಿಮಾವೇ ಕೊನೆ, ಆ ಬಳಿಕ ಇಲ್ಲಿಯವರೆಗೆ ನನ್ನ ಯಾವ ಸಿನಿಮಾವೂ ಬಿಡುಗಡೆಯಾಗಿಲ್ಲ. ಇದಕ್ಕೆ ಅಭಿಮಾನಿಗಳಿಗೆ ನನ್ನ ಬಗ್ಗೆ ಸಿಟ್ಟಿದೆ ಅಂತ ತಿಳಿದಿದೆ. ಆದರೆ ಈ ದೈತ್ಯ ಸಿನಿಮಾಗಳಿಗೆ ಅಷ್ಟು ಪರಿಶ್ರಮ ಹಾಗೂ ಸಮಯದ ಅಗತ್ಯವಿತ್ತು. ಜೊತೆಗೆ ಎರಡೂ ಸಿನಿಮಾಗಳನ್ನೂ ಗ್ಲೋಬಲ್ ಲೆವೆಲ್‌ನಲ್ಲಿ ಬಿಡುಗಡೆ ಮಾಡುವ ಸವಾಲಿತ್ತು. ಕೆಜಿಎಫ್ 3 ಸಿನಿಮಾ ಮಾಡುವ ಬಗ್ಗೆ ಬ್ರೇಕ್‌ನ ಬಳಿಕ ಚಿಂತಿಸುವೆ. ಸದ್ಯ ಅದರ ಸ್ಕ್ರಿಪ್ಟ್ ಅಂತಿಮಗೊಳ್ಳಬೇಕಿದೆ' ಎಂದೂ ಯಶ್ ಹೇಳಿದ್ದಾರೆ.

ಈ ವರ್ಷ ದೀಪಾವಳಿಗೆ ಯಶ್ ನಟನೆ ಹಾಗೂ ಸಹ ನಿರ್ಮಾಣದ 'ರಾಮಾಯಣ' ಸಿನಿಮಾದ ಮೊದಲ ಭಾಗ ಬಿಡುಗಡೆಯಾಗಲಿದೆ.

ಮಗನ ಆಗಮನದ ಸುದ್ದಿ ಕೊಟ್ಟ ಧನಂಜಯ





ಡಾಲಿ ಧನಂಜಯ, ಡಾ. ಧನ್ಯತಾ


ಗಣ್ಯರ ಶುಭ ಹಾರೈಕೆ

• **ಕನ್ನಡಪ್ರಭ** ಸಿನಿವಾರ್ತೆ

ಡಾಲಿ ಧನಂಜಯ ಹಾಗೂ ಡಾ. ಧನ್ಯತಾ ದಂಪತಿಗೆ ಗಂಡು ಮಗುವಾಗಿದೆ. ಡಾಲಿ ಧನಂಜಯ ಈ ಶುಭ ಸುದ್ದಿ ಹಂಚಿಕೊಂಡಿದ್ದಾರೆ. 'ಸೂರ್ಯ ಉದಯಿಸುತ್ತಿರುವ ಹಾಗೆ ನಮ್ಮ ಬದುಕಿನ ಅತೀ ದೊಡ್ಡ ಖುಷಿಯ ಉದಯವಾಗಿದೆ' ಎಂದು ಧನಂಜಯ ಕಾವ್ಯಾತ್ಮಕವಾಗಿ ಬರೆದುಕೊಂಡಿದ್ದಾರೆ. ಸ್ಯಾಂಡಲ್‌ವುಡ್‌ನ ಅನೇಕರು ದಂಪತಿಗೆ ಶುಭ ಹಾರೈಸಿದ್ದಾರೆ. ಕಳೆದ ವರ್ಷ ಈ ಜೋಡಿ ದಾಂಪತ್ಯ ಜೀವನಕ್ಕೆ ಅಡಿ ಇಟ್ಟಿತ್ತು.

ಜೈಲರ್ 2ನಲ್ಲಿ ರಜನಿಕಾಂತ್ ಜೊತೆಗೆ ಮೇಘನಾ ರಾಜ್





ಚಿರು, ನಮ್ಮ ಕನಸನ್ನು ನನಸು ಮಾಡುತ್ತಿದ್ದೇನೆ: ಮೇಘನಾ

ರಜನಿಕಾಂತ್, ಮೇಘನಾ ರಾಜ್

• **ಕನ್ನಡಪ್ರಭ** ಸಿನಿವಾರ್ತೆ

ನಟಿ ಮೇಘನಾ ರಾಜ್ ಇದೀಗ ತಲೈವಾ ರಜನಿಕಾಂತ್ ಜೊತೆಗಿರುವ ಫೋಟೋ ಶೇರ್ ಮಾಡಿ ತಾನು 'ಜೈಲರ್ 2' ಸಿನಿಮಾದಲ್ಲಿ ನಟಿಸುತ್ತಿರುವುದನ್ನು ಅಧಿಕೃತವಾಗಿ ತಿಳಿಸಿದ್ದಾರೆ.

ತನ್ನ ಮದುವೆ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಗತಿಸಿದ ಪತಿ ಚಿರಂಜೀವಿ ಸರ್ಜಾ ಅವರನ್ನು ಉಲ್ಲೇಖಿಸಿ ಬರೆದಿರುವ ನೋಟ್‌ನಲ್ಲಿ ತಮ್ಮಿಬ್ಬರ ಬಹುಕಾಲದ ಕನಸು ನನಸಾಗಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

'ನಮ್ಮ ಈ ಆ್ಯನಿವರ್ಸರಿ ಕೇವಲ ಒಂದು ದಿನಾಂಕ ಅಷ್ಟೇ ಅಲ್ಲ ಚಿರು, ಇದೊಂದು ಭಾವನೆ. ಯಾವಾಗ ನಿನ್ನ ಕನಸು ನನ್ನದೆಂದು, ನನ್ನ ಕನಸು ನಿನ್ನದೆಂದು, ನಮ್ಮಿಬ್ಬರ ಕನಸು ಒಂದೇ ಎಂದು ಭಾವಿಸತೊಡಗಿದೆವೋ ಆ ಕ್ಷಣ ನಾವಿಬ್ಬರೂ ಒಂದೇ ಆದೆವು. ನಾನು ಇಡುವ ಪ್ರತೀ ಹೆಜ್ಜೆಯಲ್ಲೂ ನೀನಿರುವೆ. ನೀನೀಗ ದೇವರಿಗೆ ಹತ್ತಿರವಾಗಿರುವೆ, ಏಕಕಾಲಕ್ಕೆ ನನ್ನೊಳಗೂ ಜೀವಿಸುತ್ತಿರುವೆ, ಇದನ್ನು ಹೊರಜಗತ್ತಿಗೆ ವಿವರಿಸುವುದು ಕಷ್ಟ. ನೀನು ಅವರನ್ನು ಆರಾಧಿಸಿದೆ, ಜೊತೆಗೆ ಭಾರತೀಯ ಚಿತ್ರರಂಗ ದೇವತಾ ಮನುಷ್ಯನನ್ನು ನಾನು ಊಹಿಸಿಯೂ ಇರದ ರೀತಿಯಲ್ಲಿ ಭೇಟಿ ಮಾಡಿಸಿದೆ. ಒನ್ ಆಂಡ್ ಓನ್ಲಿ ರಜನಿ ಸರ್ ಜೊತೆ ಜೈಲರ್ 2 ಸಿನಿಮಾ ಮಾಡುವಂತಾಯ್ತು. ನಾವಿಬ್ಬರೂ ಜೊತೆಯಾಗಿ ಈ ಕನಸನ್ನು ಕಂಡಿದ್ದೆವು. ಹೀಗಾಗಿ ಈ ಸಿನಿಮಾದಿಂದ ಬರುವ ಯಶಸ್ಸು, ಮೈಲಿಗಲ್ಲು ಎಲ್ಲ ನಿನಗೇ ಸೇರಿದ್ದು' ಎಂದು ಮೇಘನಾ ಭಾವುಕವಾಗಿ ಬರೆದುಕೊಂಡಿದ್ದಾರೆ.

ರಜನಿಕಾಂತ್ ಅವರನ್ನು ಆರಾಧಿಸುತ್ತಿದ್ದ ಚಿರಂಜೀವಿ ಸರ್ಜಾ ಅವರ ಪ್ರತಿಮೆಯನ್ನು ತನ್ನೊಂದಿಗೆ ಇಟ್ಟುಕೊಂಡಿದ್ದರು. ಅದಕ್ಕೆ ಮೇಘನಾ ಇದೀಗ ತಲೈವಾ ಅವರ ಸಹಿ ಹಾಕಿಸಿದ್ದಾರೆ. ತನ್ನ ಪುತ್ರನ ಜೊತೆಗೆ ರಜನಿಕಾಂತ್ ಜೊತೆಗೆ ಆಪ್ತವಾಗಿ ಫೋಟೋ ತೆಗೆಸಿಕೊಂಡಿದ್ದಾರೆ.

ಇತರೆ

ಸುದ್ದಿ ಸಿಂಚನ

ಇರಾನ್ ಸಮರ ಎಫೆಕ್ಟ್: ಅಧ್ಯಕ್ಷ ಟ್ರಂಪ್ ಜನಪ್ರಿಯತೆ ಶೇ.37ಕ್ಕೆ ದಿಢೀರ್ ಇಳಿಕೆ

ವಾಷಿಂಗ್ಟನ್: ನವೆಂಬರ್‌ನಲ್ಲಿ ನಡೆಯಲಿರುವ ಮಧ್ಯಂತರ ಚುನಾವಣೆಗೂ ಮುನ್ನ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒಟ್ಟಾರೆ ಅಪ್ರೂವಲ್ ರೇಟಿಂಗ್ (ಜನಪ್ರಿಯತೆ) ಶೇ. 37ಕ್ಕೆ ಇಳಿದಿದೆ. ಇದೇ ವೇಳೆ, 'ಶೇ. 66ರಷ್ಟು ಅಮೆರಿಕನ್ನರು ಟ್ರಂಪ್ ಆರ್ಥಿಕ ಸಮಸ್ಯೆಗಳನ್ನು ನಿರ್ವಹಿಸಿದ ರೀತಿಯನ್ನು ಮೆಚ್ಚುವುದಿಲ್ಲ ಎಂದಿದ್ದಾರೆ' ಎಂದು ವಾಷಿಂಗ್ಟನ್ ಪೋಸ್ಟ್-ಎಬಿಸಿ ನ್ಯೂಸ್-ಇಪ್ಸೋಸ್ ಸಮೀಕ್ಷೆ ಹೇಳಿದೆ. ಇರಾನ್ ಜೊತೆಗಿನ ಪರಿಸ್ಥಿತಿಯನ್ನು ಅವರು ನಿಭಾಯಿಸಿದ ರೀತಿಯನ್ನು ಶೇ.66ರಷ್ಟು ಅಮೆರಿಕನ್ನರು ತಿರಸ್ಕರಿಸಿದ್ದಾರೆ. ಅನಿಲ ಬೆಲೆ ಏರಿಕೆಯಾಗಿರುವುದರಿಂದ ಆರ್ಥಿಕತೆಯ ಮೇಲಿನ ಅವರ ರೇಟಿಂಗ್ 7 ಪಾಯಿಂಟ್‌ಗಳಷ್ಟು ಕುಸಿದು ಶೇ.34 ಕ್ಕೆ ಇಳಿದಿದೆ. ಇದೇ ವೇಳೆ, ಹೆಚ್ಚಿನ ಸಂಖ್ಯೆಯ ಅಮೆರಿಕನ್ನರು ಪ್ರಮುಖ ಸಮಸ್ಯೆಗಳನ್ನು ನಿಭಾಯಿಸಲು ದೇಶದ ಎರಡೂ ರಾಜಕೀಯ ಪಕ್ಷಗಳು ವಿಫಲವಾಗಿವೆ ಎಂದಿದ್ದಾರೆ. 'ಟ್ರಂಪ್ ಅವರ ಒಟ್ಟಾರೆ ಅಪ್ರೂವಲ್ ರೇಟಿಂಗ್ ಈಗ ಶೇ. 37 ರಷ್ಟಿದೆ, ಫೆಬ್ರವರಿಯಲ್ಲಿ ಶೇ. 39 ರಷ್ಟಿತ್ತು. ಆದರೆ ಅವರ ಬಗ್ಗೆ ಜನರ ಅಸಮ್ಮತಿ ಶೇ.62 ಕ್ಕೆ ತಲುಪಿದೆ. ಇದು ಅವರ ಎರಡು ಅವಧಿಗಳ ಅಧಿಕಾರಾವಧಿಯಲ್ಲೇ ಅತ್ಯಧಿಕವಾಗಿದೆ' ಎಂದು ವಾಷಿಂಗ್ಟನ್ ಪೋಸ್ಟ್ ಹೇಳಿದೆ. ಆದರೆ ಅಮೆರಿಕ- ಮೆಕ್ಸಿಕೋ ಗಡಿಯಲ್ಲಿ ವಲಸೆಯನ್ನು ನಿರ್ವಹಿಸುವಲ್ಲಿ ಅಮೆರಿಕ ಅಧ್ಯಕ್ಷರು ಅತ್ಯುತ್ತಮ ರೇಟಿಂಗ್‌ಗಳನ್ನು ಪಡೆದಿದ್ದಾರೆ.




ವಾಷಿಂಗ್ಟನ್ ಪೋಸ್ಟ್ ಸಮೀಕ್ಷೆ

ಪುತ್ರಿಯ ಮೊಬೈಲ್ ಗೀಳು ತಡೆಗೆ ಅಪ್ಪನಿಂದ ಬೌನ್ಸರ್ಸ್!

↙ ಮೊದಲ ಪುಟದಿಂದ

ಅಲ್ಲಿ ಪರಿಚಯವಾದವರನ್ನು ಮುಖತಃ ಭೇಟಿಯಾಗಲೂ ಪ್ರಾರಂಭಿಸಿದ್ದಳು. ತಂದೆ ತಾಯಿ ಮೊಬೈಲ್ ಕಸಿದರೆ ಟೀವಿ ಮೊದಲಾದ ವಸ್ತುಗಳನ್ನು ಅಪಾರ್ಟ್‌ಮೆಂಟ್‌ನಿಂದ ಹೊರಗೆ ಎಸೆಯುತ್ತಿದ್ದಳು. ಒಮ್ಮೆಯಂತೂ ಸಿಟ್ಟಿನಿಂದ ಸ್ವಂತ ತಾಯಿಯ ಮೇಲೆ ಹಲ್ಲೆಗೆ ಮುಂದಾಗಿದ್ದಳು. ವೈದ್ಯರ ಬಳಿ ಕರೆದೊಯ್ದಾಗ, ಆಕೆಗೆ ಚಿಕಿತ್ಸೆಯ ಜತೆಗೆ ನಿಯಂತ್ರಣದ ಕ್ರಮವೂ ಅಗತ್ಯವಿದೆ ಎಂದಿದ್ದರು. ಹೀಗಾಗಿ ಪೋಷಕರು ಬೌನ್ಸರ್‌ಗಳ ನೇಮಕ ಮಾಡಿದ್ದಾರೆ.



ಹಲವು ಪ್ರಕರಣ: ಇದೇ ರೀತಿ ಸೂರತ್‌ನಲ್ಲಿ 17 ವರ್ಷದ ಹುಡುಗ ಗೇಮಿಂಗ್ ವ್ಯಸನದಿಂದ ಕೋಪಗೊಂಡು ತಂದೆಯ ಪ್ರೀತಿಯ ನಾಯಿಯನ್ನು ಹೊಡೆಯುತ್ತಿದ್ದ. ಅವನನ್ನು ಕಾವಲು ಕಾಯಲು ಬೌನ್ಸರ್‌ಗಳನ್ನು ನೇಮಿಸಲಾಗಿತ್ತು. ಮತ್ತೊಂದು ಪ್ರಕರಣದಲ್ಲಿ, ಡ್ರಗ್ ವ್ಯಸನಕ್ಕೆ ಚಿಕಿತ್ಸೆ ಪಡೆದ ಹುಡುಗನನ್ನು ಮತ್ತೆ ಮಾದಕವಸ್ತುಗಳಿಗೆ ಅಂಟದಂತೆ ಕಾವಲಿಗೆ ಬೌನ್ಸರ್‌ಗಳನ್ನು ನಿಯೋಜಿಸಲಾಗಿದೆ.

ಪಂಚ ಚುನಾವಣೆ ಗದ್ದುಗೆ ಯಾರಿಗೆ?

↙ ಮೊದಲ ಪುಟದಿಂದ

ರಾಜ್ಯದ 126 ವಿಧಾನಸಭಾ ಕ್ಷೇತ್ರಗಳಲ್ಲಿ 722 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಹಾಲಿ ಸಿಎಂ, ಬಿಜೆಪಿ ನಾಯಕ ಹಿಮಂತ ಬಿಸ್ವ ಶರ್ಮಾ 3ನೇ ಬಾರಿ ಸಿಎಂ ಆಗುವ ಇರಾದೆ ಹೊಂದಿದ್ದಾರೆ. ಕಾಂಗ್ರೆಸ್‌ನ ಗೌರವ್ ಗೊಗೋಯ್ ಮೊದಲ ಬಾರಿ ಸಿಎಂ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಆದರೆ ಬಿಜೆಪಿ ಅಧಿಕಾರಕ್ಕೆ ಮರಳಲಿದೆ ಎಂದು ಹಲವು ಸಮೀಕ್ಷೆಗಳು ಹೇಳಿವೆ.

ಪ. ಬಂಗಾಳ: 5 ರಾಜ್ಯಗಳ ಭಾರೀ ಹಣಾಹಣಿಗೆ ಸಾಕ್ಷಿಯಾಗಿರುವ 294 ಸದಸ್ಯ ಬಲದ ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರ ಟಿಎಂಸಿ-ಬಿಜೆಪಿ ನಡುವೆ ಕಂಡು ಕೇಳರಿಯದ ನೇರ ಸ್ಪರ್ಧೆ ಏರ್ಪಟ್ಟಿದೆ. 77 ಕೇಂದ್ರಗಳಲ್ಲಿ ಮತ ಎಣಿಕೆ ನಡೆಯಲಿದೆ. ಫಾಲ್ಟಾ ಎಂಬ ಕ್ಷೇತ್ರದಲ್ಲಿ ಮೇ 21ಕ್ಕೆ ಮರು ಮತದಾನ ನಡೆಯಲಿರುವ ಕಾರಣ ಆ ಕ್ಷೇತ್ರ ಹೊರತು ಪಡಿಸಿ ಮಿಕ್ಕ 293 ಸ್ಥಾನಗಳ ಫಲಿತಾಂಶ ಘೋಷಣೆಗೆ ವೇದಿಕೆ ಸಜ್ಜಾಗಿದೆ. 6 ಸಮೀಕ್ಷೆಗಳು ಮೊದಲ ಬಾರಿ ಬಿಜೆಪಿ ಗೆಲ್ಲಲಿದೆ ಎಂದಿವೆ, 2 ಟಿಎಂಸಿ ಪರ ಭವಿಷ್ಯ ಹೇಳಿವೆ.

ತ.ನಾಡು: ಡಿಎಂಕೆ, ಅಣ್ಣಾಡಿಎಂಕೆ ಮತ್ತು ವಿಜಯ್‌ರ ಟಿವಿಕೆ ಪಕ್ಷದ ತ್ರಿಕೋನ ಹಣಾಹಣಿಗೆ ಸಾಕ್ಷಿಯಾದ 234 ಸ್ಥಾನ ಬಲದ ತಮಿಳ್ನಾಡಲ್ಲಿ ಫಲಿತಾಂಶ ಕುತೂಹಲ ಕೆರಳಿಸಿದೆ. ಕಾರಣ, ಸಾಂಪ್ರದಾಯಿಕ ಅಣ್ಣಾಡಿಎಂಕೆ-ಡಿಎಂಕೆ ಬದಲು ವಿಜಯ್ ಅವರ ಟಿವಿಕೆ ಗೆಲ್ಲಲಿದೆ ಎಂದು ಕೆಲವು ಸಮೀಕ್ಷೆಗಳು ಹೇಳಿವೆ. ಆದಾಗ್ಯೂ ಎಂ.ಕೆ. ಸ್ಟಾಲಿನ್ ಪರ ಕೆಲವು, ಅಣ್ಣಾಡಿಎಂಕೆ ಪರ ಕೆಲವು ಸಮೀಕ್ಷೆಗಳು ಒಲವು ತೋರಿವೆ. 62 ಎಣಿಕೆ ಕೇಂದ್ರಗಳಲ್ಲಿ ಎಣಿಕೆ ನಡೆಯಲಿದೆ.

ಕೇರಳ: 140 ಸ್ಥಾನ ಬಲದ ಕೇರಳದಲ್ಲಿ ಎಡಪಕ್ಷಗಳ ನೇತೃತ್ವದ ಎಲ್‌ಡಿಎಫ್, ಕಾಂಗ್ರೆಸ್ ನೇತೃತ್ವದ ಯುಡಿಎಫ್ ಹಾಗೂ ಬಿಜೆಪಿ ನಡುವೆ ತ್ರಿಕೋನ ಕದನ ನಡೆದಿದೆ. ಒಟ್ಟು 883 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಹೆಚ್ಚಿನ ಸಮೀಕ್ಷೆಗಳು ನಿಕಟ ಸ್ಪರ್ಧೆ ಊಹಿಸಿದ್ದರೂ ಯುಡಿಎಫ್‌ಗೆ ಮುನ್ನಡೆ ನೀಡಿವೆ.

ಪುದುಚೇರಿ: 30 ಸ್ಥಾನ ಬಲದ ಪುದುಚೇರಿಯಲ್ಲಿ ಎನ್‌ಡಿಎ ಕೂಟದ ಭಾಗವಾದ ಎನ್‌ಆರ್ ಕಾಂಗ್ರೆಸ್ ಹಾಗೂ ಡಿಎಂಕೆ-ಕಾಂಗ್ರೆಸ್ ಕೂಟಗಳ ನಡುವೆ ಸ್ಪರ್ಧೆ ಇದೆ. ಹಾಲಿ ಸಿಎಂ, ಎನ್‌ಡಿಎನ ರಂಗಸ್ವಾಮಿ ಸೇರಿ 294 ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ. ಎನ್‌ಡಿಎ ಪುನಃ ಅಧಿಕಾರಕ್ಕೆ ಬರುವ ಸಾಧ್ಯತೆ ಹೆಚ್ಚಿದೆ ಎಂದು ಬಹುತೇಕ ಸಮೀಕ್ಷೆಗಳು ಹೇಳಿವೆ.

ಕೈ ಪಾಳೆಯದಲ್ಲೀಗ ಉಪಸಮರ ಲಾಭ, ನಷ್ಟದ ಲೆಕ್ಕಾಚಾರ ಶುರು

↙ ಮೊದಲ ಪುಟದಿಂದ

ಆದರೆ, ಈ ತಿಕ್ಕಾಟದ ನಡುವೆಯೂ ದಾವಣಗೆರೆ ಕಾಂಗ್ರೆಸ್ ಗೆಲುವು ಖಚಿತ ಎಂಬ ವಿಶ್ವಾಸಕ್ಕೆ ಕೈ ಪಾಳಯ ಬಂದಿದೆ. ಅಲ್ಪಸಂಖ್ಯಾತ ಮತಗಳಲ್ಲಿ ತುಸು ಗೊಂದಲ ಉಂಟಾಗಿದ್ದರೂ ಪೂರ್ಣ ಪ್ರಮಾಣದಲ್ಲಿ ಕಾಂಗ್ರೆಸ್‌ನಿಂದ ವಿಮುಖರಾಗಿಲ್ಲ. ಜತೆಗೆ ಲಿಂಗಾಯತ ಮತಗಳು ಕ್ರೋಢೀಕರಣ ಆಗಿರುವುದರಿಂದ ದಾವಣಗೆರೆ ದಕ್ಷಿಣದಲ್ಲಿ ಭಾರಿ ಬಹುಮತ ಇಲ್ಲದಿದ್ದರೂ ಗೆಲುವಿನ ಭರವಸೆಯಲ್ಲಿ ಕಾಂಗ್ರೆಸ್ ಇದೆ.

ಜತೆಗೆ ಬಾಗಲಕೋಟೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರ ತಂಡ ಬೀಡುಬಿಟ್ಟಿದ್ದು ಹಾಗೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಿದ್ದು, ಇದು ಕಾಂಗ್ರೆಸ್‌ಗೆ ಉತ್ತಮ ಮತ ಫಸಲು ನೀಡಿದೆ ಎಂಬ ನಂಬಿಕೆ ಕೈ ಪಾಳಯದಲ್ಲಿದೆ.

ಹೀಗಾಗಿ ಕಾಂಗ್ರೆಸ್ಸಿಗರಿಗೆ ಬಹುಮತದಲ್ಲಿ ವ್ಯತ್ಯಾಸಗಳಿದ್ದರೂ ಎರಡೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಗೆಲ್ಲುವ ನಂಬಿಕೆಯಿದೆ. ಒಂದೊಮ್ಮೆ ಎರಡೂ ಕ್ಷೇತ್ರ ಸೋತರೆ ಅಧಿಕಾರ ಹಂಚಿಕೆ ಮತ್ತಿತರ ವಿಚಾರಗಳು ಮುನ್ನೆಲೆಗೆ ಬರುವ ಸಾಧ್ಯತೆಯಿದೆ.

ಉಪಚುನಾವಣೆಗಳು ಸಾಮಾನ್ಯವಾಗಿ ಅಧಿಕಾರದಲ್ಲಿರುವ ಪಕ್ಷದ ಪರವಾಗಿಯೇ ಇರುವುದು ರೂಢಿ. ಸಂಪನ್ಮೂಲ, ವ್ಯವಸ್ಥೆಯ ಬಲ, ಅನುಕಂಪದ ಲಾಭ ಮತ್ತಿತರ ಕಾರಣಗಳಿಂದ ಈ ಬಾರಿಯ ಉಪ ಚುನಾವಣೆಯಲ್ಲೂ ಕಾಂಗ್ರೆಸ್‌ಗೆ ಪೂರಕ ವಾತಾವರಣ ಇದೆ ಎಂಬ ಲೆಕ್ಕಾಚಾರ ಇದೆ.

ಸೋತರೆ ಏನು?: ಅಕಸ್ಮಾತ್ ಎರಡೂ ಕಡೆ ಸೋತರೆ ಏನಾಗಬಹುದು ಎಂಬ ಲೆಕ್ಕಾಚಾರವೂ ಶುರುವಾಗಿದ್ದು, ಒಂದೊಮ್ಮೆ ಎರಡೂ ಕ್ಷೇತ್ರ ಸೋತರೆ ಸರ್ಕಾರದ ವಿರುದ್ಧ ಆಡಳಿತ ವಿರೋಧಿ ಅಲೆಯ ಮುನ್ಸೂಚನೆಯಾಗಿ ಪರಿಗಣಿಸಬಹುದು. ಪ್ರತಿಪಕ್ಷಗಳ ಧ್ವನಿಗೆ ಬಲ ಬರಬಹುದು. ಸರ್ಕಾರ ತಮ್ಮಲ್ಲಿನ ಲೋಪಗಳನ್ನು ಸರಿಪಡಿಸಿಕೊಳ್ಳಲು ಸಮಯಾವಕಾಶ ಇರುವುದರಿಂದ ಸಾರ್ವತ್ರಿಕ ಚುನಾವಣೆ ವೇಳೆಗೆ ಆಗಬೇಕಾದ ಬದಲಾವಣೆಗಳಿಗೆ ಕೈ ಹಾಕಬೇಕಾಗಬಹುದು.

ಎರಡರಲ್ಲಿ ಒಂದು ಸೋತು, ಒಂದು ಗೆದ್ದರೆ ಯಾವ ಕ್ಷೇತ್ರ ಸೋತಿದ್ದಾರೆ ಎಂಬುದರ ಮೇಲೆಯೇ ಫಲಿತಾಂಶದ ಪರಿಣಾಮಗಳ ಲೆಕ್ಕಾಚಾರ ಅವಲಂಬಿಸಲಿದೆ. ದಾವಣಗೆರೆ ದಕ್ಷಿಣ ಸೋತರೆ ಮುಸ್ಲಿಂ ಬಂಡಾಯದ ಕಾರಣ ನೀಡಿ ಚುನಾವಣೆಗೆ ಕೆಲಸ ಮಾಡದ ಮುಸ್ಲಿಂ ನಾಯಕರನ್ನು ಹೊಣೆ ಮಾಡಬಹುದು. ಪ್ರಚಾರಕ್ಕೆ ಸಹಕಾರ ನೀಡದ ಸಚಿವರ ಮೇಲೂ ಕ್ರಮ ಕೈಗೊಳ್ಳಬಹುದು. ಜತೆಗೆ ಇದು ಡಿ.ಕೆ. ಶಿವಕುಮಾರ್ ಒತ್ತಾಯದಿಂದ ಕೊಡಿಸಿದ ಟಿಕೆಟ್ ಆಗಿರುವುದರಿಂದ ಅವರಿಗೆ ತುಸು ಹಿನ್ನಡೆ ಉಂಟಾಗಬಹುದು.

ಬಾಗಲಕೋಟೆ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತಂಡ ಅಹರ್ನಿಶಿ ಕೆಲಸ ಮಾಡಿದೆ. ಸಿದ್ದರಾಮಯ್ಯ ಅವರದ್ದೇ ಸಮುದಾಯದ ಅಭ್ಯರ್ಥಿ ಆಗಿರುವುದರಿಂದ ಹಿನ್ನಡೆ ಆಗಲ್ಲ ಎಂಬ ಗಟ್ಟಿ ವಿಶ್ವಾಸದಲ್ಲಿದ್ದಾರೆ. 1 ವೇಳೆ ಬಾಗಲಕೋಟೆ ಸೋತರೆ ಸಿದ್ದರಾಮಯ್ಯಗೆ ಹಿನ್ನಡೆ ಆಗಲಿದೆ.

ಎರಡೂ ಕ್ಷೇತ್ರ ಸೋತರೆ, ನಾಯಕತ್ವ ಬದಲಾವಣೆಯ ಚರ್ಚೆಗೆ ಇಂಬು ದೊರೆಯಬಹುದೇ ಎಂಬ ಕುತೂಹಲವಿದೆ. ಆದರೆ, ನಾಯಕತ್ವ ಬದಲಾವಣೆ ಎಂಬುದು ಉಪಚುನಾವಣೆ ಫಲಿತಾಂಶಕ್ಕಿಂತ ರಾಹುಲ್‌ಗಾಂಧಿ ಅವರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಹೆಚ್ಚಾಗಿ ಅವಲಂಭಿತ ಎನ್ನುತ್ತಾರೆ ಹಿರಿಯ ಕಾಂಗ್ರೆಸ್ ನಾಯಕರು. ಅವರು ಪ್ರಕಾರ ರಾಹುಲ್‌ಗಾಂಧಿ ಈಗಾಗಲೇ ನಾಯಕತ್ವ ಬದಲಾವಣೆ ಮಾಡಲು ಅಥವಾ ಮಾಡದಿರಲು ಸ್ಪಷ್ಟ ನಿಲುವು ತಾಳಿದ್ದರೆ ಅದನ್ನು ಬದಲು ಮಾಡುವಷ್ಟು ಪರಿಣಾಮ ಈ ಚುನಾವಣೆ ಬೀರಲಾರದು. ಈ ಕಾರಣಕ್ಕೆ ಫಲಿತಾಂಶ ಅಧಿಕಾರ ಹಂಚಿಕೆ ವಿಚಾರದಲ್ಲಿ ಗೌಣ ಆಗಲಿದೆ ಎಂಬ ವಿಶ್ಲೇಷಣೆಯೂ ಇದೆ.

ಕುತೂಹಲ ಮೂಡಿಸಿದ ರಾಹುಲ್ ಗಾಂಧಿ ನಡೆ

ಅಧಿಕಾರ ಹಂಚಿಕೆ, ಸಂಪುಟ ಪುನಾರಚನೆ ಮತ್ತಿತರ ವಿಷಯಗಳ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದ ಎರಡೂ ಬಣಗಳು ಪ್ರಯತ್ನಿಸಿದರೂ ರಾಹುಲ್‌ಗಾಂಧಿ ಅವರ ಯಾರ ಭೇಟಿಗೂ ಸಿಗುತ್ತಿಲ್ಲ. ಅಧಿಕಾರ ಹಂಚಿಕೆ, ಸಂಪುಟ ಪುನಾರಚನೆ ಕುರಿತು ರಾಹುಲ್‌ಗಾಂಧಿ ಅವರ ಯೋಚನೆ ಏನಿದೆ ಎಂಬುದು ಎಐಸಿಸಿ ಅಧ್ಯಕ್ಷರ ಆದಿಯಾಗಿ ಯಾರಿಗೂ ಸ್ಪಷ್ಟತೆ ಇಲ್ಲ. ಹೀಗಾಗಿ ಕೈ ಪಾಳೆಯ ದಲ್ಲಿನ ಈ ಬಗೆಗಿನ ಕುತೂಹಲ ಮುಂದುವರೆಯುವ ಸಾಧ್ಯತೆಯಿದೆ.

ದಾವಣಗೆರೆ, ಬಾಗಲಕೋಟೆ ಕ್ಷೇತ್ರಗಳು ಯಾರ ಮಡಿಲಿಗೆ?

↙ ಮೊದಲ ಪುಟದಿಂದ

ಕಾಂಗ್ರೆಸ್-ಬಿಜೆಪಿ ಸಮರ: ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಎರಡೂ ಕಡೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಬಿಗ್ ಫೈಟ್ ಏರ್ಪಟ್ಟಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಮತ್ತು ಬಿಜೆಪಿಯಿಂದ ಶ್ರೀನಿವಾಸ್ ಟಿ.ದಾಸಕರಿಯಪ್ಪ ಸೇರಿದಂತೆ ಒಟ್ಟು 25 ಅಭ್ಯರ್ಥಿಗಳು ಕಣದಲ್ಲಿದ್ದರೆ, ಅತ್ತ ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಉಮೇಶ್ ಮೇಟಿ ಮತ್ತು ಬಿಜೆಪಿಯ ವೀರಣ್ಣ ಚರಂತಿಮಠ ಸೇರಿದಂತೆ ಒಟ್ಟು 9 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

'ಕೈ'ಗೆ ಎದುರಾದ ಭಿನ್ನಮತ: ಕಾಂಗ್ರೆಸ್‌ಗೆ ಎರಡೂ ಕ್ಷೇತ್ರದಲ್ಲಿ ಭಿನ್ನಮತ ಎದುರಾಗಿತ್ತು. ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯ ಕಾಂಗ್ರೆಸ್ ಟಿಕೆಟ್‌ಗೆ ಪಟ್ಟು ಹಿಡಿದಿದ್ದರಿಂದ ಸಮಸ್ಯೆ ಎದುರಾಗಿತ್ತು. ಶಾಮನೂರು ಕುಟುಂಬಕ್ಕೆ ಟಿಕೆಟ್ ನೀಡಿದ ಹಿನ್ನೆಲೆಯಲ್ಲಿ ಸ್ಥಳೀಯ ಅಲ್ಪಸಂಖ್ಯಾತ ನಾಯಕರಲ್ಲಿ ಅಸಮಾಧಾನ ಸ್ಫೋಟಗೊಂಡಿತ್ತು. ಸಾದಿಕ್ ಪೈಲ್ವಾನ್ ಬಂಡಾಯ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿ, ಬಳಿಕ, ಕಣದಿಂದ ನಿವೃತ್ತಿಯಾಗಿದ್ದರು. ಸಚಿವ ಜಮೀರ್‌ಅಹ್ಮದ್ ಖಾನ್ ಆರಂಭದಲ್ಲಿ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡದೆ ಅಂತರ ಕಾಯ್ದುಕೊಂಡಿದ್ದರು. ಅಂತಿಮವಾಗಿ, 14 ಮಂದಿ ಮುಸ್ಲಿಂ ಅಭ್ಯರ್ಥಿಗಳು ಕಾಂಗ್ರೆಸ್‌ಗೆ ಬಂಡಾಯವಾಗಿ, ಪಕ್ಷೇತರರಾಗಿ ಕಣದಲ್ಲಿದ್ದಾರೆ. ಇನ್ನು, ಬಾಗಲಕೋಟೆಯಲ್ಲಿ ಮೇಟಿ ಕುಟುಂಬದ ಮಕ್ಕಳಾದ ಮಲ್ಲಿಕಾರ್ಜುನ ಮೇಟಿ ಮತ್ತು ಉಮೇಶ್ ಮೇಟಿ ನಡುವೆ ಟಿಕೆಟ್‌ಗಾಗಿ ತೀವ್ರ ಪೈಪೋಟಿ ಏರ್ಪಟ್ಟು, ಭಿನ್ನಮತಕ್ಕೆ ಕಾರಣವಾಗಿತ್ತು.

ಪಾಕಿಸ್ತಾನ, ಚೀನಾ ಮೇಲೆ ಬೆಂಗಳೂರು ಸ್ಯಾಟ್ಲೈಟ್ ಕಣ್ಣು

↙ ಮೊದಲ ಪುಟದಿಂದ

ಹಾಗೂ ರಕ್ಷಣಾ ಕ್ಷೇತ್ರ ಹಾಗೂ ವಿಪತ್ತುಗಳ ಸಂದರ್ಭದಲ್ಲಿ ನೆರವಾಗಲಿದೆ. 190 ಕೆ.ಜಿ. ತೂಗುವ ದೃಷ್ಟಿ ಉಪಗ್ರಹವನ್ನು ಭಾನುವಾರ ಮಧ್ಯಾಹ್ನ 12.29ಕ್ಕೆ (ಭಾರತೀಯ ಕಾಲಮಾನ) ಅಮೆರಿಕದ ಕ್ಯಾಲಿಫೋರ್ನಿಯಾದಿಂದ ಉಡಾವಣೆ ಮಾಡಲಾಗಿದೆ. ಇದಕ್ಕಾಗಿ ವಿಶ್ವದ ಅತಿ ಸಿರಿವಂತ ಉದ್ಯಮಿ ಎಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್‌ನ 'ಫಾಲ್ಕನ್-9' ರಾಕೆಟ್‌ಅನ್ನು ಬಳಸಲಾಗಿದೆ.

ಏನಿದು ಆಪ್ಟೋಸಾರ್ ತಂತ್ರಜ್ಞಾನ?: ಸದ್ಯ ಭಾರತದ 29 ಭೂವೀಕ್ಷಣಾ ಉಪಗ್ರಹಗಳು ಬಾಹ್ಯಾಕಾಶದಲ್ಲಿ ಕುಳಿತು ಮಾತೃಗ್ರಹದತ್ತ ಕಣ್ಣಿಟ್ಟಿವೆ. 'ದೃಷ್ಟಿ' ಕೂಡ ಈ ಸಾಲಿಗೆ ಸೇರಲಿದೆಯಾದರೂ, ತನ್ನಲ್ಲಿರುವ ವಿಶೇಷ ಕ್ಯಾಮೆರಾದಿಂದಾಗಿ ಅವೆಲ್ಲವುಗಳಿಗಿಂತ ಹೆಚ್ಚಿನ ಮಹತ್ವದ್ದಾಗಿದೆ. 'ಆಪ್ಟೋಸಾರ್ ತಂತ್ರಜ್ಞಾನ'ವೇ ಇದರ ಪ್ರಮುಖ ಶಕ್ತಿ ಹಾಗೂ ಆಕರ್ಷಣೆ.

ಉಷ್ಣವಲಯದಲ್ಲಿರುವ ಭಾರತದ ಬಹುತೇಕ ಪ್ರದೇಶಗಳ ಆಗಸದಲ್ಲಿ ಯಾವಾಗಲೂ ಮೋಡಗಳು ತೇಲುತ್ತಿರುತ್ತವೆ. ಇವುಗಳಿಂದಾಗಿ, ಬಾಹ್ಯಾಕಾಶದಲ್ಲಿರುವ ಉಪಗ್ರಹಗಳಿಗೆ ನಿರಂತರವಾಗಿ ಭೂಪ್ರದೇಶಗಳ ಸ್ಪಷ್ಟ ಚಿತ್ರಣ ಪಡೆಯುವುದು ಸವಾಲು. ಈ ಸಮಸ್ಯೆಗೆ ಪರಿಹಾರವಾಗಿ ದೃಷ್ಟಿಯಲ್ಲಿ ಆಪ್ಟಿಕಲ್ ಕ್ಯಾಮೆರಾ ಮತ್ತು ಸಿಂಥೆಟಿಕ್ ಅಪರ್ಚರ್ ರಾಡಾರ್‌ಅನ್ನು (ಸಾರ್) ಒಟ್ಟಿಗೆ ಒಟ್ಟಿಗೆ ಅಳವಡಿಸಲಾಗಿದೆ. ಆಪ್ಟಿಕಲ್ ಕ್ಯಾಮೆರಾ, ಸ್ಪಷ್ಟಚಿತ್ರಗಳನ್ನು ಸೆರೆಹಿಡಿಯಲು ಶಕ್ತವಾಗಿದೆ. ಆದರೆ ಮೋಡಗಳು ಅಡ್ಡ ಬಂದಾಗ ಅಥವಾ ರಾತ್ರಿಯ ಸಮಯದಲ್ಲಿ ಇದರ ಸಾಮರ್ಥ್ಯ ಕುಂದುತ್ತದೆ. ಅಂತಹ ಸಂದರ್ಭದಲ್ಲಿ ಕೈಹಿಡಿಯುವುದೇ 'ಸಾರ್'ನ ಕಣ್ಣು, ಮೋಡ, ಹೊಗೆ, ಮಳೆಯನ್ನೂ ಭೇದಿಸಿ, ರಾತ್ರಿಯಲ್ಲೂ ಚಿತ್ರಗಳನ್ನು ಸೆರೆಹಿಡಿಯುತ್ತದೆ. ಇದಕ್ಕಾಗಿ ಇದು ರೇಡಿಯೋ ತರಂಗಗಳನ್ನು ಬಳಸುತ್ತದೆ.

ಸದ್ಯ ದೃಷ್ಟಿ ಉಪಗ್ರಹವು ಭೂಮಿಯ 1.5 ಮೀ.ನಷ್ಟು ವ್ಯಾಪ್ತಿಯ ಪ್ರದೇಶವನ್ನು ಅತ್ಯಂತ ಸ್ಪಷ್ಟವಾಗಿ ನೋಡಬಲ್ಲದು. ಭೂಮಿಯ ಸುತ್ತ ನಿರಂತರವಾಗಿ ತಿರುಗುತ್ತಿರುವ ಇದು, 7-10 ದಿನಗಳಿಗೊಮ್ಮೆ ಒಂದು ಪ್ರದೇಶದ ಚಿತ್ರಗಳನ್ನು ಸೆರೆಹಿಡಿಯುತ್ತದೆ.

ಇನ್ನಷ್ಟು ನಿಖರತೆಯತ್ತ..: ಸದ್ಯ ಇರುವ 1.5 ಮೀಟರ್ ರೆಸೊಲ್ಯೂಷನ್ ಅನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶ ಗ್ಯಾಲೆಕ್ಸ್‌ಐನದ್ದಾಗಿದ್ದು, ಮುಂದೆ 0.5 ಮೀ.ನಿಂದ 0.3 ಮೀ.ಗೆ ಇದನ್ನು ಹೆಚ್ಚಿಸುವ ಉದ್ದೇಶವಿದೆ.

ಎಐ ಸ್ಪರ್ಶ: ಭೂವೀಕ್ಷಣಾ ಉಪಗ್ರಹಗಳು ನಿರಂತರವಾಗಿ ಚಿತ್ರಗಳನ್ನು ಸೆರೆಹಿಡುತ್ತಿರುತ್ತವೆ ಹಾಗೂ ಅವುಗಳನ್ನು ಭೂಮಿಗೆ ಕಳಿಸುತ್ತಿರುತ್ತವೆ ಹಾಗೂ ಅವನ್ನು ಇಲ್ಲಿ ಪರಿಶೀಲನೆ ಮಾಡಿ ನೋಡಲಾಗುತ್ತದೆ. ಆದರೆ ಈ ಕೆಲಸವನ್ನು ಬಾಹ್ಯಾಕಾಶದಲ್ಲೇ ಮುಗಿಸಿ, ಅಗತ್ಯವಿರುವ ಚಿತ್ರಗಳನ್ನಷ್ಟೇ ಪಡೆಯುವ ಉದ್ದೇಶದಿಂದ ದೃಷ್ಟಿಯಲ್ಲಿ ಎನ್ವಿಡಿಯಾ ಕಂಪನಿಯ ಸಹಾಯದಿಂದ ಕೃತಕ ಬುದ್ಧಿಮತ್ತೆ (ಎಐ) ಅಳವಡಿಸಲಾಗಿದೆ.

ಕಂಪನಿ ಹರ್ಷ: ಮಿಷನ್ ದೃಷ್ಟಿ ಕಾರ್ಯರೂಪಕ್ಕೆ ಬರುತ್ತಿದ್ದಂತೆ ಹರ್ಷ ವ್ಯಕ್ತಪಡಿಸಿರುವ ಗ್ಯಾಲೆಕ್ಸ್‌ಐ ಸ್ಥಾಪಕ ಸುಯಾಶ್ ಸಿಂಗ್, 'ಉಪಗ್ರಹವು ತನ್ನ ಕಕ್ಷೆಗೆ ತಲುಪಿಯಾಗಿದೆ. ಇನ್ನು ನಮ್ಮ ಗುರಿ ಅದರ ಕಾರ್ಯಾರಂಭ ಮಾಡಿಸುವುದು. ಈಗಾಗಲೇ ವಿದೇಶಿ ಕಂಪನಿಗಳು ಆಪ್ಟೋಸಾರ್ ತಂತ್ರಜ್ಞಾನದ ಬಗ್ಗೆ ಕುತೂಹಲ ತೋರಿಸುತ್ತಿವೆ. ಮುಂದಿನ 4 ವರ್ಷಗಳಲ್ಲಿ 8-12 ಸ್ಯಾಟಲೈಟ್‌ಗಳನ್ನು ಗಗನದಾಚೆಗೆ ಕಳಿಸಲಿದ್ದೇವೆ' ಎಂದಿದ್ದಾರೆ.

ಸಿಂಧೂರದಲ್ಲಿ ಬಳಕೆಯಾಗಿದ್ದ ಇಮೇಜ್: ಭೂವೀಕ್ಷಣಾ ಉಪಗ್ರಹಗಳನ್ನು ಕೃಷಿ, ಮೂಲಸೌಕರ್ಯ ಯೋಜನೆ, ವಿಪತ್ತು ನಿರ್ವಹಣೆಯಂತಹ ಕೆಲಸಗಳ ಜತೆ ಭದ್ರತೆಗಾಗಿಯೂ ಬಳಸಲಾಗುತ್ತದೆ. ಪಾಕಿಸ್ತಾನದ ವಿರುದ್ಧದ ಆಪರೇಷನ್ ಸಿಂಧೂರದ ವೇಳೆ ಭಾರತವು ತನ್ನ ಕಣ್ಗಾವಲು ಉಪಗ್ರಹಗಳ ಜತೆಗೆ ಮ್ಯಾಕ್ಸರ್‌ನಿಂದಲೂ ಪಾಕ್‌ನ ಉಗ್ರನೆಲೆ ಹಾಗೂ ಸೇನಾನೆಲೆಗಳು ಧ್ವಂಸವಾದ ಉಪಗ್ರಹ ಚಿತ್ರಗಳನ್ನು ಪಡೆದಿತ್ತು. ಇದು ಶತ್ರುರಾಷ್ಟ್ರದ ಮೇಲೆ ನಿಖರ ದಾಳಿಯನ್ನು ಸಾಧ್ಯವಾಗಿಸುವಲ್ಲಿ ಸಹಕಾರಿಯಾಗಿತ್ತು. ಆದರೆ ಇನ್ನು ಮ್ಯಾಕ್ಸರ್ ಮೇಲೆ ಅವಲಂಬಿತ ಆಗಿರದೇ ಸ್ವದೇಶಿ 'ದೃಷ್ಟಿ'ಯಿಂದ ಹೈರೆಸಲ್ಯೂಷನ್ ಚಿತ್ರ ಪಡೆಯಬಹುದು.

ಮ್ಯಾಕ್ಸರ್‌ಗೆ ಟಕ್ಕರ್

ಈವರೆಗೆ ಭಾರತವು ಅಮೆರಿಕದ ವ್ಯಾಂಟರ್ (ಹಿಂದಿನ ಮ್ಯಾಕ್ಸಾರ್) ಕಂಪನಿ ತೆಗೆದ ಉಪಗ್ರಹ ಚಿತ್ರಗಳನ್ನು ಪಡೆಯುತ್ತಿತ್ತು. ಇದು 30 ಸೆಂ. ಮೀ.ನಷ್ಟು 'ಝೂಂ' ಮಾಡಬಹುದಾದ ಚಿತ್ರಗಳನ್ನು ಒದಗಿಸುತ್ತದೆ. ಆದರೆ ಯುದ್ಧದಂತಹ ಸಂದರ್ಭಗಳಲ್ಲಿ ನಮಗೆ ವೈರಿರಾಷ್ಟ್ರದ ಪ್ರಮುಖ ಪ್ರದೇಶಗಳ ಜಾಗಗಳ ಚಿತ್ರ ಬೇಕಿದ್ದಾಗ ಅದನ್ನು ಹಂಚಿಕೊಳ್ಳದಂತೆ ಅಲ್ಲಿನ ಸರ್ಕಾರ ತಡೆಯುವ ಸಾಧ್ಯತೆ ಇರುತ್ತದೆ. ಜತೆಗೆ, ಅದು ಪಾಕ್, ಚೀನಾದಂತಹ ರಾಷ್ಟ್ರಗಳಿಗೂ ಭಾರತದ ಚಿತ್ರಗಳನ್ನು ಮಾರುತ್ತದೆ ಎಂಬುದರಲ್ಲಿ ಸಂದೇಹವೇ ಇಲ್ಲ. ಹೀಗಿರುವಾಗ, ಭಾರತ ತನಗೆ ಬೇಕಾಗುವ ಯಾವುದೇ ಚಿತ್ರಗಳನ್ನು ಪಡೆಯಲು ಇನ್ನು ಮುಂದೆ ಮ್ಯಾಕ್ಸಾರ್‌ಅನ್ನು ಬಿಟ್ಟು ಸ್ವದೇಶಿ 'ದೃಷ್ಟಿ'ಯನ್ನು ಅವಲಂಬಿಸಬಹುದು. ಜತೆಗೆ ಯಾವುದೇ ನಿರ್ಬಂಧಗಳಿಲ್ಲದೆ ವೈರಿರಾಷ್ಟ್ರಗಳ ಗಡಿಯೊಳಗೆ ಇಣುಕಬಹುದು.